# www.karunaduexams.com

ಪ್ರಚಲಿತ ವಿದ್ಯಮಾನಗಳು- ಅಕ್ಟೋಬರ್, 2016

www.karunaduexams.com

# Contents

ಅಂತರ್ ರಾಷ್ಟ್ರೀಯ ........ 2

ಪ್ರಶಸ್ತಿಗಳು ........ 9

ಪರಿಸರ ........ 22

ಸುದ್ದಿಯಲ್ಲಿರುವ ವ್ಯಕ್ತಿಗಳು ........ 27

ವ್ಯವಹಾರ ........ 31

ರಾಜ್ಯ ಸರ್ಕಾರದ-ಯೋಜನೆಗಳು ........ 47

ಕೇಂದ್ರ ಸರ್ಕಾರದ-ಯೋಜನೆಗಳು ........ 53

ವಿಜ್ಞಾನ-ತಂತ್ರಜ್ಞಾನ ........ 63

ವಿಶೇಷ ದಿನ ........ 72

ಇತರೆ ........ 79

ಹೆಚ್ಚಿನ ಮಾಹಿತಿಗಾಗಿ ,

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ, WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mobile: +91- 98805 33259 (Content related queries)

Mobile: +91-9844915689 (Technical and Marketing related queries)

Mobile:+91-9972355744(Management related queries)

www.karunanduexams.com

# ಅಂತರ್ ರಾಷ್ಟ್ರೀಯ

## ಪ್ಯಾರಿಸ್ ಹವಾಮಾನ ಒಪ್ಪಂದವನ್ನು ಅನುಮೋದಿಸಿದ ಭಾರತ

ಜಾಗತಿಕ ತಾಪಮಾನ ತಗ್ಗಿಸುವ ಐತಿಹಾಸಿಕ ಪ್ಯಾರಿಸ್ ಹವಾಮಾನ ಒಪ್ಪಂದವನ್ನು ಭಾರತ ಅಂಗೀಕರಿಸಿತು. ಮಹಾತ್ಮ ಗಾಂಧಿ ಅವರ 147ನೇ ಜನ್ಮದಿನದಂದು ಈ ಮಹತ್ವದ ನಿರ್ಣಯಕ್ಕೆ ಭಾರತ ಕೈಜೋಡಿಸಿತು. ನಿರ್ಣಯವನ್ನು ಭಾರತ ಅಂಗೀಕರಿಸಿದ್ದರ ಕುರಿತಾಗಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಸಹಿ ಇರುವ ಅಂಗೀಕಾರದ ಪತ್ರವನ್ನು ವಿಶ್ವಸಂಸ್ಥೆಯಲ್ಲಿನ ಭಾರತದ ರಾಯಭಾರಿ ಸಯ್ಯದ್ ಅಕರುದ್ದೀನ್ ಅವರು ವಿಶ್ವಸಂಸ್ಥೆಗೆ ಹಸ್ತಾಂತರಿಸಿದರು. ಆ ಮೂಲಕ ಪ್ಯಾರಿಸ್ ಒಪ್ಪಂದವನ್ನು ಅನುಮೋದಿಸಿದ 62ನೇ ರಾಷ್ಟ್ರ ಭಾರತ ಆಗಿದೆ. ಈ 62 ರಾಷ್ಟ್ರಗಳು ಒಟ್ಟಾರೆಯಾಗಿ ಜಾಗತಿಕ ಮಟ್ಟದಲ್ಲಿ ಶೇ 52% ಹಸಿರು ಮನೆ ಅನಿಲವನ್ನು ಹೊರಸೂಸುತ್ತಿವೆ.

- ಪ್ಯಾರಿಸ್ ಒಪ್ಪಂದ ಜಾರಿಗೆ ಬರಲು ಹಸಿರು ಮನೆ ಅನಿಲವನ್ನು ಹೊರಸೂಸುತ್ತಿರುವ ರಾಷ್ಟ್ರಗಳ ಕೊಡುಗೆಯ ಮಿತಿ ಶೇ 55% ರಷ್ಟಿರಬೇಕು.
- ಇಂಗಾಲ ಹೊರಸೂಸುವಿಕೆಯ ಒಟ್ಟು ಪ್ರಮಾಣದಲ್ಲಿ ಭಾರತದ ಪಾಲು ಶೇ 4.1% ರಷ್ಟಿದೆ. ಯುರೋಪಿನ್ ಒಕ್ಕೂಟ ಸಹ ಒಪ್ಪಂದವನ್ನು ಅನುಮೋದಿಸಲು ನಿರ್ಣಯಿಸಿದ್ದು ಒಂದು ವೇಳೆ ಅನುಮೋದಿಸಿದರೆ ಒಪ್ಪಂದ ಜಾರಿ ಹಾದಿ ಸುಗಮವಾಗಲಿದೆ.
- ಪ್ಯಾರಿಸ್ ಸಮ್ಮೇಳನದ ಒಪ್ಪಂದದಲ್ಲಿ 2020ರ ಒಳಗಾಗಿ ಹಸಿರು ಮನೆ ಅನಿಲ ಪರಿಣಾಮ ತಗ್ಗಿಸುವುದು, ಭೂಮಿಯ ಒಟ್ಟಾರೆ ಶಾಖವನ್ನು 2 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ಇಡುವುದು. ಮರುಬಳಕೆಯ ಇಂಧನ ಇತ್ಯಾದಿಗಳ ಕುರಿತಾಗಿದೆ.

## 2018ರ ಡಿಸೆಂಬರ್ ವೇಳೆಗೆ ಭಾರತ-ಪಾಕಿಸ್ತಾನ ಗಡಿ ಸಂಪೂರ್ಣ ಬಂದ್

2018ರ ಡಿಸೆಂಬರ್ ವೇಳೆಗೆ ಭಾರತ- ಪಾಕ್ ಗಡಿಯನ್ನು ಸಂಪೂರ್ಣವಾಗಿ ಬಂದ್ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಹೇಳಿಸಿದ್ದಾರೆ. ಪಾಕಿಸ್ತಾನದೊಂದಿಗೆ ಗಡಿಯನ್ನು ಹಂಚಿಕೊಳ್ಳುವ ನಾಲ್ಕು ರಾಜ್ಯಗಳ ಪ್ರತಿನಿಧಿಗಳೊಂದಿಗೆ ರಾಜಸ್ತಾನದ ಜೈಸಲ್ಮೆರ್ ನಲ್ಲಿ ನಡೆದ ಸಭೆಯ ವೇಳೆ ಈ ವಿಷಯವನ್ನು ಬಹಿರಂಗಪಡಿಸಿದರು.

ಪ್ರಮುಖಾಂಶಗಳು:

- ಭಾರತ ಮತ್ತು ಪಾಕಿಸ್ತಾನ ನಡುವಿನ 3,323 ಕಿ.ಮೀ ಉದ್ದದ ಗಡಿಯನ್ನು ಕಾಲಮಿತಿಯೊಳಗೆ ಸಂಪೂರ್ಣವಾಗಿ ಮುಚ್ಚಲು ಕ್ರಿಯಾಯೋಜನೆಯನ್ನು ಕೇಂದ್ರ ಸರ್ಕಾರ ಈಗಾಗಲೇ ತಯಾರಿಸಿದೆ.
- ಗಡಿಯನ್ನು ಮುಚ್ಚುವ ಪ್ರಕ್ರಿಯೆಯನ್ನು ಕೇಂದ್ರ ಗೃಹ ಸಚಿವಾಲಯ, ಗಡಿ ಭದ್ರತಾ ಪಡೆ ಮತ್ತು ನಾಲ್ಕು ರಾಜ್ಯಗಳ ಪ್ರಧಾನ ಕಾರ್ಯದರ್ಶಿಗಳ ಮಟ್ಟದಲ್ಲಿ ನಿರ್ವಹಿಸಲಾಗುವುದು.
- ಇದರ ಜೊತೆಗೆ "ಗಡಿ ಭದ್ರತಾ ಗ್ರಿಡ್" ಎಂಬ ಹೊಸ ಪರಿಕಲ್ಪನೆಯನ್ನು ರೂಪಿಸಲಾಗಿದ್ದು, ಗಡಿ ಭದ್ರತೆಗೆ ಸಂಬಂಧಿಸಿದ ಪ್ರತಿಯೊಬ್ಬರು ಇರಲಿದ್ದಾರೆ. ಇವರ ಸಲಹೆಗಳನ್ನು ಆಧರಿಸಿ "ಗಡಿ ಭದ್ರತಾ ಗ್ರಿಡ್"ಗೆ ಅಂತಿಮ ರೂಪುರೇಶೆಗಳನ್ನು ನೀಡಲಾಗುವುದು.

**ಹಿನ್ನಲೆ**:

- ಭಾರತ ಮತ್ತು ಪಾಕಿಸ್ತಾನ ಅಂತಾರಾಷ್ಟ್ರೀಯ ಗಡಿ ಎನಿಸಿಕೊಂಡಿರುವ 3,323 ಕಿ.ಮೀ ಉದ್ದದ ಗಡಿ ಹಂಚಿಕೊಂಡಿವೆ. ಉಭಯ ದೇಶಗಳ ನಡುವಿನ ಗಡಿಯನ್ನು 1947ರ ರಾಡ್ಕ್ಲಿಫ್ ಲೈನ್ ಆಧಾರದ ಮೇಲೆ ರಚಿಸಲಾಗಿದೆ.

- ಜಮ್ಮು & ಕಾಶ್ಮೀರ (1225 ಕಿ.ಮೀ), ರಾಜಸ್ತಾನ (1037 ಕಿ.ಮೀ), ಪಂಜಾಬ್ (553 ಕಿ.ಮೀ) ಮತ್ತು ಗುಜರಾತ್ (508 ಕಿ.ಮೀ) ಗಡಿಯನ್ನು ಪಾಕಿಸ್ತಾನದೊಂದಿಗೆ ಹಂಚಿಕೊಂಡಿರುವ ರಾಜ್ಯಗಳು.
- 3,323 ಕಿ.ಮೀ ಗಡಿ ಉದ್ದದ ಪೈಕಿ ಗಡಿ ಭದ್ರತಾ ಪಡೆ (Border Security Force) 2308 ಕಿ.ಮೀ ಗಡಿಯನ್ನು ಕಾಯುವ ಜವಾಬ್ದಾರಿ ಹೊತ್ತಿದೆ. ಕಾಶ್ಮೀರ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರವನ್ನು ಬೇರ್ಪಡಿಸುವ 740 ಕಿ.ಮೀ ಗಡಿ ನಿಯಂತ್ರಣ ರೇಖೆಗೆ ಭಾರತೀಯ ಸೇನೆಯಿಂದ ಭದ್ರತೆ ಒದಗಿಸಲಾಗಿದೆ.

**ಕೊಲಂಬಿಯಾ ಅಧ್ಯಕ್ಷ ಜುವಾನ್ ಮ್ಯಾನ್ಯುಯಲ್ ಸ್ಯಾಂಟೋಸ್ ಗೆ ನೊಬೆಲ್ ಶಾಂತಿ**

2016ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಕೊಲಂಬಿಯಾದ ಅಧ್ಯಕ್ಷ ಜುವಾನ್ ಮ್ಯಾನ್ಯುಯಲ್ ಸ್ಯಾಂಟೋಸ್ ಅವರಿಗೆ ನೀಡಲಾಗಿದೆ. ಕೊಲಂಬಿಯಾದಲ್ಲಿ ಸುಮಾರು 50 ವರ್ಷಗಳ ಸುದೀರ್ಘ ದಂಗೆಯನ್ನು ಕೊನೆಗಾಣಿಸಿ ಶಾಂತಿ ನೆಲೆಸಲು ಶ್ರಮಿಸಿದಕ್ಕಾಗಿ ಈ ನೊಬೆಲ್ ಶಾಂತಿ ಪಾರಿತೋಷಕಕ್ಕೆ ಆಯ್ಕೆ ಮಾಡಲಾಗಿದೆ. ಗ್ಯಾಬ್ರಿಯಲ್ ಗ್ರಸಿಯಾ ಮಾರ್ಕ್ವೆಜ್ ನಂತರ ನೊಬೆಲ್ ಪ್ರಶಸ್ತಿಗೆ ಭಾಜನರಾದ ಕೊಲಂಬಿಯಾದ ಎರಡನೇಯವರು. ಗ್ಯಾಬ್ರಿಯಲ್ ಗ್ರಸಿಯಾ ಮಾರ್ಕ್ವೆಜ್ ಅವರಿಗೆ 1982 ರಲ್ಲಿ ಸಾಹಿತ್ಯ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿತ್ತು. ಅಲ್ಲದೇ, ಸ್ಯಾಂಟೋಸ್ ಅವರು ನೊಬೆಲ್ ಪ್ರಶಸ್ತಿಯನ್ನ ಪಡೆದುಕೊಂಡ ಲ್ಯಾಟಿನ್ ಅಮೆರಿಕಾದ ಎರಡನೇಯವರು. 1992ರಲ್ಲಿ ಗ್ವಾಟೆಮಾಲದ ರಿಗೊಬೆರ್ಟ ಮೆಂಚು ನೊಬೆಲ್ ಪ್ರಶಸ್ತಿ ಪಡೆದ ಲ್ಯಾಟಿನ್ ಅಮೆರಿಕಾದ ಮೊದಲನೇಯವರು.

**ಶಾಂತಿ ಒಪ್ಪಂದ**

ಸ್ಯಾಂಟೋಸ್ ಅವರು ಸೇನೆ ಹಾಗೂ ಎಫ್ ಎಆರ್ ಸಿ (FARC) ಬಂಡುಕೋರರ ನಡುವೆ ಕೊಲಂಬಿಯಾದಲ್ಲಿ ನಡೆಯುತ್ತಿದ್ದ ಸಂಘರ್ಷಕ್ಕೆ ಕೊನೆಗೊಳಿಸಿ ಶಾಂತಿಗಾಗಿ ಪ್ರಯತ್ನ ಪಟ್ಟಿದ್ದರು. ಇವರ ಪ್ರಯತ್ನದಿಂದಾಗಿ FARC ಮತ್ತು ಸರ್ಕಾರದ ನಡುವೆ ಶಾಂತಿ ಒಪ್ಪಂದ ಏರ್ಪಟ್ಟಿತ್ತು. ಆದರೆ ಅಕ್ಟೋಬರ್ 2016ರಲ್ಲಿ ಕೊಲಂಬಿಯನ್ನರು ಈ ಒಪ್ಪಂದವನ್ನು ತಿರಸ್ಕರಿಸಿದ್ದಾರೆ.

**ಜುವಾನ್ ಮ್ಯಾನ್ಯುಯಲ್ ಸ್ಯಾಂಟೋಸ್:**

- ಸ್ಯಾಂಟೋಸ್ ಅವರು 10ನೇ ಆಗಸ್ಟ್ 1951 ರಲ್ಲಿ ಕೊಲಂಬಿಯಾದ ರಾಜಧಾನಿ ಬೊಗೊಟದಲ್ಲಿ ಜನಿಸಿದರು.
- 2010 ರಲ್ಲಿ ಮೊದಲ ಬಾರಿಗೆ ಕೊಲಂಬಿಯಾದ ಅಧ್ಯಕ್ಷರಾಗಿ ನೇಮಕಗೊಂಡರು. ಆ ನಂತರ 2014ರಲ್ಲಿ ಎರಡನೇ ಬಾರಿಗೆ ಅಧ್ಯಕ್ಷರಾಗಿ ಪುನರ್ ಆಯ್ಕೆಯಾದರು.
- ಅಧ್ಯಕ್ಷರಾಗುವ ಮುಂಚೆ ರಕ್ಷಣ ಸಚಿವರಾಗಿ 2006 ರಿಂದ 2009 ರವರೆಗೆ ಸೇವೆ ಸಲ್ಲಿಸಿದ್ದರು.

**ಭಾರತ-ಸಿಂಗಾಪುರ ನಡುವೆ ಮೂರು ಒಪ್ಪಂದಕ್ಕೆ ಸಹಿ**

ಭಾರತ ಮತ್ತು ಸಿಂಗಾಪುರ ನಡುವೆ ಮೂರು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಕೌಶಲ್ಯ ಅಭಿವೃದ್ದಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎರಡು ಒಪ್ಪಂದಗಳು ಸೇರಿದಂತೆ ಒಟ್ಟು ಮೂರು ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಪ್ರಧಾನಿ ನರೇಂದ್ರ ಮೋದಿ ಹಾಗೂ ದಿಲ್ಲಿಗೆ ಭೇಟಿ ನೀಡಿರುವ ಸಿಂಗಾಪುರದ ಪ್ರಧಾನಿ ಲೀ ಹ್ಸೀನ್ ಲೂಂಗ್ ನೇತೃತ್ವದ ನಿಯೋಗಗಳ ಮಟ್ಟದ ಮಾತುಕತೆಯ ಬಳಿಕ, ಉಭಯ ದೇಶಗಳು ನವದೆಹಲಿಯಲ್ಲಿ ಮೂರು ಒಪ್ಪಂದಗಳಿಗೆ ಸಹಿ ಹಾಕಿವೆ.

**ಒಪ್ಪಂದಗಳು:**

- ಕೈಗಾರಿಕಾ ಆಸ್ತಿ ಸಹಕಾರ ಒಪ್ಪಂದ: ಕೈಗಾರಿಕ ನೀತಿ ಮತ್ತು ಪ್ರಚಾರ ಇಲಾಖೆ ಹಾಗೂ ಭೌದ್ದಿಕ ಆಸ್ತಿ ಕಚೇರಿ, ಸಿಂಗಾಪುರ ನಡುವೆ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.



www.karunaduexams.com

- ತಾಂತ್ರಿಕ, ವೃತ್ತಿ ಶಿಕ್ಷಣ ಮತ್ತು ತರಬೇತಿ ಕ್ಷೇತ್ರದಲ್ಲಿ ಒಪ್ಪಂದ: ಸಿಂಗಾಪುರದ ತಾಂತ್ರಿಕ ಶಿಕ್ಷಣ ಸಂಸ್ಥೆ(ಐಟಿಇ) ಶಿಕ್ಷಣ ಸೇವೆಗಳು(ಐಟಿಇಇಎಸ್) ಹಾಗೂ ಭಾರತದ ಕೌಶಲಾಭಿವೃದ್ಧಿ ನಿಗಮಗಳು ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣ ಮತ್ತು ತರಬೇತಿಯ ಸಂಬಂಧ ತಿಳುವಳಿಕೆ ಪತ್ರವೊಂದಕ್ಕೆ ಸಹಿ ಹಾಕಿವೆ.
- ತಾಂತ್ರಿಕ, ವೃತ್ತಿ ಶಿಕ್ಷಣ ಮತ್ತು ತರಬೇತಿ ಕ್ಷೇತ್ರದಲ್ಲಿ ಒಪ್ಪಂದ: ಅಸ್ಸಾಂ ಸರ್ಕಾರ ಮತ್ತು ಐಟಿಇಇಎಸ್, ಸಿಂಗಾಪುರ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

## ಎಲ್ಇಡಿ ಕಾರ್ಯಕ್ರಮ ಅನುಷ್ಠಾನಕ್ಕೆ ಭಾರತದೊಂದಗಿ ಕೈಜೋಡಿಸಿದ ಅಂತಾರಾಷ್ಟ್ರೀಯ

ಭಾರತ ಸರ್ಕಾರದ ಪ್ರಮುಖ ಯೋಜನೆಗಳಲ್ಲಿ ಒಂದಾದ ಉನ್ನತ್ ಜ್ಯೋತಿ (UJALA)ಯಡಿ ಕೈಗೆಟುಕುವ ದರದಲ್ಲಿ ಎಲ್ಇಡಿ ಬಲ್ಬಗಳನ್ನು ವಿತರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅಂತಾರಾಷ್ಟ್ರೀಯ ಇಂಧನ ಸಂಸ್ಥೆ (International Energy Agency) ಭಾರತದೊಂದಿಗೆ ಕೈಜೋಡಿಸಿದೆ. ಎಲ್ಇಡಿ ಬಲ್ಬಗಳನ್ನು ಕೈಗೆಟುಕುವ ದರದಲ್ಲಿ ವಿತರಿಸುವ ಮೂಲಕ ಇಂಧನ ಉಳಿಸುವ ಯೋಜನೆಯಿಂದ ಅಂತಾರಾಷ್ಟ್ರೀಯ ಇಂಧನ ಸಂಸ್ಥೆ ಪ್ರಭಾವಿತಗೊಂಡಿರುವ ಕಾರಣ ಭಾರತದೊಂದಿಗೆ ಕೈಜೋಡಿಸಲು ಮುಂದೆ ಬಂದಿದೆ.

**ಪ್ರಮುಖಾಂಶಗಳು**:

- ಉಜಾಲ ಯೋಜನೆಯನ್ನು ಕೇಂದ್ರ ಇಂಧನ ಸಚಿವಾಲಯದಡಿ ಕಾರ್ಯನಿರ್ವಹಿಸುವ “ಎನರ್ಜಿ ಎಫಿಶಿಯೆನ್ಸಿ ಸರ್ವೀಸ್ ಲಿಮಿಟೆಡ್ (EESL)” ಅನುಷ್ಠಾನಗೊಳಿಸುತ್ತಿದೆ.
- ಈ ಯೋಜನೆಯಡಿ EESL ಎಲ್ಇಡಿ ಬಲ್ಬ್ ಗಳನ್ನು ಖರೀದಿಸುತ್ತಿರುವ ದರವು ಕಳೆದೆರಡು ವರ್ಷಗಳಿಂದ ಗಣನೀಯವಾಗಿ ಕಡಿಮೆಯಾಗುತ್ತಿದೆ. ಅಲ್ಲದೇ ಬಲ್ಬ್ ಗಳ ಉತ್ಪಾದನೆ ಕೂಡ ಗಮನಾರ್ಹವಾಗಿ ಏರಿಕೆಯಾಗಿದೆ. 2014ರಲ್ಲಿ ಪ್ರತಿ ತಿಂಗಳಿಗೆ 10 ಲಕ್ಷ ಬಲ್ಬ್ ಗಳನ್ನು ಉತ್ಪಾದಿಸಲಾಗುತ್ತಿತ್ತು, ಈಗ 4 ಕೋಟಿ ಬಲ್ಬ್ ಗಳನ್ನು ಪ್ರತಿ ತಿಂಗಳು ಉತ್ಪಾದಿಸಲಾಗುತ್ತಿದೆ.

**ಉಜಾಲಾ ಯೋಜನೆ ಬಗ್ಗೆ**:

- ಉಜಾಲಾ (Unnat Jyoti by Affordable LEDs for All (UJALA)) ಎಲ್ಇಡಿ ಆಧರಿತ ದೇಶಿಯ ಪರಿಣಾಮಕಾರಿ ಬೆಳಕಿನ ಕಾರ್ಯಕ್ರಮ. ವಿದ್ಯುತ್ ಶಕ್ತಿಯ ಸದ್ಬಳಕೆ ಮತ್ತು ಉಳಿತಾಯ ಮಾಡುವುದು ಈ ಯೋಜನೆಯ ಮುಖ್ಯ ಗುರಿ.
- ಜನವರಿ 2015 ರಲ್ಲಿ ರಾಷ್ಟ್ರೀಯ ಎಲ್ಇಡಿ ಕಾರ್ಯಕ್ರಮವಾಗಿ ಪ್ರಧಾನಿ ಮೋದಿ ರವರು ಇದಕ್ಕೆ ಚಾಲನೆ ನೀಡಿದರು. ಆನಂತರ ಮಾರ್ಚ್ 2016ರಲ್ಲಿ ಉಜಾಲಾ ಎಂದು ಹೆಸರಿಡಲಾಯಿತು.
- ಈ ಯೋಜನೆಯಡಿ ಸಂಬಂಧಿಸಿದ ವಿದ್ಯುತ್ ಪ್ರಸರಣ ಕಂಪನಿ ಮೂಲಕ ಮೀಟರ್ ಹೊಂದಿರುವ ಮನೆಗಳಿಗೆ ಕಡಿಮೆ ದರದಲ್ಲಿ ಎಲ್ಇಡಿ ಬಲ್ಬ್ ಗಳನ್ನು ವಿತರಿಸಲಾಗುವುದು.

**ಉಪಯೋಗಗಳು**:

- ವಿದ್ಯುತ್ ಶಕ್ತಿ ಉಳಿತಾಯ, ಗ್ರಾಹಕರಿಗೆ ಕಡಿಮೆ ವಿದ್ಯುತ್ ಬಿಲ್ ಹೊರೆ ಮತ್ತು ಹಸಿರು ಮನೆ ಅನಿಲ ಹೊರಸೂಸುವಿಕೆ ಪ್ರಮಾಣ ತಗ್ಗಲಿದೆ.
- ಎಲ್ಇಡಿ ಬಲ್ಬ್ ಗಳು ಸಾಮಾನ್ಯ ಬಲ್ಬಗಳಿಗಿಂತ ಐವತ್ತು ಪಟ್ಟು ಹೆಚ್ಚು ಪಟ್ಟು ಬಾಳಿಕೆ ಬರಲಿವೆ. ಸಿಎಫ್ಎಲ್ ಬಲ್ಬಗಳಿಗಿಂತ 8-10 ಪಟ್ಟು ಹೆಚ್ಚು ಕಾಲ ಬಾಳಿಕ ಬರಲಿವೆ.

## “S-400” ವಾಯು ರಕ್ಷಣಾ ವ್ಯವಸ್ಥೆ ಖರೀದಿಸಲು ರಷ್ಯಾದೊಂದಿಗೆ ಭಾರತ ಒಪ್ಪಂದ

www.karunaduexams.com

ರಷ್ಯಾದಿಂದ ಐದು ಅತ್ಯಾಧುನಿಕ "ಎಸ್-400" ಟ್ರಯಂಪ್ ವಾಯು ರಕ್ಷಣಾ ವ್ಯವಸ್ಥೆಯನ್ನು ಖರೀದಿಸುವುದು ಸೇರಿದಂತೆ ಸುಮಾರು 39,000 ಕೋಟಿ ಮೊತ್ತದ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಒಪ್ಪಂದಕ್ಕೆ ಭಾರತ ಸಹಿಹಾಕಿದೆ. ಅಲ್ಲದೇ ನಾಲ್ಕು ರಹಸ್ಯ ಯುದ್ಧನೌಕೆಗಳ ಅಭಿವೃದ್ಧಿಗೆ ಕೈಜೋಡಿಸುವುದು ಮತ್ತು ಮೇಕ್ ಇನ್ ಇಂಡಿಯಾ ಯೋಜನೆಯಡಿ ಕಮಾವ್ 226ಟಿ ಹೆಲಿಕಾಪ್ಟರ್ ಅನ್ನು ಭಾರತದಲ್ಲಿ ತಯಾರಿಸುವುದು ಒಪ್ಪಂದಲ್ಲಿ ಸೇರಿವೆ. ಈ ಸಂಬಂಧ ಉಭಯ ದೇಶಗಳ ನಡುವೆ ಅಂತರ್ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

**"ಎಸ್-400" ಟ್ರಯಂಪ್ ವಾಯು ರಕ್ಷಣಾ ವ್ಯವಸ್ಥೆ":**

- ಎಸ್-400 ಅಥವಾ ಟ್ರಯಂಫ ಇದು ಜಗತ್ತಿನ ಅತ್ಯಾಧುನಿಕ ಭಾರಿ ಸಾಮರ್ಥ್ಯದ ದೂರಗಾಮಿ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆ. ನಾಟೋ ಇದನ್ನು ಎಸ್ಎ-21 ಎಂತಲೂ ಕರೆಯುತ್ತಿದೆ.
- ಇದು ಎಸ್-300 ವಾಯು ರಕ್ಷಣಾ ವ್ಯವಸ್ಥೆಯ ಮುಂದುವರೆದ ತಂತ್ರಜ್ಞಾನವಾಗಿದ್ದು, ಅಲ್ಮಝ್-ಅಂಟೇ ಅಭಿವೃದ್ದಿಪಡಿಸಿದೆ. 2007 ರಿಂದ ರಷ್ಯಾ ಮಿಲಿಟರಿ ಸೇವೆಯಲ್ಲಿ ಇದನ್ನು ಬಳಸಲಾಗುತ್ತಿದೆ.
- ವಿಭಿನ್ನ ಸಾಮರ್ಥ್ಯಗಳಿರುವ ಮೂರು ಕ್ಷಿಪಣಿಗಳನ್ನು ಇದು ಹೊಂದಿದೆ. ಒಂದೇ ಬಾರಿಗೆ 36 ಕಡೆಗೆ ಗುರಿಯಿಡುವ ಸಾಮರ್ಥ್ಯ ಹೊಂದಿದೆ.
- ಒಳ ಬರುವ ಶತ್ರು ವಿಮಾನಗಳು, ರಹಸ್ಯ ಕಾರ್ಯಾಚರಣೆ ವಿಮಾನಗಳು, ಕ್ಷಿಪಣಿ ಹಾಗೂ ಡ್ರೋನ್‌ಗಳನ್ನು ಹೊಡೆದುರುಳಿಸುವ ಸಾಮರ್ಥ್ಯ ಮತ್ತು ಸೂಪರ್‌ಸಾನಿಕ್ ಮತ್ತು ಹೈಪರ್‌ಸಾನಿಕ್ ವೇಗದಲ್ಲಿ (ಶಬ್ದಾತೀತಿ ವೇಗ) 120ರಿಂದ 400 ಕಿ.ಮೀ. ವ್ಯಾಪ್ತಿಯಲ್ಲಿರುವ ವೈರಿಯನ್ನು ಛಿದ್ರಗೊಳಿಸುತ್ತದೆ.

**Ka-226T ಹೆಲಿಕಾಪ್ಟರ್:**

- ಕೆಎ-226ಟಿ ಅಥವಾ ಕಮಾವ್ ವಿವಿಧೋದ್ದೇಶ ಲಘು ಹೆಲಿಕಾಪ್ಟರ್ ಆಗಿದ್ದು, ಎತ್ತರದ ಪರ್ವತ, ಬಿಸಿ ವಾತಾವರಣ ಮತ್ತು ಸಮುದ್ರ ಸ್ಥಳಗಳಲ್ಲಿ ಬಳಸಲು ವಿನ್ಯಾಸಗೊಳಿಸಲಾಗಿದೆ.
- ಈ ಹೆಲಿಕಾಪ್ಟರ್ ಗಳನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ರಷ್ಯಾದ ಸಹಕಾರದೊಂದಿಗೆ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದಡಿ ಅಭಿವೃದ್ಧಿಪಡಿಸಲಾಗುವುದು. ಚೇತಕ್ ಮತ್ತು ಚೇತ ಹೆಲಿಕಾಪ್ಟರ್ ಗಳ ಬದಲಾಗಿ ಈ ಹೆಲಿಕಾಪ್ಟರ್ ಬಳಸಲಾಗುವುದು.
- ಸುಮಾರು 20,000 ಅಡಿ ಎತ್ತರದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿರುವ ಕಮಾವ್ ಹೆಲಿಕಾಪ್ಟರ್ ಗಳು ಸಿಯಾಚಿನ್ ಗ್ಲೇಸಿಯರ್ ನಲ್ಲಿ ಸೇನಾ ಕಾರ್ಯಕ್ಕೆ ನೆರವಾಗಲಿವೆ.

**ಯುದ್ದನೌಕೆ(frigates):**

- ಭಾರತ ಮತ್ತು ರಷ್ಯಾ ನಾಲ್ಕು ರಹಸ್ಯ ಯುದ್ದನೌಕೆಗಳನ್ನು ತಯಾರಿಸಲಿದ್ದು, ತಲ್ವಾರ್ ಕ್ಲಾಸ್ ಯುದ್ದನೌಕೆಗಳಿಗಿಂತಲೂ ಉನ್ನತ ತಂತ್ರಜ್ಞಾನವನ್ನು ಹೊಂದಿರಲಿವೆ.
- ಇವುಗಳ ಪೈಕಿ ಎರಡು ಯುದ್ದನೌಕೆಗಳನ್ನು ರಷ್ಯಾ ಅಭಿವೃದ್ಧಿಪಡಿಸಿದರೆ ಉಳಿದ ಎರಡು ಯುದ್ದನೌಕೆಗಳನ್ನು ರಷ್ಯಾ ಸಹಕಾರದೊಂದಿಗೆ ಭಾರತದಲ್ಲಿ ತಯಾರಿಸಲಾಗುವುದು.

**ಭಾರತ ಮತ್ತು ರಷ್ಯಾ ನಡುವೆ ವಿವಿಧ ಕ್ಷೇತ್ರಗಳಲ್ಲಿ 16 ಒಪ್ಪಂದಗಳಿಗೆ ಸಹಿ**

www.karunaduexams.com

ಭಾರತ ಪ್ರಧಾನಿ ನರೇಂದ್ರ ಮೋದಿ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಶಿಕ್ಷಣ, ರಕ್ಷಣೆ ಸೇರಿದಂತೆ ಸುಮಾರು 16 ಮಹತ್ವದ ಒಪ್ಪಂದಗಳಿಗೆ ಪರಸ್ಪರ ಸಹಿಹಾಕಿದ್ದಾರೆ. ಪ್ರಮುಖವಾಗಿ ರಕ್ಷಣ ಕ್ಷೇತ್ರ, ಶಿಕ್ಷಣ ಕ್ಷೇತ್ರ, ಸ್ಮಾರ್ಟ್ ಸಿಟಿ ಯೋಜನೆ ಹಾಗೂ ಭಾರತದಲ್ಲಿ ನೈಸರ್ಗಿಕ ಅನಿಲ ಉತ್ಪಾದನೆ ಕುರಿತ ಒಪ್ಪಂದಗಳಿಗೆ ಸಹಿ ಹಾಕಲಾಗಿದ್ದು, ಇದಲ್ಲದೆ ಕೂಡಂಕುಳಂ ಅಣುಸ್ಥಾವರ 2ನೇ ಘಟಕ ನಿರ್ಮಾಣ ಹಾಗೂ ಭಾರತದ ರೈಲ್ವೇ ಕ್ಷೇತ್ರದಲ್ಲಿ ರಷ್ಯಾ ಬಂಡವಾಳ ಹೂಡುವ ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

**ಇಂಡೋ-ರಷ್ಯಾ ಪ್ರಮುಖ ಒಪ್ಪಂದಗಳು ಇಂತಿವೆ.**

- 2016-17 ಶಕ್ತಿ ಸಹಕಾರ ಒಪ್ಪಂದ
- ಭಾರತ ಮತ್ತು ರಷ್ಯಾ ವಿದೇಶಾಂಗ ಸಚಿವಾಲಯಗಳು ನಡುವೆ ಶಿಷ್ಟಾಚಾರ ಸಮಾಲೋಚನೆ
- ಸೈಬರ್ ಭದ್ರತಾ ಒಪ್ಪಂದ
- ರಷ್ಯಾ ಯುದ್ಧನೌಕೆಯು ಖರೀದಿ ಒಪ್ಪಂದ
- ಎಸ್-400 ಕ್ಷಿಪಣಿ ವ್ಯವಸ್ಥೆ ಖರೀದಿ ಒಪ್ಪಂದ
- ಸಮಕಾಲೀನ ಪರಿಸ್ಥಿತಿಗೆ ಅನುಗುಣವಾಗಿ ಭಾರತ-ರಷ್ಯಾ ಜಾಗತಿಕ ಭದ್ರತಾ ಜಂಟಿ ಪಾಲುದಾರಿಕೆ ಒಪ್ಪಂದ
- ಕೂಡಂಕುಳಂ ಘಟಕ 3 ಮತ್ತು 4 ಅಣು ಸ್ಥಾವರಗಳ ಒಪ್ಪಂದ
- ಕೂಡಂಕುಳಂ ಘಟಕ 2 ಶಕ್ತಿಯ ಉತ್ಪಾದನೆಯ ಪ್ರಾರಂಭ
- ಆಂಧ್ರ ಪ್ರದೇಶ ಸ್ಮಾರ್ಟ್ ಸಿಟಿ ಯೋಜನೆ
- ಆಂಧ್ರ ಪ್ರದೇಶ ಹಡಗು ತಯಾರಿಕಾ ಯೋಜನೆ
- ಹರಿಯಾಣ ಸ್ಮಾರ್ಟ್ ಸಿಟಿ ಯೋಜನೆ
- ರಾಸ್ನೆಫ್ಟ್ ಮತ್ತು ಎಸ್ಸಾರ್ ತೈಲ ಶುದ್ಧೀಕರಣ ಮೂಲಸೌಕರ್ಯ ಅಭಿವೃದ್ಧಿ
- ರಾಸ್ನೆಫ್ಟ್ ಮತ್ತು ಒವಿಎಲ್ ಇಂಧನ ಒಪ್ಪಂದ
- ನಾಗ್ಪುರ-ಸಿಕಂದರಾಬಾದ್-ಹೈದರಾಬಾದ್ ವೇಗದ ರೈಲು ಯೋಜನೆ
- ಭಾರತದಲ್ಲಿ ರಷ್ಯಾದ ಕೆಎ 226 ಹೆಲಿಕಾಪ್ಟರ್ ನಿರ್ಮಾಣ ಒಪ್ಪಂದ

**ರಷ್ಯಾದ ರೋಸ್‌ನೆಫ್ಟ್ ತೆಕ್ಕೆಗೆ ಎಸ್ಸಾರ್ ತೈಲ ಕಂಪನಿ**

ರಷ್ಯಾದ ರೋಸ್‌ನೆಫ್ಟ್ ಮತ್ತು ಅದರ ಪಾಲುದಾರ ಕಂಪೆನಿಗಳು ಖಾಸಗಿ ವಲಯದಲ್ಲಿ ಭಾರತದ ಎರಡನೇ ಅತಿದೊಡ್ಡ ತೈಲ ಕಂಪೆನಿ ಎಸ್ಸಾರ್ ಆಯಿಲ್ ಅನ್ನು ಖರೀದಿ ಮಾಡಲು ಸಮ್ಮತಿಸಿವೆ. ಸಾಲವನ್ನೂ ಒಳಗೊಂಡು ಒಟ್ಟು ರೂ 87,100 ಕೋಟಿ ಮೊತ್ತದ ಸ್ವಾಧೀನ ಒಪ್ಪಂದ ನಡೆದಿದೆ. ರೋಸ್‌ನೆಫ್ಟ್ ಮತ್ತು ಇದರ ಪಾಲುದಾರಿಕೆ ಸಂಸ್ಥೆಗಳಾದ ನೆದರ್ಲ್ಯಾಂಡ್ ಮೂಲದ ಟ್ರಾಫಿಗುರ ಮತ್ತು ಖಾಸಗಿ ಬಂಡವಾಳ ಗ್ರೂಫ್ ಯುನೈಟೆಡ್ ಕ್ಯಾಪಿಟಲ್ ಪಾರ್ಟನರ್ಸ್ ಖರೀದಿಗೆ ಕೈಜೋಡಿಸಿವೆ. ಈ ಮೊತ್ತದಲ್ಲಿ ಎಸ್ಸಾರ್ ಆಯಿಲ್ ಹೊಂದಿರುವ ಒಟ್ಟು ರೂ 40,200 ಕೋಟಿ ಸಾಲವೂ ಸೇರಿಕೊಂಡಿದೆ.

- ಈ ಮೊತ್ತವನ್ನು ಸಂಪೂರ್ಣವಾಗಿ ನಗದು ರೂಪದಲ್ಲಿ ಪಾವತಿಸಲು ಕಂಪೆನಿಗಳು ನಿರ್ಧರಿಸಿವೆ.
- ಎಸ್ಸಾರ್ ಕಂಪೆನಿಯ ಶೇ 49 ರಷ್ಟು ಷೇರುಗಳನ್ನು ರೋಸ್‌ನೆಫ್ಟ್ ಖರೀದಿ ಮಾಡಿದೆ. ರಷ್ಯಾದ ಯುನೈಟೆಡ್ ಕ್ಯಾಪಿಟಲ್ ಪಾರ್ಟ್‌ನರ್ಸ್ ಮತ್ತು ನೆದರ್‌ಲೆಂಡ್ಸ್ ಮೂಲದ ಟ್ರಾಫಿಗರ್ ಗ್ರೂಪ್ ಕಂಪೆನಿ ಶೇ 49ರಷ್ಟು ಷೇರುಗಳನ್ನು ಖರೀದಿಸಿವೆ.
- ಉಳಿದ ಶೇ 2 ರಷ್ಟು ಷೇರು ಮಾತ್ರವೇ ಎಸ್ಸಾರ್ ಆಯಿಲ್ ಬಳಿ ಇದೆ.

**ಖರೀದಿಯ ಮಹತ್ವ**:

www.karunaduexams.com

- ಇದು ದೇಶದ ಅತಿ ದೊಡ್ಡ ವಿದೇಶಿ ಸ್ವಾಧೀನವಾಗಿದೆ ಮತ್ತು ತೈಲ ಸಂಸ್ಕರಣ ವಲಯದಲ್ಲಿ ಅತಿ ದೊಡ್ಡ ವಿದೇಶಿ ಹೂಡಿಕೆ.
- ಅಲ್ಲದೇ ಈ ಖರೀದಿಯು ರಷ್ಯಾದ ಅತಿ ದೊಡ್ಡ ವಿದೇಶಿ ಸ್ವಾಧೀನ ಸಹ ಆಗಿದೆ. ಅತ್ಯಂತ ಭರವಸೆಯ ಹಾಗೂ ವೇಗವಾಗಿ ಬೆಳೆಯುತ್ತಿರುವ ವಿಶ್ವದ ಮಾರುಕಟ್ಟೆಗಳಲ್ಲಿ ಒಂದಾದ ಭಾರತದಲ್ಲಿ ಬಂಡವಾಳ ಹೂಡುವುದರಿಂದ ರೋಸ್ ನೆಫ್ಟ್ ವಿಸ್ತರಣೆಯಲ್ಲಿ ಮೈಲಿಗಲ್ಲು ಆಗಲಿದೆ. ರಾಯಲ್ ಡಚ್ ಮತ್ತು ಶೆಲ್ ಹಾಗೂ ಬ್ರಿಟಿಷ್ ಪೆಟ್ರೋಲಿಯಂ ನಂತರ ಭಾರತದ ತೈಲ ಮಾರುಕಟ್ಟೆಗೆ ಪ್ರವೇಶಿಸುತ್ತಿರುವ ಮೂರನೇ ವಿದೇಶಿ ಸಂಸ್ಥೆ ಇದಾಗಿದೆ.
- ಇವೆಲ್ಲದರ ಜೊತೆಗೆ ರಷ್ಯಾ ಮತ್ತು ಭಾರತ ನಡುವೆ ಈಗಾಗಲೇ ಚಾಲ್ತಿಯಲ್ಲಿರುವ ಒಪ್ಪಂದಗಳಿಗೆ ಮತ್ತಷ್ಟು ಬಲ ಬರಲಿದ್ದು, ಸಂಬಂಧ ಸುಧಾರಿಸಲು ಸಹಕಾರಿಯಾಗಲಿದೆ.

**ಭಾರತ-ಮ್ಯಾನ್ಮಾರ್ ನಡುವೆ ಮೂರು ಪ್ರಮುಖ ಒಪ್ಪಂದಗಳಿಗೆ ಸಹಿ**

ಭಾರತ ಮತ್ತು ಮ್ಯಾನ್ಮಾರ್ ನಡುವೆ ಮೂರು ಪ್ರಮುಖ ಒಪ್ಪಂದಗಳಿಗೆ ಸಹಿಹಾಕಲಾಗಿದೆ. ಈ ಒಪ್ಪಂದದಿಂದಾಗಿ ಉಭಯ ದೇಶಗಳ ನಡುವೆ ದ್ವಿಪಕ್ಷೀಯ ಸಂಬಂಧಗಳು ಬಲಗೊಳ್ಳಲು ಸಹಕಾರಿಯಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಭಾರತಕ್ಕೆ ಭೇಟಿ ನೀಡಿರುವ ಮ್ಯಾನ್ಮಾರ್ ನಾಯಕಿ ಆಂಗ್ ಸನ್ ಸೂಕಿ ನಡುವೆ ನಡೆದ ಮಾತುಕತೆ ಸಂದರ್ಭದಲ್ಲಿ ಈ ಮೂರು ಒಪ್ಪಂದಗಳಿಗೆ ಸಹಿ ಹಾಕಲಾಯಿತು.

**ಸಹಿಹಾಕಲಾದ ಒಪ್ಪಂದಗಳು:**

- ಮ್ಯಾನ್ಮಾರ್ ನಲ್ಲಿ ವಿಮಾ ಉದ್ಯಮ ಅಭಿವೃದ್ದಿಪಡಿಸಲು ಅಕಾಡೆಮಿ ಮತ್ತು ವೃತ್ತಿಪರ ಕಾರ್ಯಕ್ರಮವನ್ನು ವಿನ್ಯಾಸಗೊಳಿಸುವುದು.
- ಇಂಧನ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಸಂಬಂಧಿಸಿದಂತೆ ಒಪ್ಪಂದ. ಇದರಡಿ ಮಣಿಪುರದ ಮೊರೆಹ್ ನಿಂದ ಮ್ಯಾನ್ಮಾರ್ನ ಟಮು ಪ್ರದೇಶಕ್ಕೆ ವಿದ್ಯುತ್ ಪೂರೈಕೆಯನ್ನು ಹೆಚ್ಚಿಸುವುದು.
- ಬ್ಯಾಂಕಿಂಗ್ ಮೇಲ್ವಿಚಾರಣೆ ಸಂಬಂಧಿಸಿದ ಒಪ್ಪಂದ. ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಮ್ಯಾನ್ಮಾರ್ ಸೆಂಟ್ರಲ್ ಬ್ಯಾಂಕ್ ನಡುವೆ ಒಪ್ಪಂದಕ್ಕೆ ಸಹಿಹಾಕಲಾಗಿದೆ.

**ಬ್ರಹ್ಮೋಸ್ ಕ್ಷಿಪಣಿ ವ್ಯಾಪ್ತಿ ಹೆಚ್ಚಳಕ್ಕೆ ಭಾರತ-ರಷ್ಯಾ ಒಪ್ಪಿಗೆ**

ಬ್ರಹ್ಮೋಸ್ ಕ್ಷಿಪಣಿಯ ವ್ಯಾಪ್ತಿಯನ್ನು 290 ಕಿ.ಮೀ ಯಿಂದ 600 ಕಿ.ಮೀಗೆ ಹೆಚ್ಚಿಸಲು ಭಾರತ ಮತ್ತು ರಷ್ಯಾ ಒಪ್ಪಿಗೆ ಸೂಚಿಸಿವೆ. ಬ್ರಿಕ್ಸ್ ಸಮ್ಮೇಳನದ ಶೃಂಗಸಭೆಯ ನೇಪಥ್ಯದಲ್ಲಿ ಮೋದಿ ಮತ್ತು ರಷ್ಯಾದ ಅಧ್ಯಕ್ಷರಾದ ವ್ಲಾಡಿಮಿರ್ ಪುಟಿನ್ ನಡುವೆ ನಡೆದ ಮಾತುಕತೆಯಲ್ಲಿ ಈ ನಿರ್ಣಯಕ್ಕೆ ಬರಲಾಗಿದೆ.

**ನಿರ್ಣಯದ ಹಿನ್ನಲೆ:**

- ಭಾರತ ಈ ಮುಂಚೆ ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ಪದ್ದತಿ (MCTR) ಸದಸ್ಯ ರಾಷ್ಟ್ರವಲ್ಲದ ಕಾರಣ 300 ಕಿ.ಮೀ ವ್ಯಾಪ್ತಿಗಿಂತಲೂ ಮಿಗಿಲಾದ ತಂತ್ರಜ್ಞಾನವನ್ನು ಬಳಕೆ ಮಾಡುವಂತಿರಲಿಲ್ಲ. ಆದರೆ ಇತ್ತೀಚೆಗೆ ಭಾರತ MCTR ಒಪ್ಪಂದಕ್ಕೆ ಸಹಿ ಹಾಕಿ ಸದಸ್ಯತ್ವವನ್ನು ಪಡೆದುಕೊಂಡ ಕಾರಣ ರಷ್ಯಾದಿಂದ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಬಹುದಾಗಿದೆ.

**ಉಪಯೋಗ:**

www.karunaduexams.com

- ಭಾರತದ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ನಿರ್ಣಯ ಅತ್ಯಂತ ಮಹತ್ವದಾಗಿದೆ. ಕ್ಷಿಪಣಿಯ ಕಾರ್ಯಚರಣೆ ವ್ಯಾಪ್ತಿ ಹೆಚ್ಚುವುದರಿಂದ ರಕ್ಷಣಾ ಕ್ಷೇತ್ರದ ಸಾಮರ್ಥ್ಯ ಹೆಚ್ಚಲಿದೆ.

**ಬ್ರಹ್ಮೋಸ್ ಕ್ಷಿಪಣಿ:**

- ರಷ್ಯಾ-ಭಾರತ ಜಂಟಿಯಾಗಿ ಬ್ರಹ್ಮೋಸ್ ಕ್ಷಿಪಣಿಯನ್ನು ಅಭಿವೃದ್ದಿಪಡಿಸಿವೆ. ರಷ್ಯಾದ ಯಾಖೋಂಟ್ ಕ್ಷಿಪಣಿ ಆಧರಿಸಿ ವಿನ್ಯಾಸಗೊಳಿಸಲಾಗಿದೆ. ಬ್ರಹ್ಮೋಸ್ ಕ್ಷಿಪಣಿಯ ವ್ಯಾಪ್ತಿ 290 ಕಿ.ಮೀ.
- ಬ್ರಹ್ಮೋಸ್ ಸೂಪರ್‌ಸಾನಿಕ್ (ಶಬ್ದಕ್ಕಿಂತಲೂ ವೇಗವಾಗಿ ಚಲಿಸುವ) ಕ್ಷಿಪಣಿಯಾಗಿದೆ. ಭಾರತದ ಬ್ರಹ್ಮಪುತ್ರ ಮತ್ತು ರಷ್ಯಾದ ಮಾಸ್ಕವ್ ನದಿಯ ಹೆಸರನ್ನು ಇದಕ್ಕೆ ಇಡಲಾಗಿದೆ.
- ೩೦೦ ಕೆ.ಜಿ ಸಿಡಿಲ ತಲೆಯನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಈ ಕ್ಷಿಪಣಿ ಹೊಂದಿದೆ.

**<u>ಭಾರತ-ನ್ಯೂಜಿಲ್ಯಾಂಡ್ ನಡುವೆ ಮೂರು ಪ್ರಮುಖ ಒಪ್ಪಂದಕ್ಕೆ ಸಹಿ</u>**

ದುಪ್ಪಟ ತೆರಿಗೆ ತಪ್ಪಿಸುವುದು, ಕ್ರೀಡೆ ಮತ್ತು ಆಹಾರ ಭದ್ರತೆ ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಪ್ರಮುಖ ಒಪ್ಪಂದಗಳಿಗೆ ಭಾರತ-ನ್ಯೂಜಿಲ್ಯಾಂಡ್ ಸಹಿ ಹಾಕಿವೆ. ಉಭಯ ದೇಶಗಳ ನಡುವೆ ದ್ವಿಪಕ್ಷೀಯ ಸಂಬಂಧ ಉತ್ತಮಗೊಳ್ಳಲು ಈ ಒಪ್ಪಂದಗಳು ಸಹಕಾರಿಯಾಗಲಿವೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಭಾರತ ಪ್ರವಾಸದಲ್ಲಿರುವ ನ್ಯೂಜಿಲ್ಯಾಂಡ್ ನ ಪ್ರಧಾನಿ ಜಾನ್ ಕೀ ರವರ ನಡುವಿನ ನಿಯೋಗ ಮಟ್ಟದ ಮಾತುಕತೆ ನಂತರ ಈ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಇವಲ್ಲದೇ, ಭಯೋತ್ಪಾದನೆ ವಿರುದ್ದ ಹೋರಾಟ, ಸೈಬರ್ ಭದ್ರತೆ, ಶಿಕ್ಷಣ ಮತ್ತು ಆಹಾರ ಸುರಕ್ಷತೆ ಬಗ್ಗೆಯು ಚರ್ಚಿಸಲಾಯಿತು.

**ಸಹಿ ಮಾಡಲಾದ ಒಪ್ಪಂದಗಳು:**

- ಯುವ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಸಹಿ.
- ದುಪ್ಪಟ ತೆರಿಗೆ ತಪ್ಪಿಸುವುದು ಮತ್ತು ಆದಾಯ ತೆರಿಗೆಗೆ ಸಂಬಂಧಿಸಿದ ಹಣಕಾಸಿನ ವಂಚನೆ ತಡೆಗಟ್ಟಲು ಒಪ್ಪಂದಕ್ಕೆ ಸಹಿ.
- ಆಹಾರ ಸುರಕ್ಷತೆಗಾಗಿ ಭಾರತ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI) ಹಾಗೂ ನ್ಯೂಜಿಲ್ಯಾಂಡ್ನ ಪ್ರೈಮರಿ ಇಂಡಸ್ಟ್ರೀಸ್ ನಡುವೆ ಒಪ್ಪಂದಕ್ಕೆ ಸಹಿ.

www.karunaduexams.com

# ಪ್ರಶಸ್ತಿಗಳು

**ಸ್ವಚ್ಛ ಭಾರತ ಕಿರು ಚಲನಚಿತ್ರೋತ್ಸವದಲ್ಲಿ "ಮುರ್ಗ"ಗೆ ಪ್ರಥಮ ಬಹುಮಾನ**

ಸ್ವಚ್ಛ ಭಾರತ ಆಂದೋಲದ ಅಂಗವಾಗಿ ನಡೆದ ಕಿರು ಚಲನ ಚಿತ್ರೋತ್ಸವದಲ್ಲಿ "ಮುರ್ಗ" ಚಿತ್ರ ಪ್ರಥಮ ಬಹುಮಾನವನ್ನು ಗೆದ್ದುಕೊಂಡಿದೆ. ಮುರ್ಗ ಚಿತ್ರವನ್ನು ಮಹಾರಾಷ್ಟ್ರ ಮೂಲದ ನಿರ್ದೇಶಕ ಕಾತ್ಯಾಯನ್ ಶಿವಪುರಿ ನಿರ್ದೇಶಿಸಿದ್ದಾರೆ. ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಎಂ.ವೆಂಕಯ್ಯ ನಾಯ್ಡು ಶಿವಪುರಿ ಅವರಿಗೆ ಪ್ರಮಾಣಪತ್ರ ಮತ್ತು ರೂ 10 ಲಕ್ಷ ನಗದು ಬಹುಮಾನ ನೀಡಿ ಗೌರವಿಸಿದರು.ನಾಗರಿಕರು ಮತ್ತು ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳದ ಕಾರಣ ಹೇಗೆ ಸಮಸ್ಯೆಗಳಿಗೆ ಗುರಿಯಾಗುತ್ತಾರೆ ಎಂಬ ವಸ್ತು ವಿಷಯ ಆಧರಿಸಿ 'ಮುರ್ಗ' ಚಲನಚಿತ್ರ ರೂಪುಗೊಂಡಿತ್ತು.

- ಸ್ವಚ್ಛ ಭಾರತ ಕಿರು ಚಲನಚಿತ್ರೋತ್ಸವವನ್ನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಪರವಾಗಿ ರಾಷ್ಟ್ರೀಯ ಸಿನಿಮಾ ಅಭಿವೃದ್ಧಿ ಕಾರ್ಪೋರೇಷನ್ ಹಮ್ಮಿಕೊಂಡಿತ್ತು.
- ಈ ಚಲನಚಿತ್ರೋತ್ಸವದಲ್ಲಿ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ ಸ್ವಚ್ಛ ಭಾರತ ಅಭಿಯಾನದ ಕುರಿತು ಮೂರು ನಿಮಿಷಗಳ ಕಿರು ಚಿತ್ರಗಳನ್ನು ಪ್ರದರ್ಶಿಸಬೇಕಿತ್ತು.
- ಚಲನ ಚಿತ್ರೋತ್ಸವದಲ್ಲಿ ಒಟ್ಟು 4,346 ಜನರು ಸ್ಪರ್ಧಿಸಿದ್ದರು. ಈ ಪೈಕಿ 20 ಉತ್ತಮ ಚಿತ್ರಗಳನ್ನು ಆಯ್ಕೆ ಮಾಡಲು ಸೂಚಿಸಲಾಗಿತ್ತು. ನಿರ್ಮಾಪಕಿ ವಾಣಿ ತ್ರಿಪಾಠಿ, ನಿರ್ದೇಶಕಿ ಗೀತಾಂಜಲಿ ರಾವ್ ಮತ್ತು ಚಲನಚಿತ್ರ ಪ್ರಚಾರ ಪ್ರಹ್ಲಾದ್ ಕಾಕರ್ ಅವರು ತೀರ್ಪುಗಾರರಾಗಿ ಭಾಗವಹಿಸಿದ್ದರು.

ಚಲನಚಿತ್ರ ನಿರ್ದೇಶಕರಾದ ಸುಧಾಂಶು ಶರ್ಮಾ, ಕೆ.ವಿ.ಕೆ. ಕುಮಾರ್ ಮತ್ತು ಅಕ್ಷಯ್ ದನವಾಲೆ ಅವರು ದ್ವಿತೀಯ ಬಹುಮಾನಗಳನ್ನು ಹಂಚಿಕೊಂಡಿದ್ದಾರೆ. ಇವರು ಕ್ರಮವಾಗಿ 'ನಹನಾ ದೂತ್', 'ಚೆಂಬುಕು ಮೂಡಿಂದಿ', 'ಸರ್ಕರ್ಮಿ ರತಿ ವಾಧೂ' ಚಿತ್ರಗಳನ್ನು ನಿರ್ದೇಶಿಸಿದ್ದರು. ಇತರೆ ಆರು ಜನರು ತೃತೀಯ ಬಹುಮಾನವನ್ನು ಹಂಚಿಕೊಂಡಿದ್ದಾರೆ.

**ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಸ್ವಚ್ಛ ಧಾರ್ಮಿಕ ಸ್ಥಳ ಪ್ರಶಸ್ತಿ**

ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಧರ್ಮಸ್ಥಳ ಈಗ ದೇಶದ ಸ್ವಚ್ಛ ಧಾರ್ಮಿಕ ಸ್ಥಳವೆಂಬ ಹಿರಿಮೆಗೆ ಪಾತ್ರವಾಗಿದೆ. ಇಂಡಿಯಾ ಟುಡೆ ಇಂಗ್ಲಿಷ್ ಪತ್ರಿಕಾ ಬಳಗ ರಾಷ್ಟ್ರಾದ್ಯಂತ ಸ್ವಚ್ಛತೆಯನ್ನು ಕೈಗೊಂಡ ವಿವಿಧ ನಗರಗಳನ್ನು ವರ್ಗೀಕರಿಸಿ ಮಾಡಿದ ಸರ್ವೇಕ್ಷಣೆಯಲ್ಲಿ ರಾಷ್ಟ್ರದ ಧಾರ್ಮಿಕ ನಗರಗಳ ಪೈಕಿ ಧರ್ಮಸ್ಥಳವನ್ನು ಅತ್ಯಂತ "ಸ್ವಚ್ಛ ಧಾರ್ಮಿಕ ನಗರ'ವೆಂದು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದೆ.

- ಇಂಡಿಯಾ ಟುಡೆ ಪತ್ರಿಕಾ ಬಳಗದವರು ನೀಡುತ್ತಿರುವ ಪ್ರಥಮ ರಾಷ್ಟ್ರೀಯ "ಸಫಾಯಿಗಿರಿ ಪ್ರಶಸ್ತಿ'ಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ದೇವಸ್ಥಾನಕ್ಕೆ ನೀಡಲಾಗಿದೆ.
- ಈ ಪ್ರಶಸ್ತಿಯನ್ನು ಧರ್ಮಾಧಿಕಾರಿ ಡಾ| ಡಿ. ವೀರೇಂದ್ರ ಹೆಗ್ಗಡೆ ಯವರ ಪರ ಅವರ ಸಹೋದರ ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್ ಅಕ್ಟೋಬರ್ 2ರಂದು ಗಾಂಧೀ ಜಯಂತಿಯಂದು ಕೇಂದ್ರ ನಗರಾಭಿವೃದ್ಧಿ ಸಚಿವ ವೆಂಕಯ್ಯ ನಾಯ್ಡು ಅವರಿಂದ ಪಡೆದುಕೊಂಡರು.
- ಅನ್ನಸಂತರ್ಪಣೆಗೆ ಬಳಸುವ ತಟ್ಟೆಗಳನ್ನು ಯಂತ್ರಗಳಿಂದ ಸ್ವಚ್ಛಗೊಳಿಸುವುದು ಸೇರಿದಂತೆ ಸ್ವಚ್ಛತೆ ಕಾಪಾಡಲು ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇತ್ತೀಚೆಗೆ 3.5 ಲಕ್ಷ ಲೀ. ಸಾಮರ್ಥ್ಯದ ತ್ಯಾಜ್ಯ ಜಲ ಶುದ್ಧೀಕರಣ ಘಟಕ ಆರಂಭಿಸಲಾಗಿತ್ತು.

www.karunaduexams.com

**2016 ಗೂಗಲ್ ಸೈನ್ಸ್ ಫೇರ್ ಪ್ರಶಸ್ತಿ ಗೆದ್ದ ಭಾರತೀಯ ಮೂಲದ ಕೈರಾ ನಿರ್ಗಿನ್ (Kiara Nirghin)**

ಭಾರತೀಯ ಮೂಲದ ದಕ್ಷಿಣ ಆಫ್ರಿಕಾದ ಕೈರಾ ನಿರ್ಗಿನ್ ಅವರು ಅಮೆರಿಕಾದಲ್ಲಿ ನಡೆದ ಗೂಗಲ್ ಸೈನ್ಸ್ ಫೇರ್ ನಲ್ಲಿ $50,000 ವಿದ್ಯಾರ್ಥಿ ವೇತನವನ್ನು ಗೆದ್ದಿದ್ದಾರೆ. ಕಿತ್ತಳೆ ಸಿಪ್ಪೆಯನ್ನು ಬಳಸಿ ಮಣ್ಣಿನ ತೇವಾಂಶವನ್ನು ಹಿಡಿದಿಡುವ ಅಗ್ಗದ ಪದಾರ್ಥವನ್ನು ಅನ್ವೇಷಣೆ ಮಾಡಿರುವುದಕ್ಕಾಗಿ ಕೈರಾ ಅವರಿಗೆ ಪ್ರಶಸ್ತಿಯನ್ನು ನೀಡಲಾಗಿದೆ. ಕೈರಾ ಅವರು ಸೇಂಟ್ ಮಾರ್ಟಿನ್ ಖಾಸಗಿ ಶಾಲೆಯಲ್ಲಿ 11ನೇ ತರಗತಿಯ ವಿದ್ಯಾರ್ಥಿ.

**ಕೈರಾ ಅವರ ಪ್ರಾಜೆಕ್ಟ್ ಬಗ್ಗೆ:**

- ಕೈರಾ ಅವರು "ನೋ ಮೋರ್ ಥರ್ಸ್ಟಿ ಕ್ರಾಪ್ಸ್ (No More Thirsty Crops')" ಹೆಸರಿನಡಿ ತಮ್ಮ ಪ್ರಾಜೆಕ್ಟ್ ಅನ್ನು ಸಲ್ಲಿಸಿದ್ದರು. ದಕ್ಷಿಣ ಆಫ್ರಿಕಾವನ್ನು ಕಾಡುತ್ತಿರುವ ತೀವ್ರ ಬರಕ್ಕೆ ಪರಿಹಾರ ಸೂಚಿಸುವುದು ಈ ಪ್ರಾಜೆಕ್ಟ್ ತಿರುಳಾಗಿತ್ತು.
- ಬಳಸಿ ಬಿಸಡುವ ಕಿತ್ತಳೆ ಮತ್ತು ಅವೊಕಡೊ ಹಣ್ಣಿನ ಸಿಪ್ಪೆಗಳನ್ನು ಬಳಸಿ ಬರ ನಿವಾರಣೆಗೆ ಸರಳ ಪರಿಹಾರವನ್ನು ಕೈರಾ ತಮ್ಮ ಪ್ರಾಜೆಕ್ಟ್ ನಲ್ಲಿ ವಿವರಿಸಿದ್ದರು.
- ಈ ಹಣ್ಣಿನ ಸಿಪ್ಪೆಗಳನ್ನು ಬಳಸಿ "ಸೂಪರ್ ಅಬ್ಸರ್ಬೆಂಡ್ ಪಾಲಿಮರ್ಸ್ (SAPs) ಅನ್ನು ಕೈರಾ ಅಭಿವೃದ್ದಿಪಡಿಸಿದ್ದರು. ಈ ಸೂಪರ್ ಅಬ್ಸರ್ಬೆಂಡ್ ಪಾಲಿಮರ್ಸ್ ಪದಾರ್ಥವು ತನ್ನ ತೂಕಕ್ಕಿಂತ 300 ಪಟ್ಟು ಹೆಚ್ಚು ತೇವಾಂಶವನ್ನು ಹಿಡಿದಿಡುವ ಸಾಮರ್ಥ್ಯವನ್ನು ಹೊಂದಿದೆ. ಅಲ್ಲದೇ ಈ ಪದಾರ್ಥ ಸುಲಭವಾಗಿ ಕೊಳೆಯಬಲ್ಲದಾಗಿದ್ದು, ಯಾವುದೇ ಹಾನಿಕಾರಕ ರಾಸಾಯನಿಕಗಳನ್ನು ಒಳಗೊಂಡಿಲ್ಲ.
- ಈ ಪದಾರ್ಥವು ದೀರ್ಘಕಾಲದವರೆಗೆ ತೇವಾಂಶವನ್ನು ಹಿಡಿದಿಡುವ ಕಾರಣ ಮಣ್ಣನ್ನು ತೇವಭರಿತವಾಗಿ ಇಡುತ್ತದೆ. ಜೊತೆಗೆ ಕಡಿಮೆ ನೀರಿನ್ನು ಬಳಕೆ ಮಾಡಿ ಬೆಳೆ ಬೆಳೆಯಬಹುದಾಗಿದೆ.

**ಗೂಗಲ್ ಸೈನ್ಸ್ ಫೇರ್:**

- ಗೂಗಲ್ ಸೈನ್ಸ್ ಫೇರ್ ಅನ್ನು ಗೂಗಲ್ ಸಂಸ್ಥೆ ಪ್ರತಿ ವರ್ಷ ಆಯೋಜಿಸುತ್ತದೆ. 13 ರಿಂದ 18 ವರ್ಷದೊಳಗಿನವರು ಇದರಲ್ಲಿ ಭಾಗವಹಿಸಬಹುದು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡ ವಿಶ್ವದ ದೊಡ್ಡ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಯುವ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಲು ಇದು ಸಹಕಾರಿಯಾಗಿದೆ.

**ಆನೆಗಳ ಸಂಶೋಧಕಿ ಪ್ರಜ್ಞಾ ಚೌತಗೆ ಫ್ರಾನ್ಸ್ ನೈಟ್ ಹುಡ್ ಗೌರವ**

ಸಿನಿಮಾ ನಿರ್ಮಾಪಕಿ ಮತ್ತು ಆನೆಗಳ ಸಂಶೋಧಕಿ ಪ್ರಜ್ಞಾ ಚೌತಗೆ ಫ್ರಾನ್ಸ್ ಸರ್ಕಾರದ ಅತ್ಯುತ್ತಮ ನಾಗರೀಕ ಪ್ರಶಸ್ತಿಗಳಲ್ಲಿ ಒಂದಾದ "ನೈಟ್ ಇನ್ ದಿ ನ್ಯಾಷನಲ್ ಆರ್ಡರ್ ಆಫ್ ಮೆರಿಟ್" ಗೌರವ ಸಂದಿದೆ. ಏಷ್ಯಾ ಆನೆಗಳ ಕುರಿತಾಗಿ ಇವರು ನಡೆಸುತ್ತಿರುವ ಸಂಶೋಧನೆಗಾಗಿ ಈ ಗೌರವಕ್ಕೆ ಆಯ್ಕೆಮಾಡಲಾಗಿದೆ. ಇತ್ತೀಚೆಗಷ್ಟೇ ಫ್ರಾನ್ಸ್ ಸರ್ಕಾರ ನೈಟ್ ಹುಡ್ ಗೌರವವನ್ನು ಕಿರಣ್ ಮಜುಂಧರ್ ಷಾ ಮತ್ತು ತಮಿಳು ನಟ ಕಮಲ್ ಹಾಸನ್ ಅವರಿಗೆ ನೀಡಿತ್ತು. ಈ ಸಾಲಿಗೆ ಚೌತ ರವರು ಈಗ ಸೇರ್ಪಡೆಗೊಂಡಿದ್ದಾರೆ.

**ಪ್ರಜ್ಞಾ ಚೌತ ಬಗ್ಗೆ:**

- ಪ್ರಜ್ಞಾ ಅವರು ಆನೆ ಮನೆ ಫೌಂಡೇಷನ್ ಸಂಸ್ಥಾಪಕಿ. ಸುಮಾರು 16 ವರ್ಷಗಳಿಂದ ಈ ಫೌಂಡೇಷನ್ ಆನೆಗಳ ಕುರಿತಾಗಿ ಸಂರಕ್ಷಣೆ ಮತ್ತು ಸಂಶೋಧನೆ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ.

- ಆನೆಗಳ ಸಂಶೋಧನೆ ನಡೆಸುವ ಸಲುವಾಗಿ ಜಿಪಿಎಸ್ ಕಾಲರ್ ಮತ್ತು ಆನ್ ಲೈನ್ ಮಾನಿಟರಿಂಗ್ ವ್ಯವಸ್ಥೆಯನ್ನು ಅಭಿವೃದ್ದಿಪಡಿಸಿದ ಕೀರ್ತಿ ಇವರದು.
- ಸೆರೆಹಿಡಿಯಲಾದ ಆನೆಗಳ ನಿರ್ವಹಣೆ ಹೇಗೆ ಎಂಬುದರ ಕುರಿತಾಗಿ ಚೌತ ಅವರು "ಎಲಿಫಂಟ್ ಕೋಡ್" ಪುಸ್ತಕವನ್ನು ಬರೆದಿದ್ದಾರೆ.

## ಜಪಾನಿನ ಒಶಿನೋರಿ ಓಹ್ಸುಮಿಗೆ ಒಲಿದ 2016ನೇ ಸಾಲಿನ ವೈದ್ಯಕೀಯ ನೊಬೆಲ್ ಪ್ರಶಸ್ತಿ

2016ನೇ ಸಾಲಿನ ನೊಬೆಲ್ ಪ್ರಶಸ್ತಿ ಪ್ರಕಟಿಸಲಾಗಿದ್ದು, ಜಪಾನಿನ ಒಶಿನೋರಿ ಓಹ್ಸುಮಿ (Yoshinori Ohsumi) ವೈದ್ಯಕೀಯ ವಿಭಾಗದ ನೊಬೆಲ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಆಟೋಫಗಿ (Autophagy) ವಿಧಾನದ ಕುರಿತಾಗಿ ನಡೆಸಿರುವ ಸಂಶೋಧನೆಗಾಗಿ  ಅವರಿಗೆ ಪ್ರಶಸ್ತಿಯನ್ನು ನೀಡಲಾಗಿದೆ. ಇದರೊಂದಿಗೆ ಓಹ್ಸುಮಿ ಅವರು ನೊಬೆಲ್ ಪ್ರಶಸ್ತಿ ಪಡೆದ ಜಪಾನಿನ 23ನೇ ಯವರು ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಜಪಾನಿನ ಆರನೇಯವರು. ಓಹ್ಸುಮಿ ಟೋಕಿಯೋ ವಿಶ್ವವಿದ್ಯಾಲಯದಲ್ಲಿ 1974 ರಲ್ಲಿ ಪಿ.ಎಚ್.ಡಿ ಪದವಿಯನ್ನು ಪಡೆದಿದ್ದು, ಪ್ರಸ್ತುತ ಟೋಕಿಯೊ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರಾಧ್ಯಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಆಟೋಫಗಿ ಎಂದರೇನು?**

- ಆಟೋಫಗಿ ಎಂದರೆ ಜೀವಕೋಶಗಳು ತಮ್ಮನ್ನು ತಾವೇ ತಿನ್ನುವುದು ಎಂದರ್ಥ. ಇದನ್ನು ಸ್ವಯಂಭಕ್ಷಣ ಎನ್ನಲಾಗುತ್ತದೆ. ಜೀವಕೋಶಗಳು ತಮ್ಮಲ್ಲಿನ ಅಂಶಗಳನ್ನು ಮರುಬಳಕೆ ಮಾಡುವ ಪ್ರಕ್ರಿಯೆ ಇದಾಗಿದೆ.
- ಹಾನಿಗೊಳಗಾದ ಜೀವಕೋಶಗಳು ಹೇಗೆ ಮರುಬಳಕೆ ಎಂಬುದನ್ನು ತಿಳಿಯಲು ಇದು ಬಹುಮುಖ್ಯವಾಗಿದೆ. ಆಟೋಫಗಿಯ ಉತ್ತಮ ತಿಳುವಳಿಕೆಯಿಂದ ದೇಹದ ಆರೋಗ್ಯ ಮತ್ತು ರೋಗಗಳ ಬಗ್ಗೆ ತಿಳಿದುಕೊಳ್ಳಬಹುದಾಗಿದೆ.
- ಬೆಲ್ಜಿಯಂ ವಿಜ್ಞಾನಿ ಕ್ರಿಸ್ಟಿಯನ್ ಡೆ ಡುವೆ ಇದರ ಬಗ್ಗೆ ಅಧ್ಯಯನ ನಡೆಸಿ 1974 ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು. ಆಟೋಫಗಿ ಎಂದು ಮೊದಲು ಕರೆದವರು ಡುವೆ. ಗ್ರೀಕ್ ಭಾಷೆಯಲ್ಲಿ ಆಟೋಫಗಿ ಎಂದರೆ ಸ್ವಯಂಭಕ್ಷಣ ಎಂದರ್ಥ.

**ಒಶಿನೋರಿ ಸಂಶೋಧನೆ:**

- ಒಶಿನೋರಿ ಆಟೋಫಗಿ ಮೇಲೆ ನಡೆಸಲಾದ ಸಂಶೋಧನೆಯಲ್ಲಿ ಜೀವಕೋಶಗಳು ಹೇಗೆ ತನ್ನಳೊಗಿರುವುದನ್ನು ಮರುಬಳಕೆ ಮಾಡುತ್ತವೆ ಎನ್ನುವುದನ್ನು ತಿಳಿಸಿಕೊಟ್ಟಿದ್ದಾರೆ.
- ತನ್ನ ಸಂಶೋಧನೆಯಲ್ಲಿ ಒಶಿನೋರಿಯವರು ಸ್ವಯಂಭಕ್ಷಣಗೆ ಅಗತ್ಯವಾದ ಜೀನ್ ಗಳನ್ನು ಪತ್ತೆ ಮಾಡಲು ಬೇಕರ್ಸ್ ಈಸ್ಟ್ ಬಳಸಿದ್ದಾರೆ.
- ಈಸ್ಟ್ನಲ್ಲಿ ಇದರ ಪ್ರಕ್ರಿಯೆ ಗಮನಿಸಿ, ನಂತರ ಮನುಷ್ಯರ ಜೀವಕೋಶಗಳಲ್ಲಿ ಆಗುವ ಪ್ರಕ್ರಿಯಾ ಸೂತ್ರವನ್ನು ವಿವರಿಸಿದ್ದಾರೆ.

**ಸಂಶೋಧನೆಯ ಮಹತ್ವ:**

- ಈ ಸಂಶೋಧನೆಯಿಂದ ಒಶಿನೋರಿ ರವರು ಆಟೋಫಗಿ ನಿಯಂತ್ರಿಸುವ ಜೀನ್ ಗಳನ್ನು ಪತ್ತೆಹಚ್ಚಿದ್ದಾರೆ. ಜೊತೆಗೆ ಈ ಜೀನ್ ಗಳು ಏರುಪೇರುನಿಂದ ರೋಗಗಳಿಗೆ ಕಾರಣವಾಗುವುದನ್ನು ವಿವರಿಸಿದ್ದಾರೆ.
- ಸಂಶೋಧನೆಯಿಂದ ಆಟೋಫಗಿಯ ಮಹತ್ವವೇನು ಎಂಬುದು ಅರಿಯಲು ಸಾಧ್ಯವಾಗಿದೆ.

www.karunaduexams.com

- ಮುಪ್ಪಿನ ಅವಧಿಯಲ್ಲಿ ಪಾರ್ಕಿನ್ಸನ್, ಟೈಪ್ 2 ಮಧುಮೇಹ ಮತ್ತಿತ್ತರ ಕಾಯಿಲೆಗಳಿಗೆ ಸ್ವಯಂಭಕ್ಷಣ ಕ್ರಿಯೆ ಕಾರಣವೆಂಬುದಕ್ಕೆ ಪುರಾವೆ ಒದಗಿಸಿದೆ.

**ಸಿಕ್ಕಿಂ ಮುಖ್ಯಮಂತ್ರಿ ಪವನ್ ಚಾಮ್ಲಿಂಗ್ ಅವರಿಗೆ ಸುಸ್ಥಿರ ಅಭಿವೃದ್ಧಿ ನಾಯಕತ್ವ ಪ್ರಶಸ್ತಿ ಪ್ರದಾನ**

ಪ್ರತಿಷ್ಠಿತ ಸುಸ್ಥಿರ ಅಭಿವೃದ್ಧಿ ನಾಯಕತ್ವ ಪ್ರಶಸ್ತಿಯನ್ನು ಸಿಕ್ಕಿಂ ಮುಖ್ಯಮಂತ್ರಿ ಪವನ್ ಚಾಮ್ಲಿಂಗ್ ಅವರಿಗೆ ನೀಡಿ ಗೌರವಿಸಲಾಗಿದೆ. ದಿ ಎನರ್ಜಿ ಅಂಡ್ ರಿಸೋರ್ಸ್ ಇನ್ಸ್ಟಿಟ್ಯೂಟ್ ಈ ಪ್ರಶಸ್ತಿಯನ್ನು ನೀಡುತ್ತಿದೆ. ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯಲ್ಲಿ ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಅವರು ಚಾಮ್ಲಿಂಗ್ ಅವರಿಗೆ ಪ್ರಶಸ್ತಿಯನ್ನು ನೀಡಿದರು. ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿಗೆ ಚಾಮ್ಲಿಂಗ್ ಅವರು ನೀಡಿರುವ ಕೊಡುಗೆ ಗುರುತಿಸಿ ಪ್ರಶಸ್ತಿಯನ್ನು ನೀಡಲಾಗಿದೆ. ಚಾಮ್ಲಿಂಗ್ ಅವರ ದೂರದೃಷ್ಟಿಯಿಂದ ಸಿಕ್ಕಿಂ ದೇಶದ ಮೊದಲ ಸಾವಯವ ರಾಜ್ಯ ಎನಿಸಿದೆ.

- ಸಿಕ್ಕಿಂ ಸಂಪೂರ್ಣ ಸಾವಯುವ ರಾಜ್ಯವೆನಿಸಿರುವ ದೇಶದ ಮೊದಲ ಹಾಗೂ ಏಕೈಕ ರಾಜ್ಯ. ಜನವರಿ 2016 ರಲ್ಲಿ ಸಿಕ್ಕಿಂ ಅನ್ನು ಸಾವಯುವ ರಾಜ್ಯವೆಂದು ಪ್ರಧಾನಿ ನರೇಂದ್ರ ಮೋದಿ ರವರು ಅಧಿಕೃತವಾಗಿ ಘೋಷಣೆ ಮಾಡಿದರು.
- ಸಿಕ್ಕಿಂನ ಸುಮಾರು 75,000 ಹೆಕ್ಟೇರ್ ಪ್ರದೇಶವನ್ನು ಸಾವಯುವ ಕೃಷಿಗೆ ಒಳಪಡಿಸಲಾಗಿದೆ.
- ದೇಶದ ಸಾವಯುವ ಕೃಷಿಯಿಂದ ಉತ್ಪಾದಿಸಲಾಗುವ 1.24 ಮಿಲಿಯನ್ ಟನ್ ನಲ್ಲಿ ಸಿಕ್ಕಿಂ ಪಾಲು ಸುಮಾರು 80,000 ಟನ್ ಇದೆ.

**ಮೂವರು ಸಾಧಕರಿಗೆ 2016 ರಸಾಯನಶಾಸ್ತ್ರ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ**

ರಸಾಯನಶಾಸ್ತ್ರಕ್ಕೆ ನೀಡಲಾಗುವ 2016ರ ನೊಬೆಲ್ ಪ್ರಶಸ್ತಿ ಜೀನ್ -ಪಿಯರ್ರೆ ಸೌವಾಜ್, ಜೆ. ಫ್ರೇಸರ್ ಸೊಡ್ಡಾರ್ಟ್ ಮತ್ತು ಬರ್ನಾಡ್ ಫೆರಿಂಗ ಅವರಿಗೆ ಲಭಿಸಿದೆ. ಮೊಲ್ಯಾಕ್ಯುಲರ್(ಅಣುಗಳ) ಮೆಶಿನ್ ಗಳನ್ನು ಅಭಿವೃದ್ಧಿ ಪಡಿಸಿದಕ್ಕಾಗಿ ಈ ಮೂವರನ್ನು ರಸಾಯನಶಾಸ್ತ್ರಕ್ಕೆ ನೀಡಲಾಗುವ 2016ರ ನೊಬೆಲ್ ಪುರಸ್ಕಾರಕ್ಕೆ ಪರಿಗಣಿಸಲಾಗಿದೆ. ಎಂಟು ದಶಲಕ್ಷ ಸ್ವೀಡಿಶ್ ಕ್ರೌನ್ (9,31,000 ಡಾಲರ್) ಪ್ರಶಸ್ತಿಯನ್ನು ಈ ಮೂವರು ವಿಜ್ಞಾನಿಗಳು ಹಂಚಿಕೊಂಡಿದ್ದಾರೆ.

**ಮೊಲ್ಯಾಕುಲ್ಯರ್ ಮೆಶಿನ್:**

- ಮೊಲ್ಯಾಕುಲ್ಯರ್ ಮೆಶಿನ್ ಅಥವಾ ನ್ಯಾನೋಮೆಶಿನ್ ವಿಶ್ವದ ಅತಿ ಚಿಕ್ಕ ಮೆಶಿನ್ಗಳು.
- ಜೀವಕೋಶಗಳ ಒಳಗೆ ಪ್ರೋಟಿನ್ ಗಳು ನೈಸರ್ಗಿಕವಾಗಿ ಜೈವಿಕ ಯಂತ್ರಗಳಂತೆ ವರ್ತಿಸುವುದು ಇವರ ಸಂಶೋಧನೆಗೆ ಸ್ಪೂರ್ತಿಯಾಗಿದೆ.

**ಮೊಲ್ಯಾಕುಲ್ಯರ್ ಮೆಶಿನ್ ಅಭಿವೃದ್ಧಿಗೆ ಸಾಧಕರ ಕೊಡುಗೆ:**

ಫ್ರಾನ್ಸ್‌ನ ಜೀನ್ ಪಿರ್ರೆ ಸುವಾಜ್: 1983ರಲ್ಲಿ ಅಣು ಯಂತ್ರದ ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದರು. ಬಳೆ ಅಥವಾ ಉಂಗುರ ಆಕಾರದ ಎರಡು ಅಣುಗಳನ್ನು ಪರಸ್ಪರ ಕೂಡಿಸುವ ಮೂಲಕ ಅಣುಗಳ ಸರಪಣಿ ಸೃಷ್ಟಿಸುವಲ್ಲಿ ಯಶ ಕಂಡಿದ್ದರು. ಅಣು ಯಂತ್ರಗಳ ಅಭಿವೃದ್ಧಿಯಲ್ಲಿ ಇದು ಮೊದಲ ಹಂತ ಎಂದು ಬಣ್ಣಿಸಲಾಗಿದೆ. 'ಯಂತ್ರವು ಕೆಲಸ ಮಾಡಬೇಕಾದರೆ, ಪರಸ್ಪರ ಚಲಿಸುವಂತಹ ಭಾಗಗಳನ್ನು ಅವು ಹೊಂದಿರಬೇಕಾಗುತ್ತದೆ. ಸುವಾಜ್ ಅವರು ಸಂಪರ್ಕ ಬೆಸೆದ ಎರಡು ಅಣು ಬಳೆಗಳು ಈ ಅಗತ್ಯವನ್ನು ಪೂರೈಸಿವೆ' ಎಂದು ನೊಬೆಲ್ ಪ್ರಶಸ್ತಿ ತೀರ್ಪುದಾರರ ಮಂಡಳಿ ಹೇಳಿದೆ.

ಜೆ. ಫ್ರೇಸರ್ ಸೊಡ್ಡಾರ್ಟ್: 1991ರಲ್ಲಿ ಜೆ.ಫ್ರೇಸರ್ ಸ್ಟೊಡಾರ್ಟ್ ಅವರು ಅಣು ಯಂತ್ರ ಅಭಿವೃದ್ಧಿಯ ಎರಡನೇ ಹಂತವನ್ನು ಕೈಗೆತ್ತಿಕೊಂಡಿದ್ದರು. ಅಣು ಬಳೆಗಳನ್ನು ತೆಳ್ಳನೆಯ ಅಣು ದಂಡಕ್ಕೆ (ಆ್ಯಕ್ಸಲ್) ಅವರು ಪೋಣಿಸಿದ್ದರು. ಅಲ್ಲದೇ ಈ ದಂಡದ

ಜೊತೆಗೆ ಅಣು ಬಳೆಗಳೂ ಚಲಿಸುತ್ತವೆ ಎಂಬುದನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿದ್ದರು. ಸ್ಟೊಡಾರ್ಡ್ ಅವರು ಅಣುಗಳ ಲಿಫ್ಟ್, ಅಣು ಆಧಾರಿತ ಕಂಪ್ಯೂಟರ್ ಚಿಪ್‌ಗಳನ್ನು ಈಗಾಗಲೇ ಅಭಿವೃದ್ಧಿ ಪಡಿಸಿದ್ದಾರೆ. ಬರ್ನಾಡ್ ಫೆರಿಂಗ: ಅಂತಿಮವಾಗಿ ಅಣು ಯಂತ್ರವನ್ನು ಅಭಿವೃದ್ಧಿ ಪಡಿಸಿದ್ದು ಬರ್ನಾರ್ಡ್ ಫೆರಿಂಗಾ. ಒಂದೇ ದಿಕ್ಕಿನಲ್ಲಿ ನಿರಂತರವಾಗಿ ತಿರುಗುವ ಅಣು ಬ್ಲೇಡ್ ರೂಪಿಸಲು 1999ರಲ್ಲಿ ಅವರು ಯಶಸ್ವಿಯಾಗಿದ್ದರು. ಅಣು ಯಂತ್ರಗಳನ್ನು ಬಳಸಿ ನ್ಯಾನೊ ಕಾರುಗಳನ್ನು ರೂಪಿಸಿದ ಹೆಗ್ಗಳಿಕೆಯೂ ಫೆರಿಂಗಾ ಅವರಿಗಿದೆ.

**ಸಾಹಿತಿ ದೇವನೂರ ಮಹಾದೇವಗೆ ಕುವೆಂಪು ರಾಷ್ಟ್ರೀಯ ಪ್ರಶಸ್ತಿ**

ಹಿರಿಯ ಸಾಹಿತಿ ದೇವನೂರು ಮಹಾದೇವ ಅವರನ್ನು 2016ನೇ ಸಾಲಿನ ಪ್ರತಿಷ್ಠಿತ ಕುವೆಂಪು ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕುವೆಂಪು ಪ್ರತಿಷ್ಠಾನ ನೀಡುವ ಈ ಪ್ರಶಸ್ತಿಯನ್ನು ಕನ್ನಡನಾಡಿನ ಖ್ಯಾತ ಕವಿ ಕುವೆಂಪು ಅವರ ಜನ್ಮದಿನವಾದ ಅಂಗವಾಗಿ ಡಿ.1ರಂದು ಪ್ರದಾನ ಮಾಡಲಾಗುತ್ತದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಹಂಪ ನಾಗರಾಜಯ್ಯ ತಿಳಿಸಿದ್ದಾರೆ. 2015ನೇ ಸಾಲಿನಲ್ಲಿ ಈ ಪ್ರಶಸ್ತಿಯನ್ನು ಮರಾಠಿ ಸಾಹಿತಿ ಶ್ಯಾಮ ಮನೋಹರ್ ಅವರಿಗೆ ನೀಡಲಾಗಿತ್ತು.

**ದೇವನೂರ ಮಹಾದೇವರ ಬಗ್ಗೆ:**

- ಮಹಾದೇವ ರವರು 1948 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡಿನ ದೇವನೂರಿನಲ್ಲಿ ಜನಿಸಿದರು.
- ನಂಜನಗೂಡು ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಕೆಲಕಾಲ ಅಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕೃಷಿಯಲ್ಲಿ ವಿಶೇಷವಾದ ಆಸಕ್ತಿ ಹೊಂದಿರುವ ದೇವನೂರು ಮಹಾದೇವ ಅವರ ಕಿರು ಕಾದಂಬರಿ 'ಒಡಲಾಳ' ಕೃತಿಯನ್ನು ಕೋಲ್ಕತದ ಭಾರತೀಯ ಪರಿಷತ್ 1984ರಲ್ಲಿ ಉತ್ತಮ ಶೃಜನಶೀಲ ಕೃತಿ ಎಂದು ಗೌರವಿಸಿದೆ.
- 1991ರಲ್ಲಿ ಅವರ 'ಕುಸುಮಬಾಲೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅಲ್ಲದೆ, ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.
- ದ್ಯಾವನೂರು', 'ಒಡಲಾಳ' ಮತ್ತು 'ಕುಸುಮಬಾಲೆ' ಇವರ ಪ್ರಮುಖ ಕೃತಿಗಳು.

**ಖ್ಯಾತ ವಿಜ್ಞಾನಿ ಯು ಆರ್ ರಾವ್ ಗೆ "ಹಾಲ್ ಆಫ್ ಫೇಮ್" ಗೌರವ**

ಇಸ್ರೋದ ಮಾಜಿ ಅಧ್ಯಕ್ಷ ಹಾಗೂ ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಪ್ರೊ.ಯು.ಆರ್.ರಾವ್ ಅವರು ಪ್ರತಿಷ್ಠಿತ 'ಐಎಎಫ್ ಹಾಲ್ ಆಫ್ ಫೇಮ್' ಸೇರ್ಪಡೆ ಗೌರವಕ್ಕೆ ಪಾತ್ರರಾಗಿದ್ದಾರೆ. ಆ ಮೂಲಕ ಈ ಗೌರವಕ್ಕೆ ಪಾತ್ರರಾದ ಭಾರತದ ಮೊದಲಿಗರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸೆ. 30 ರಂದು ಮೆಕ್ಸಿಕೊದಲ್ಲಿ ನಡೆದ 67ನೇ ಇಂಟರ್ ನ್ಯಾಷನಲ್ ಏರೋನಾಟಿಕಲ್ ಕಾಂಗ್ರೆಸ್ ಸಮಾವೇಶದಲ್ಲಿ ರಾವ್ ಅವರ ಹೆಸರನ್ನು ಹಾಲ್ ಆಫ್ ಫೇಮ್ ಗೆ ಸೇರ್ಪಡೆ ಮಾಡಲಾಯಿತು. ಇಂಟರ್‌ನ್ಯಾಷನಲ್ ಏರೋನಾಟಿಕಲ್ ಫೆಡರೇಷನ್ (ಐಎಎಫ್) ನೀಡುವ ಈ ಗೌರವ ಅಂತರಿಕ್ಷ ವಿಜ್ಞಾನಿಗಳ ಪಾಲಿಗೆ ಅತ್ಯುನ್ನತವಾದುದು.

**ಯು ಆರ್ ರಾವ್**:

- ಯು ಆರ್ ರಾವ್ ರವರು ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆಯ ಅಧ್ಯಕ್ಷರಾಗಿ 1984 ರಿಂದ 1994 ರವರೆಗೆ ಸೇವೆ ಸಲ್ಲಿಸಿದ್ದಾರೆ.
- ಭಾರತದ ಮೊದಲ ಉಪಗ್ರಹ ಆರ್ಯಭಟ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಉಪಗ್ರಹಗಳನ್ನು ಇವರ ಮಾರ್ಗದರ್ಶನದಲ್ಲಿ ಅಭಿವೃದ್ಧಿಪಡಿಸಲಾಗಿದೆ.

- ಇವರ ನಾಯಕತ್ವದಡಿ ಜಿಎಸ್ಎಲ್ವಿ ಉಡಾವಣಾ ವಾಹಕ ಹಾಗೂ ಕ್ರಯೋಜನಿಕ್ ಎಂಜಿನ್ ಅಭಿವೃದ್ಧಿ ಕಾರ್ಯಕ್ರಮ ಆರಂಭಗೊಂಡಿತು.
- ಇಸ್ರೋದ ವಾಣಿಜ್ಯ ಅಂಗವಾದ ಅಂಟ್ರಿಕ್ಸ್ ಕಾರ್ಪೋರೇಷನ್ ನ ಮೊದಲ ಅಧ್ಯಕ್ಷರು ಸಹ ಆಗಿದ್ದರು.

**ಪ್ರಶಸ್ತಿಗಳು**:

- ಪದ್ಮಭೂಷಣ (1976), ಉಪಗ್ರಹ ಹಾಲ್ ಆಫ್ ಫೇಮ್, ವಾಷಿಂಗಟನ್ 2013 ರಲ್ಲಿ ಸೇರ್ಪಡೆಗೊಂಡ ಗೌರವಕ್ಕೆ ಪಾತ್ರರಾಗಿದ್ದಾರೆ. ಇವಲ್ಲದೇ ಅನೇಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿಗಳು ಇವರಿಗೆ ಸಂದಿವೆ.

**ಹಾಲ್ ಆಫ್ ಫೇಮ್ ಎಂದರೇನು?**ಅಂತರ ರಾಷ್ಟ್ರೀಯ ವೈಮಾನಿಕ ಫೆಡರೇಷನ್ ಸಂಸ್ಥೆ ಬಾಹ್ಯಾಕಾಶ ವಿಜ್ಞಾನದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವ್ಯಕ್ತಿಗಳ ಸಾಧನೆ ಬಣ್ಣಿಸುವ ಕಾಯಂ ಗ್ಯಾಲರಿಯನ್ನು ಸ್ಥಾಪಿಸಿದೆ. ಹಾಲ್ ಆಫ್ ಫೇಮ್ ಗೌರವಕ್ಕೆ ಪಾತ್ರರಾಗುವ ವ್ಯಕ್ತಿಗಳ ಕುರಿತ ಬಿನ್ನವತ್ತಳೆ, ಜೀವನಕ್ಕೆ ಸಂಬಂಧಿಸಿದ ಮಾಹಿತಿ ಮತ್ತು ಚಿತ್ರವನ್ನು ಗ್ಯಾಲರಿಯಲ್ಲಿ ಪ್ರಕಟಿಸಲಾಗುತ್ತದೆ.

## ಬಾಬ್ ಡೊಲೈನ್ ಗೆ ಪ್ರತಿಷ್ಠಿತ 2016 ನೊಬೆಲ್ ಸಾಹಿತ್ಯ ಪ್ರಶಸ್ತಿ

ಅಮೆರಿಕದ ಖ್ಯಾತ ಗೀತ ರಚನಕಾರ, ಕಲಾಕಾರ ಮತ್ತು ಸಂಗೀತ ಕ್ಷೇತ್ರದ ದಂತಕತೆ ಎನಿಸಿರುವ ಬಾಬ್ ಡೊಲೈನ್ ಅವರಿಗೆ 2016ನೇ ಸಾಲಿನ ಸಾಹಿತ್ಯ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ. ಮಹಾನ್ ಅಮೆರಿಕದ ಹಾಡುಗಳ ಪರಂಪರೆಗೆ ಹೊಸ ಕಾವ್ಯ ಅಭಿವ್ಯಕ್ತಿಗಳನ್ನು ಸೃಷ್ಟಿಸಿದ್ದಕ್ಕಾಗಿ ಡೈಲಾನ್ ಅವರಿಗೆ 80 ಲಕ್ಷ ಸ್ವೀಡಿಷ್ ಕ್ರೌನ್ (927,740 ಡಾಲರ್) ಮೊತ್ತದ ಪ್ರಶಸ್ತಿ ಸಂದಿದೆ.

**ಬಾಬ್ ಡೊಲೈನ್ ಬಗ್ಗೆ**:

- ರಾಬರ್ಟ್ ಅಲ್ಲೆನ್ ಜಿಮ್ಮರ್ಮನ್ ಹುಟ್ಟಿದ್ದು ಮೇ 24, 1941 ರಲ್ಲಿ ದುಲುತ್, ಮಿನ್ನೆಸೊಟದಲ್ಲಿ.
- ಅವರ ಮೊದಲ ಅಲ್ಬಂ "ಬಾಬ್ ಡೊಲೈನ್" 1962 ರಲ್ಲಿ ಬಿಡುಗಡೆಗೊಂಡಿತು. ಕವಿ ಡೊಲೈನ್ ಥಾಮಸ್ ಅವರ ಹೆಸರನ್ನ ಇಟ್ಟುಕೊಂಡ ನಂತರ ಬಾಬ್ ಡೊಲೈನ್ ಎಂದೇ ಪ್ರಸಿದ್ಧರಾದರು.
- ಸಾರ್ವಕಾಲಿಕ ಸಂಗೀತಗಾರ ಎನಿಸಿರುವ ಇವರ 100 ದಶಲಕ್ಷ ಧ್ವನಿಮುದ್ರಣಗಳು ಮಾರಾಟಗೊಂಡಿವೆ.
- ಕಲೆ ಮತ್ತು ಚಿತ್ರಕಲೆ ಸಂಬಂಧಿಸಿದ ಆರು ಪುಸ್ತಕಗಳನ್ನು ಬಾಬ್ ಪ್ರಕಟಿಸಿದ್ದಾರೆ.
- ಇವರ ಅಂದಿನ ಗೀತೆಗಳಾದ  ದಿ ಟೈಮ್ಸ್ ದೆ ಆರ್ ಎ ಚಾಂಗಿನ್ ಮತ್ತು ಬ್ಲೋವಿಂಗ್ ಇನ್ ದಿ ವಿಂಡ್ ಗೀತೆಗಳು ಅಮೆರಿಕ ನಾಗರೀಕ ಹಕ್ಕು ಮತ್ತು ಯುದ್ಧ ವಿರೋಧಿ ಚಳುವಳಿ ಗೀತೆಗಳಾಗಿ ಅಳವಡಿಸಿಕೊಳ್ಳಲಾಗಿತ್ತು.

**ಪ್ರಶಸ್ತಿಗಳು:**

- 11 ಗ್ರಾಮಿ ಪ್ರಶಸ್ತಿ, ಗೋಲ್ಡನ್ ಗ್ಲೋಬ್ ಪ್ರಶಸ್ತಿ ಮತ್ತು ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

## ತೆಲಂಗಣದ "ಬತುಕಮ್ಮ" ಹಬ್ಬ ಗಿನ್ನಿಸ್ ದಾಖಲೆ ಸೇರ್ಪಡೆ

ತೆಲಂಗಣದ ಪ್ರಮುಖ ಹಬ್ಬಗಳಲ್ಲಿ ಒಂದಾದ "ಬಕುತಮ್ಮ" ಹಬ್ಬ ಗಿನ್ನಿಸ್ ದಾಖಲೆಗೆ ಸೇರ್ಪಡೆಗೊಂಡಿದೆ. ಹೈದಾರಾಬಾದಿನ ಲಾಲ್ ಬಹಾದ್ದೂರ್ ಶಾಸ್ತ್ರಿ ಕ್ರೀಡಾಂಗಣದಲ್ಲಿ 9,292 ಮಹಿಳೆಯರು ಈ ಹಬ್ಬದಲ್ಲಿ ಭಾಗವಹಿಸಿ ಹೊಸ ದಾಖಲೆ ಬರೆದಿದ್ದಾರೆ. ಕಳೆದ ವರ್ಷ ಕೇರಳದಲ್ಲಿ ಏರ್ಪಡಿಸಲಾಗಿದ್ದ ಓಣಂ ನೃತ್ಯ ಕಾರ್ಯಕ್ರಮದಲ್ಲಿ ಐದು ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಈಗ ಬತುಕಮ್ಮ ಹಬ್ಬ ಈ ದಾಖಲೆಯನ್ನು ಮುರಿದು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡಿಗೆ ಸೇರ್ಪಡೆಯಾಗಿದೆ.

**ಬತುಕಮ್ಮ ಹಬ್ಬದ ಬಗ್ಗೆ:**

ಬತುಕಮ್ಮ ಹಬ್ಬಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸರ್ವಪಿತೃ ಅಮವಾಸ್ಯೆಯ ನಂತರ ಆಚರಿಸಲಾಗುವ ಈ ಹಬ್ಬದಲ್ಲಿ, ಮಣ್ಣಿನಿಂದ ಮಾಡಿದ ದುರ್ಗೆಯನ್ನು ಪೂಜಿಸಿ, ಹೂಗಳಿಂದ ಅಲಂಕಾರ ಮಾಡಿ ನಂತರ ವಿಸರ್ಜಿಸಲಾಗುತ್ತದೆ. ಇತಿಹಾಸ ತಜ್ಞರ ಪ್ರಕಾರ ಚೋಳ ಸಾಮ್ರಾಜ್ಯದ ದೊರೆ ಧರ್ಮಾಂಗಧ ಮತ್ತು ಸತ್ಯವತಿ ದಂಪತಿಗಳು ಹಲವು ವರ್ಷಗಳ ಪೂಜೆ, ಪುನಸ್ಕಾರದ ನಂತರ ಹೆಣ್ಣು ಮಗು ಜನಿಸುತ್ತದೆ. ಈ ಹೆಣ್ಣು ಮಗು ದೊಡ್ಡವಳಾಗುವ ತನಕ ಹಲವು ಕಷ್ಟಕರ್ಪಾಣ್ಯವನ್ನು ಎದುರಿಸುತ್ತಿರುತ್ತಾರೆ. ಕೆಲ ಕಾಲದ ನಂತರ ಮಗುವಿಗೆ ಇಟ್ಟಿದ್ದ ಲಕ್ಷ್ಮಿ ಎನ್ನುವ ಹೆಸರನ್ನು ಬತುಕಮ್ಮ ಎಂದು ಮರುನಾಮಕರಣ ಮಾಡುತ್ತಾರೆ. ಅಂದಿನಿಂದ ಈ ಬತುಕಮ್ಮ ಹಬ್ಬವನ್ನು ಆಚರಿಸಲಾಗುತ್ತದೆ. ಮಹಿಳೆಯರೇ ಆಚರಿಸುವ ಈ ಹಬ್ಬದಲ್ಲಿ ಮದುವೆಯ ಹೊಸ್ತಿಲಲ್ಲಿರುವ ಹೆಣ್ಣು ಮಕ್ಕಳು ಮತ್ತು ಹೆಂಗಸರು ಈ ಹಬ್ಬದಲ್ಲಿ ಭಾಗವಹಿಸುವುದು ವಾಡಿಕೆ. ಇನ್ನೊಂದು ಮೂಲಗಳ ಪ್ರಕಾರ ಮಹಿಷಾಸುರ ಎನ್ನುವ ರಾಕ್ಷಸನನ್ನು ದೇವಿ ಸಂಹಾರ ಮಾಡಿದ ನಂತರ ದೀರ್ಘ ನಿದ್ದೆಗೆ ಶರಣಾಗುತ್ತಾಳೆ. ದೇವತೆಗಳ, ಮುನಿಗಳ ಪ್ರಾರ್ಥನೆಯ ನಂತರ ದಶಮಿಯ ದಿನದಂದು ದೇವಿ ನಿದ್ದೆಯಿಂದ ಏಳುತ್ತಾಳೆ. ಅದಕ್ಕಾಗಿ ಈ ಬತುಕಮ್ಮ ಹಬ್ಬವನ್ನು ಆಚರಿಸಲಾಗುತ್ತದೆ.

**ಶೂಟರ್ ಜಿತು ರಾಯ್ಗೆ "ಚಾಂಪಿಯನ್ ಆಫ್ ಚಾಂಪಿಯನ್ಸ್" ಪ್ರಶಸ್ತಿ**

ಭಾರತದ ಖ್ಯಾತ ಶೂಟರ್ ಜಿತು ರಾಯ್ ಅವರು 2016 ಅಂತಾರಾಷ್ಟ್ರೀಯ ಶೂಟಿಂಗ್ ಸ್ಪೋರ್ಟ್ಸ್ ಫೆಡರೇಶನ್(ISSF)ನ ಚಾಂಪಿಯನ್ ಆಫ್ ಚಾಂಪಿಯನ್ಸ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇಟಲಿಯ ಬೊಲೊಗ್ನಾದಲ್ಲಿ ನಡೆದ 10 ಮೀಟರ್ ಏರ್ ಪಿಸ್ತೂಲ್ ಫೈನಲ್ನಲ್ಲಿ ಜಿತು ರಾಯ್ ಅವರು ಸರ್ಬಿಯಾದ ಡಾಮಿರ್ ಮಿಕೆಕ್ ಅವರನ್ನು ಹಿಂದಿಕ್ಕಿ 5,587 ಡಾಲರ್(5,000 ಯುರೋಸ್) ಮೊತ್ತದ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ. ಒಲಿಂಪಿಕ್ ವಿಜೇತ "ಅನ್ನಾ ಕೊರಕಕಿ" ರವರು ಮೂರನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡರು.

**ರೈಫಲ್ ವಿಭಾಗದಲ್ಲಿ:**

- ರೈಫಲ್ ವಿಭಾಗದಲ್ಲಿ ಈ ಪ್ರಶಸ್ತಿಯನ್ನು ರಷ್ಯಾದ ಸೆರ್ಗೆ ಕಮೆನ್ಸಿಕಿ ರವರು ತಮ್ಮದಾಗಿಸಿಕೊಂಡರು. ಎರಡು ಬಾರಿ ಒಲಂಪಿಕ್ ಚಾಂಪಿಯನ್ ಚೀನಾದ ದು ಲೀ ಅವರನ್ನು ಸೋಲಿಸಿ ಕಮೆನ್ಸಿಕಿ ಪ್ರಶಸ್ತಿಯನ್ನು ಗೆದ್ದುಕೊಂಡರು.
- ಲಂಡನ್ ಒಲಂಪಿಕ್ ವಿಜೇತ ಚೀನಾದ ಯಿ ಸಿಲಿಂಗ್ ಮೂರನೇ ಸ್ಥಾನವನ್ನು ಪಡೆದುಕೊಂಡರು.

**ಆಲಿವರ್ ಹಾರ್ಟ್ ಮತ್ತು ಬೆಂಗ್ಟ್ ಹೋಲ್ಮಸ್ಟ್ರಾಮ್ ಗೆ ಅರ್ಥಶಾಸ್ತ್ರ ನೊಬೆಲ್ ಪ್ರಶಸ್ತಿ**

ಬ್ರಿಟನ್ - ಅಮೆರಿಕದ ಅರ್ಥಶಾಸ್ತ್ರಜ್ಞರಾದ ಆಲಿವರ್ ಹಾರ್ಟ್ ಮತ್ತು ಫಿನ್ಲೆಂಡ್‌ನ ಬೆಂಗ್ಟ್ ಹೋಲ್ಮಸ್ಟ್ರಾಮ್ ಅವರಿಗೆ 2016ನೇ ಸಾಲಿನ ಅರ್ಥಶಾಸ್ತ್ರ ನೊಬೆಲ್ ಪ್ರಶಸ್ತಿ ದೊರೆತಿದೆ. ಇವರು ಅಭಿವೃದ್ಧಿಪಡಿಸಿರುವ 'ಗುತ್ತಿಗೆ ಸಿದ್ಧಾಂತ (Contract Theory)'ಕ್ಕೆ ನೊಬೆಲ್ ಅರ್ಥಶಾಸ್ತ್ರ ಪ್ರಶಸ್ತಿಯನ್ನು ಜಂಟಿಯಾಗಿ ಘೋಷಿಸಲಾಗಿದೆ. ಇವರಿಬ್ಬರೂ ಪ್ರಶಸ್ತಿಯ ಮೊತ್ತವಾದ ₹ 6.19 ಕೋಟಿಗಳನ್ನು ಸಮನಾಗಿ ಹಂಚಿಕೊಳ್ಳಲಿದ್ದಾರೆ. ಅರ್ಥಶಾಸ್ತ್ರಕ್ಕೆ ನೀಡಲಾಗುವ ನೊಬೆಲ್ ಪ್ರಶಸ್ತಿಯನ್ನು ಸ್ವೀಡನ್ನಿನ ಕೇಂದ್ರೀಯ ಬ್ಯಾಂಕ್ 1968ರಲ್ಲಿ ಸ್ಥಾಪಿಸಿದೆ.

- ಉನ್ನತ ಹುದ್ದೆಗಳಲ್ಲಿ ಇರುವವರ ಕಾರ್ಯದಕ್ಷತೆ ಆಧರಿಸಿದ ವೇತನ, ವಿಮೆ ಹಣ ಪಾವತಿ, ಕಡಿತ ಮತ್ತು ಸರ್ಕಾರಿ ವಲಯದ ಉತ್ಪಾದನಾ ಚಟುವಟಿಕೆಗಳ ಖಾಸಗೀಕರಣ ಸೇರಿದಂತೆ ವೈವಿಧ್ಯಮಯ ವಿಷಯಗಳನ್ನು ವಿಶ್ಲೇಷಿಸುವ ಸಮಗ್ರ ವಿಧಾನವನ್ನು ಈ ಇಬ್ಬರೂ ಅರ್ಥಶಾಸ್ತ್ರಜ್ಞರು ಈ ಗುತ್ತಿಗೆ ಸಿದ್ಧಾಂತದಲ್ಲಿ ಅಭಿವೃದ್ಧಿಪಡಿಸಿದ್ದಾರೆ ಎಂದು ಪ್ರಶಸ್ತಿ ಆಯ್ಕೆ ಸಮಿತಿಯು ತಿಳಿಸಿದೆ.

- ನಿತ್ಯ ಜೀವನದಲ್ಲಿ ಗುತ್ತಿಗೆ ವಿಷಯ ಮತ್ತು ಉದ್ದಿಮೆ ಸಂಸ್ಥೆಗಳ ಕಾರ್ಯವೈಖರಿ ಅರ್ಥೈಸಿಕೊಳ್ಳಲು ಮತ್ತು ಗುತ್ತಿಗೆ ನಿಯಮಾವಳಿಗಳಲ್ಲಿನ ಲೋಪದೋಷಗಳನ್ನು ತಿಳಿದುಕೊಳ್ಳಲು ಇವರಿಬ್ಬರೂ ಅಭಿವೃದ್ಧಿಪಡಿಸಿದ ಸೈದ್ಧಾಂತಿಕ ನಿಯಮಗಳು ನೆರವಾಗಲಿವೆ.
- ದಿವಾಳಿಗೆ ಸಂಬಂಧಿಸಿದ ಕಾನೂನುಗಳಿಂದ ಹಿಡಿದು ರಾಜಕೀಯ ಸಂವಿಧಾನ ರೂಪಿಸುವಲ್ಲಿ ಇವರಿಬ್ಬರೂ ತಮ್ಮ ಈ 'ಗುತ್ತಿಗೆ ಸಿದ್ಧಾಂತ'ದ ಮೂಲಕ 'ಬೌದ್ಧಿಕ ತಳಪಾಯ' ಹಾಕಿದ್ದಾರೆ ಎಂದೂ ಸಮಿತಿ ಅಭಿಪ್ರಾಯಪಟ್ಟಿದೆ.

**ಆಲಿವರ್ ಹಾರ್ಟ್**: 1948 ಲಂಡನ್, ಯುಕೆ ಯಲ್ಲಿ ಜನನ. ಅಮೆರಿಕಾದ ಪ್ರಿನ್ಸೆಟನ್ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಇವರು ಅಮೆರಿಕಾದ ಹಾರ್ವಡ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಬೆಂಗ್ಟ್ ಹೋಲ್ಮಸ್ಟ್ರಾಮ್**: 1949 ರಲ್ಲಿ ಫಿನ್ಲ್ಯಾಂಡ್ನ ಹೆಲ್ಸಿಂಕಿಯಲ್ಲಿ ಜನಿಸಿರುವ ಇವರು ಅಮೆರಿಕಾದ ಸ್ಟಾನ್ ಫೋರ್ಡ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಮಸ್ಸಚುಸೆಟ್ಸ್ ತಾಂತ್ರಿಕ ಸಂಸ್ಥೆಯಲ್ಲಿ ಅರ್ಥಶಾಸ್ತ್ರ ಮತ್ತು ನಿರ್ವಹಣೆ ವಿಷಯದ ಪ್ರಾಧ್ಯಪಕರಾಗಿದ್ದಾರೆ.

**ಅರ್ಥಶಾಸ್ತ್ರ ನೊಬೆಲ್ ಬಗ್ಗೆ:**

- ಅರ್ಥಶಾಸ್ತ್ರ ನೊಬೆಲ್ ಪ್ರಶಸ್ತಿಯನ್ನ 1968ರಿಂದ ಸ್ವೀಡನ್ ಕೇಂದ್ರಿಯ ಬ್ಯಾಂಕ್ ನೀಡುತ್ತಿದೆ. 1895 ರಲ್ಲಿ ಆಲ್ಫ್ರೆಡ್ ನೊಬೆಲ್ ರವರು ಸ್ಥಾಪಿಸಿದ ನೊಬೆಲ್ ಪ್ರಶಸ್ತಿಗಳಲ್ಲಿ ಇದು ಒಳಗೊಂಡಿರಲಿಲ್ಲ.

## ನಯನ್ಜೋತ್ ಲಹಿರಿ ರವರಿಗೆ 2016 ಜಾನ್ ಎಫ್ ರಿಚರ್ಡ್ ಪ್ರಶಸ್ತಿ

ಅಶೋಕ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಪ್ರಾಧ್ಯಪಕರಾಗಿರುವ ನಯನ್ಜೋತ್ ಲಹಿರಿ ಅವರಿಗೆ 2016 ಜಾನ್ ಎಫ್ ರಿಚರ್ಡ್ ಪ್ರಶಸ್ತಿ ಲಭಿಸಿದೆ. ಲಹಿರಿ ರವರ "ಅಶೋಕ ಇನ್ ಎನಿಷಿಯೆಂಟ್ ಇಂಡಿಯಾ (*Ashoka in Ancient India*)" ಪುಸ್ತಕಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ತನ್ನ ಶಾಸನಗಳ ಸಾಮ್ರಾಜ್ಯವನ್ನು ಬಣ್ಣಿಸಿರುವ ಅಶೋಕ ಮಹಾರಾಜನ ಕುರಿತಾಗಿರುವ ಈ ಪುಸ್ತಕ ವಿಮರ್ಶಕರ ಪ್ರಶಂಸೆಗೆ ಒಳಗಾಗಿದೆ.

**ಪ್ರಶಸ್ತಿಯ ಬಗ್ಗೆ**:

- ಜಾನ್ ಎಫ್ ರಿಚರ್ಡ್ ಪ್ರಶಸ್ತಿಯನ್ನ ಅಮೆರಿಕನ್ ಹಿಸ್ಟರಿಕಲ್ ಅಸೋಸಿಯೇಷನ್ ನೀಡುತ್ತಿದೆ.
- ದಕ್ಷಿಣ ಏಷ್ಯಾ ಇತಿಹಾಸ ಮೇಲೆ ಬೆಳಕು ಚೆಲ್ಲುವ ಅತ್ಯುತ್ತಮ ಪುಸ್ತಕಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು.
- ಪ್ರಶಸ್ತಿಯನ್ನು ಜನವರಿ 2017 ರಂದು ವಿತರಿಸಲಾಗುವುದು.

## ಚೀನಾ ಓಪನ್: ರಾಂಡ್ವಾಂಸ್ಕಾ, ಆಯಂಡಿ ಮರ್ರೆಗೆ ಪ್ರಶಸ್ತಿ

**ಮಹಿಳೆಯ ಸಿಂಗಲ್ಸ್**: ಪೋಲೆಂಡ್ನ ಅಗ್ನೆಸ್ಕಾ ರಾಂಡ್ವಾಂಸ್ಕಾ ಚೀನಾ ಓಪನ್ನಲ್ಲಿ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಫೈನಲ್ ಪಂದ್ಯದಲ್ಲಿ ರಾಂಡ್ವಾಂಸ್ಕಾ ಅವರು ಅಮೆರಿಕದ ಜೊಹನ್ನಾ ಕಾಂಟಾರನ್ನು 6-4, 6-2 ನೇರ ಸೆಟ್ಗಳಿಂದ ಮಣಿಸಿದರು. ಈ ಮೂಲಕ ವೃತ್ತಿಜೀವನದಲ್ಲಿ 20ನೆ ಹಾಗೂ ಬೀಜಿಂಗ್ನಲ್ಲಿ 2ನೆ ಪ್ರಶಸ್ತಿ ಮುಡಿಗೇರಿಸಿಕೊಂಡರು.

**ಪುರುಷರ ಸಿಂಗಲ್ಸ್:** ಬ್ರಿಟನ್ನ ಆಯಂಡಿ ಮರ್ರೆ ಚೀನಾ ಓಪನ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಜಯಿಸಿದರು. ಫೈನಲ್ನಲ್ಲಿ ಅವರು ಗ್ರಿಗೊರ್ ಡಿಮಿಟ್ರೆ ಅವರನ್ನು 6-4, 7-6(7-2) ನೇರ ಸೆಟ್ಗಳ ಅಂತರದಿಂದ ಮಣಿಸಿದರು. ಈ ಗೆಲುವಿನೊಂದಿಗೆ ಒಟ್ಟು 1000 ಅಂಕ ಗಳಿಸಿರುವ ವಿಶ್ವ ರ್ಯಾಂಕಿಂಗ್ನಲ್ಲಿ ನಂ.2ನೆ ಸ್ಥಾನದಲ್ಲಿರುವ ಮರ್ರೆ ಅಗ್ರ ಸ್ಥಾನದತ್ತ ಹೆಜ್ಜೆ ಇಟ್ಟಿದ್ದಾರೆ.

**17 ವರ್ಷದೊಳಗಿನವರ ಚೊಚ್ಚಲ ಬ್ರಿಕ್ಸ್ ಫುಟ್‌ಬಾಲ್ ಟೂರ್ನಿಯಲ್ಲಿ ಬ್ರೆಜಿಲ್ ಗೆ ಪ್ರಶಸ್ತಿ**

ಮೊದಲ ಆವೃತಿಯ 17 ವರ್ಷದೊಳಗಿನವರ ಚೊಚ್ಚಲ ಬ್ರಿಕ್ಸ್ ಫುಟ್ಬಾಲ್ ಟೂರ್ನಿಯಲ್ಲಿ ಬ್ರೆಜಿಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ವಿಕ್ಟರ್ ಗೇಬ್ರಿಯಲ್ ಮೌರಾ ಡಿ ಒಲಿವಿರಾ ತಂದಿತ್ತ ಎರಡು ಗೋಲುಗಳ ಬಲದಿಂದ ಬ್ರೆಜಿಲ್ ತಂಡ 5-1 ಗೋಲುಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಪರಾಭವಗೊಳಿಸಿತು.

**ಬ್ರಿಕ್ಸ್ ಫುಟ್ಬಾಲ್ ಟೂರ್ನಿ:**

- ಬ್ರಿಕ್ಸ್ ಅಂಡರ್ 17 ಅಥವಾ 17 ವರ್ಷದೊಳಗಿನವರ ಫುಟ್ಬಾಲ್ ಟೂರ್ನಿಯನ್ನು ಬ್ರಿಕ್ಸ್ ರಾಷ್ಟ್ರಗಳಾದ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ರಾಷ್ಟ್ರಗಳ ನಡುವೆ ಆಯೋಜಿಸಲಾಗಿತ್ತು.
- ಅಕ್ಟೋಬರ್ 2016ರಂದು ಈ ಟೂರ್ನಿಮೆಂಟ್ಗೆ ಚಾಲನೆ ನೀಡಲಾಗಿತ್ತು.
- ಪ್ರತಿವರ್ಷ ಈ ಟೂರ್ನಿ ನಡೆಯಲಿದ್ದು, ಬ್ರಿಕ್ಸ್ ರಾಷ್ಟ್ರಗಳಲ್ಲಿ ಮಾತ್ರ ಆಯೋಜಿಸಲಾಗುವುದು.
- ಟೂರ್ನಿಯಲ್ಲಿ ಎಲ್ಲಾ ಐದು ತಂಡಗಳು ಪ್ರತಿ ತಂಡಗಳ ವಿರುದ್ದ ಆಡಬೇಕು. ಅಗ್ರ ಅಂಕ ಪಡೆದ ಮೊದಲ ಎರಡು ದೇಶಗಳು ಫೈನಲ್ ನಲ್ಲಿ ಆಡಲಿವೆ.

**ಮಾಜಿ ಸಚಿವ ಸಿ ವೀರಣ್ಣರವರಿಗೆ 2016-17ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿ**

2016-17ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಮಾಜಿ ಸಚಿವ ಸಿ. ವೀರಣ್ಣ ಅವರಿಗೆ ನೀಡಲಾಯಿತು. ವಿಧಾನಸೌಧದಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಿದರು. ಬಡವರ ವಕೀಲ ಎಂದೇ ಖ್ಯಾತರಾಗಿರುವ ವೀರಣ್ಣ ಅವರು ಪರಿಶಿಷ್ಟ ಸಮುದಾಯಗಳ ಏಳಿಗೆಗೆ ನೀಡಿರುವ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿತ್ತು.

- ಮಹರ್ಷಿ ವಾಲ್ಮೀಕಿ ಪ್ರಶಸ್ತಿಯು ರೂ 5 ಲಕ್ಷ ನಗದು, ಚಿನ್ನದ ಪದಕ ಮತ್ತು ಸ್ಮರಣಿಕೆ ಒಳಗೊಂಡಿದೆ.
- ಗುಲ್ಬರ್ಗ ವಿವಿ ಕುಲಪತಿ ಡಾ. ನಿರಂಜನ್ ಅಧ್ಯಕ್ಷತೆಯ ಸಮಿತಿಯ ವೀರಣ್ಣ ಅವರ ಹೆಸರನ್ನು ಆಯ್ಕೆ ಮಾಡಿದೆ.

**ಸಿ ವೀರಣ್ಣ ಬಗ್ಗೆ:**

ತುಮಕೂರು ಜಿಲ್ಲೆ ಕೊರಟಗೆರೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ವೀರಣ್ಣ ಅವರು, ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ಸೇವೆ ಸಲ್ಲಿಸಿದ್ದರು. ಹೋರಾಟದ ಹಿನ್ನೆಲೆಯುಳ್ಳ ವೀರಣ್ಣ ಸಣ್ಣ ಉಳಿತಾಯ, ಬಂದೀಖಾನೆ ಹಾಗೂ ಕೈಗಾರಿಕಾ ಸಚಿವರಾಗಿ ಕಾರ್ಯನಿರ್ವಹಿಸಿದ್ದರು ಎಂದರು.

**ಹಿರಿಯ ನಟಿ ಲೀಲಾವತಿ ರವರಿಗೆ ಡಾ. ವಿಷ್ಣುವರ್ಧನ್ ಪ್ರಶಸ್ತಿ**

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಷ್ಣು ಸೇನಾ ಸಮಿತಿಯ ಸಹಯೋಗದಲ್ಲಿ ಪ್ರತಿ ವರ್ಷ ನೀಡುವ ಅಭಿನವ ಬಾರ್ಗವ ಡಾ. ವಿಷ್ಣುವರ್ಧನ್ ಪ್ರಶಸ್ತಿಯನ್ನ ಈ ಬಾರಿ ಕನ್ನಡದ ಹಿರಿಯ ನಟಿ ಲೀಲಾವತಿ ಅವರಿಗೆ ನೀಡಲು ನಿರ್ಧರಿಸಿದೆ. ಇತ್ತೀಚೆಗೆ ನಡೆದ ಕನ್ನಡ ಸಾಹಿತ್ಯ ಪರಿಷತ್ತು ಆಯ್ಕೆ ಸಮಿತಿ ಸಭೆಯಲ್ಲಿ ಈ ನಿರ್ಣಯವನ್ನ ಕೈಗೊಳ್ಳಲಾಗಿದೆ.

**ಪ್ರಶಸ್ತಿಯ ಬಗ್ಗೆ:**

- ಕಳೆದ ಮೂರು ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ ಡಾ. ವಿಷ್ಣುವರ್ಧನ್ ಅವರ ಹೆಸರಿನಲ್ಲಿ ಪ್ರಶಸ್ತಿಯನ್ನ ನೀಡಲಾಗುತ್ತಿದೆ.
- ಮೊದಲ ವರ್ಷ ಎಸ್.ಪಿ ಬಾಲಸುಬ್ರಮಣ್ಯಂರವರಿಗೆ ಹಾಗೂ ಎರಡನೇ ವರ್ಷ ರೆಬಲ್ ಸ್ಟಾರ್ ಡಾ.ಅಂಬರೀಶ್ ರವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಈಗ ಮೂರನೆ ವರ್ಷದ ಪ್ರಶಸ್ತಿಗೆ ಲೀಲಾವತಿಯವರನ್ನ ಆಯ್ಕೆ ಮಾಡಲಾಗಿದೆ.

**ಲೀಲಾವತಿ ರವರ ಬಗ್ಗೆ:**

www.karunaduexams.com

ಲೀಲಾವತಿಯವರು ಸುಮಾರು 50 ವರ್ಷಗಳಿಂದ ಚಿತ್ರರಂಗದಲ್ಲಿ ತೊಡಗಿಸಿಕೊಂಡಿದ್ದಾರೆ. ಕನ್ನಡ, ತೆಲುಗು, ತಮಿಳು ಸೇರಿದಂತೆ 600ಕ್ಕೂ ಅಧಿಕ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಸುಮಾರು 400 ಕ್ಕೂ ಅಧಿಕ ಕನ್ನಡ ಸಿನಿಮಾಗಳನ್ನ ಮಾಡಿದ್ದಾರೆ. ಡಾ.ರಾಜ್ ಕುಮಾರ್, ಡಾ.ವಿಷ್ಣುವರ್ಧನ್, ಶಂಕರ್ ನಾಗ್ ಸೇರಿದಂತೆ ಹಲವು ನಟರ ಜೊತೆ ಲೀಲಾವತಿರವರು ಅಭಿನಯಿಸಿದ್ದಾರೆ.

**ಶಾಂಘೈ ಮಾಸ್ಟರ್ಸ್ ಟೆನಿಸ್ ಟೂರ್ನಿ ಪುರುಷರ ಸಿಂಗಲ್ಸ್: ಆಯಂಡಿ ಮರ್ರೆ ಚಾಂಪಿಯನ್**

ಇಂಗ್ಲೆಂಡ್ನ ಆಯಂಡಿ ಮರ್ರೆ ಅವರು ಶಾಂಘೈ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಪುರುಷರ ಸಿಂಗಲ್ಸ್ ಫೈನಲ್ನಲ್ಲಿ ಮರ್ರೆ 7-6(7-1), 6-1 ನೇರ ಸೆಟ್ಗಳಿಂದ ಸ್ಪೇನ್ನ ರಾಬರ್ಟೊ ಬಾಟಿಸ್ಟ ವಿರುದ್ಧ ಜಯ ಸಾಧಿಸಿದರು. ಸೆಮಿಫೈನಲ್ನಲ್ಲಿ ಅದ್ಭುತ ಆಟವಾಡಿ ಜೊಕೋವಿಕ್ ಅವರನ್ನು ಉರುಳಿಸಿದ್ದ ಬಾಟಿಸ್ಟ ಫೈನಲ್ನಲ್ಲಿ ಮರ್ರೆಯೆದುರು ಅದೇ ಆಟ ಪ್ರದರ್ಶಿಸಲು ವಿಫಲರಾದರು.

- ಮರ್ರೆಗೆ ಇದು 3ನೇ ಶಾಂಘೈ ಪ್ರಶಸ್ತಿಯಾಗಿದೆ.
- ಈ ಹಿಂದೆ 2010 ಮತ್ತು 2011 ರಲ್ಲಿ ಸತತವಾಗಿ ಚಾಂಪಿಯನ್ ಆಗಿದ್ದರು.
- ಮರ್ರೆ ಚೀನಾದಲ್ಲಿ ಒಂದರ ಹಿಂದೆ ಒಂದರಂತೆ ಎರಡು ಪ್ರಶಸ್ತಿ ಗೆದ್ದ ಸಾಧನೆ ಮಾಡಿದ್ದಾರೆ. ಅವರು ಕಳೆದ ವಾರ ಬೀಜಿಂಗ್ನಲ್ಲಿ ನಡೆದ ಚೀನ ಓಪನ್ನ ಪ್ರಶಸ್ತಿ ಜಯಿಸಿದ್ದರು. ಸತತ 10 ಪಂದ್ಯ ಗೆಲ್ಲುವ ವೇಳೆ ಮರ್ರೆ ಸತತ 20 ಸೆಟ್ ಜಯಿಸಿದ್ದಾರೆ.

**ಚೈನೀಸ್ ತೈಪೆ ಗ್ರ್ಯಾನ್ ಪ್ರೀ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್: ಸೌರಭ್ ವರ್ಮಾಗೆ ಪ್ರಶಸ್ತಿ**

ಭಾರತದ ಉದಯೋನ್ಮುಖ ಆಟಗಾರ ಸೌರಭ್ ವರ್ಮಾ, ಚೈನೀಸ್ ತೈಪೆ ಗ್ರ್ಯಾನ್ ಪ್ರೀ ಬ್ಯಾಡ್ಮಿಂಟನ್ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು. ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಭಾರತದ ಸೌರಭ್ 12-10, 12-10, 3-3 ಗೇಮ್ಗಳಿಂದ ಮಲೇಷ್ಯಾದ ಡರೇನ್ ಲೀವ್ ಎದುರು ಗೆಲುವು ಸಾಸಿದರು.

- ಈ ಹಿಂದೆ ನಡೆದಿದ್ದ ಬೆಲ್ಜಿಯಂ ಮತ್ತು ಪೋಲೆಂಡ್ ಅಂತಾರಾಷ್ಟ್ರೀಯ ಚಾಲೆಂಜರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೌರಭ್ ರನ್ನರ್ ಅಪ್ ಆಗಿದ್ದರು.
- ಸೌರಭ್ ಕಳೆದ ವರ್ಷದ ಬಹುತೇಕ ಸಮಯ ಮೊಣಕೈ ಮತ್ತು ಮಂಡಿರಜ್ಜು ಗಾಯದ ಸಮಸ್ಯೆಗೆ ತುತ್ತಾಗಿ ವಿಶ್ರಾಂತಿಯಲ್ಲಿಯೇ ಕಾಲ ಕಳೆದಿದ್ದರು. ಇದೀಗ ಪ್ರಸಕ್ತ ವರ್ಷ ಗಣನೀಯ ಯಶಸ್ಸಿನೊಂದಿಗೆ ಟ್ರೋಫಿಗಳನ್ನು ಜಯಿಸಿದ್ದಾರೆ.

**2014 ಮತ್ತು 2015ನೇ ಸಾಲಿನ ಸಿನಿಮಾ ಸಾಹಿತ್ಯ ಪ್ರಶಸ್ತಿ ಪ್ರಕಟ**

ರಾಜ್ಯ ಸರ್ಕಾರ ನೀಡುವ 2014 ಮತ್ತು 2015ನೇ ಸಿನಿಮಾ ಸಾಹಿತ್ಯ ಪ್ರಶಸ್ತಿಯನ್ನು ಪ್ರಕಟಗೊಂಡಿದೆ. ಪತ್ರಕರ್ತ, ಚಲನಚಿತ್ರ ಸಂಭಾಷಣಕಾರ ಉದಯ ಮರಕಿಣಿ ಅವರ 'ಟಚ್ ಸ್ಕ್ರೀನ್' ಅಂಕಣ ಬರಹಗಳ ಸಂಕಲನವನ್ನು ಮತ್ತು ಪತ್ರಕರ್ತ ದೊಡ್ಡಹುಲ್ಲೂರು ರುಕ್ಕೋಜಿ ಅವರ 'ಡಾ. ರಾಜಕುಮಾರ್ ಸಮಗ್ರ ಚರಿತ್ರೆ' ಪುಸ್ತಕವನ್ನು ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**2014ನೇ ಸಾಲಿನ ಅತ್ಯುತ್ತಮ ಸಿನಿಮಾ ಸಾಹಿತ್ಯ ಪ್ರಶಸ್ತಿ**: ಪತ್ರಕರ್ತ, ಚಲನಚಿತ್ರ ಸಂಭಾಷಣಕಾರ ಉದಯ ಮರಕಿಣಿ ಅವರ 'ಟಚ್ ಸ್ಕ್ರೀನ್' ಅಂಕಣ ಬರಹಗಳ ಸಂಕಲನವನ್ನು 2014ನೇ ಸಾಲಿನ ಅತ್ಯುತ್ತಮ ಸಿನಿಮಾ ಸಾಹಿತ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 'ಟಚ್ ಸ್ಕ್ರೀನ್' ಪುಸ್ತಕ ಪ್ರಕಟಿಸಿದ ಕೆ.ಎಂ. ವೀರೇಶ್ 2014ನೇ ಸಾಲಿನ ಪ್ರಶಸ್ತಿಯನ್ನು ಜಂಟಿಯಾಗಿ ಹಂಚಿಕೊಂಡಿದ್ದಾರೆ.

www.karunaduexams.com

**2015ನೇ ಸಾಲಿನ ಅತ್ಯುತ್ತಮ ಸಿನಿಮಾ ಸಾಹಿತ್ಯ ಪ್ರಶಸ್ತಿ**: ಪತ್ರಕರ್ತ ದೊಡ್ಡಹುಲ್ಲೂರು ರುಕ್ಕೋಜಿ ಅವರ 'ಡಾ. ರಾಜಕುಮಾರ್ ಸಮಗ್ರ ಚರಿತ್ರೆ' ಪುಸ್ತಕವನ್ನು 2015ನೇ ಸಾಲಿನ ಅತ್ಯುತ್ತಮ ಸಿನಿಮಾ ಸಾಹಿತ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ವಿಜೇತರಿಗೆ 50 ಗ್ರಾಂ ಬೆಳ್ಳಿ ಪದಕ, ರೂ 20 ಸಾವಿರ ನಗದು ನೀಡಿ ಗೌರವಿಸಲಾಗುವುದು.

**'ಚೌಕಾಬಾರ'ಅತ್ಯುತ್ತಮ ಕಿರುಚಿತ್ರ**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 2015ನೇ ಸಾಲಿನ ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ರಘು ಶಿವಮೊಗ್ಗ ನಿರ್ದೇಶಿಸಿರುವ 'ಚೌಕಾಬಾರ' ಕಿರುಚಿತ್ರವು ಆಯ್ಕೆಯಾಗಿದೆ. ಪ್ರಶಸ್ತಿ ರೂ 50 ಸಾವಿರ ನಗದು ಬಹುಮಾನ ಒಳಗೊಂಡಿದೆ.

**ಆಲಮಟ್ಟಿ ಜಲಾಶಯಕ್ಕೆ ವಿಶ್ವಬ್ಯಾಂಕ್ ಎಕ್ಸಲೆನ್ಸ್ ಪ್ರಶಸ್ತಿ**

ರಾಜ್ಯದ ಅತಿ ದೊಡ್ಡ ಜಲಾಶಯಗಳಲ್ಲಿ ಒಂದಾದ ಆಲಮಟ್ಟಿ ಜಲಾಶಯಕ್ಕೆ ವಿಶ್ವಬ್ಯಾಂಕ್ ಎಕ್ಸಲೆನ್ಸ್ ಪ್ರಶಸ್ತಿ ಲಭಿಸಿದೆ. ಕಳೆದ ವರ್ಷ ಮೇನಲ್ಲಿ ಕೈಗೊಂಡ ಆಲಮಟ್ಟಿ ಜಲಾಶಯ ಪುನಶ್ಚೇತನ ಕಾರ್ಯವನ್ನು ಪ್ರಶಂಸಿಸಿರುವ ವಿಶ್ವಬ್ಯಾಂಕ್, ಉತ್ತಮ ಗುಣಮಟ್ಟದ ಕಾಮಗಾರಿ ನಿರ್ವಹಣೆಗಾಗಿ ಪ್ರಶಸ್ತಿ (ಎಕ್ಸಲೆನ್ಸ್ ಅವಾರ್ಡ್) ನೀಡಿದೆ. ಅಲಮಟ್ಟಿ ಜಲಾಶಯದ ಪುನಶ್ಚೇತನ ಕಾರ್ಯ ಕೈಗೊಳ್ಳಲು ವಿಶ್ವಬ್ಯಾಂಕ್ ರೂ 72 ಕೋಟಿ ನೆರವನ್ನು ಕೃಷ್ಣ ಭಾಗ್ಯ ಜಲ ನಿಗಮ ಲಿಮಿಟೆಡ್ಗೆ ನೀಡಿತ್ತು.

- 'ಜಲಾಶಯದ ಪುನಶ್ಚೇತನಕ್ಕೆ ಬಳಸಿಕೊಂಡ ನೂತನ ಎಂಜಿನಿಯರಿಂಗ್ ತಂತ್ರಜ್ಞಾನ, ಅಚ್ಚುಕಟ್ಟಾದ ಕಾಮಗಾರಿ, ಎಂಜಿನಿಯರ್‌ಗಳ ಸೇವೆ ಮೊದಲಾದವನ್ನು ಪರಿಗಣಿಸಿ, ಈ ಪ್ರಶಸ್ತಿಯನ್ನು ನೀಡಲಾಗಿದೆ.
- ದೇಶದ 10 ರಾಜ್ಯಗಳ ಸುಮಾರು 250ಕ್ಕೂ ಅಧಿಕ ಜಲಾಶಯಗಳ ಪುನಶ್ಚೇತನ ಯೋಜನೆ ಅಡಿ ನವೀಕರಣ ಕಾರ್ಯ ನಡೆದಿತ್ತು. ದೇಶದಲ್ಲಿ ಆಲಮಟ್ಟಿ ಜಲಾಶಯಕ್ಕೆ ಮಾತ್ರ ಈ ಪ್ರಶಸ್ತಿ ಲಭಿಸಿದೆ.

**ಆಲಮಟ್ಟಿ ಜಲಾಶಯದ ಬಗ್ಗೆ:**

- ಆಲಮಟ್ಟಿ ಜಲಾಶಯವನ್ನು ಕೃಷ್ಣ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ.
- 123 ಟಿಎಂಸಿ ಸಾಮರ್ಥ್ಯದ ಜಲಾಶಯಕ್ಕೆ 1964ರಲ್ಲಿ ಅಡಿಗಲ್ಲು ಹಾಕಿಲಾಯಿತದರು, ಜಲಾಶಯದ ಕಾಮಗಾರಿ ಪೂರ್ಣಗೊಂಡಿದ್ದು 2000ನೇ ಇಸವಿಯಲ್ಲಿ.
- 2002 ರಿಂದ ಜಲಾಶಯದಲ್ಲಿ ನೀರಿನ ಸಂಗ್ರಹಣೆ ಮಾಡಲಾಗುತ್ತಿದೆ. ಆದರೆ ಇದೇ ಮೊದಲ ಬಾರಿಗೆ ಪುನಶ್ಚೇತನ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಜಲಾಶಯ ಪುನಶ್ಚೇತನ ಮತ್ತು ಅಭಿವೃದ್ಧಿ ಯೋಜನೆ (DRIP) ಯೋಜನೆಯಡಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.

**ಡಾ.ಸಿಂದಗಿ ರಾಜಶೇಖರ ರವರಿಗೆ ಇತಿಹಾಸ ಸಂಸ್ಕೃತಿ ಶ್ರೀ ಪ್ರಶಸ್ತಿ**

ಪ್ರಸ್ತಕ ಸಾಲಿನ ಇತಿಹಾಸ ಸಂಸ್ಕೃತಿ ಪ್ರಶಸ್ತಿಗೆ ಡಾ.ಸಿಂದಗಿ ರಾಜಶೇಖರ ಅವರನ್ನು ಆಯ್ಕೆ ಮಾಡಲಾಗಿದೆ. ಕರ್ನಾಟಕ ಇತಿಹಾಸ ಅಕಾಡೆಮಿಯು ಈ ಪ್ರಶಸ್ತಿಯನ್ನು ಬೆಂಗಳೂರಿನ ಬೈಸಾನಿ ರುಕ್ಮಿಣಮ್ಮ ರತ್ನಂಶೆಟ್ಟಿ ನೆನಪಿನಲ್ಲಿ ನೀಡುತ್ತಿದೆ.

- ಪ್ರಶಸ್ತಿಯು ರೂ 1 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.
- ಇದೇ 22ರಿಂದ ಮೂರು ದಿನಗಳ ಕಾಲ ಮೈಸೂರಿನಲ್ಲಿ ನಡೆಯುವ ಕರ್ನಾಟಕ ಇತಿಹಾಸ ಅಕಾಡೆಮಿಯ 30ನೇ ವಾರ್ಷಿಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

**ಇತರೆ ಪ್ರಶಸ್ತಿಗಳು**:

- **'ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ'**: ಧಾರವಾಡದ ಇತಿಹಾಸ ತಜ್ಞ ಡಾ.ಎಸ್.ವಿ.ಪಾಡಿಗಾರ್ ಅವರಿಗೆ 'ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ' ನೀಡಲಾಗುವುದು. ಈ ಪ್ರಶಸ್ತಿಯು ರೂ10 ಸಾವಿರ ನಗದು ಒಳಗೊಂಡಿದೆ.

www.karunadueams.com

- **“ಸಂಶೋಧನ ಶ್ರೀ’ ಪ್ರಶಸ್ತಿ”:** ಚಿತ್ರದುರ್ಗದ ಇತಿಹಾಸ ಮತ್ತು ಸಾಹಿತ್ಯ ಸಂಶೋಧಕ ಡಾ.ಬಿ.ರಾಜಶೇಖರ ಅವರಿಗೆ ‘ಸಂಶೋಧನ ಶ್ರೀ’ ಪ್ರಶಸ್ತಿ ನೀಡಲಾಗುವುದು. ಪ್ರಶಸ್ತಿಯು ರೂ15 ಸಾವಿರ ನಗದು ಹೊಂದಿದೆ.
- **ನೊಳಂಬ ಶ್ರೀ’ ಪ್ರಶಸ್ತಿ**”: ಬೆಂಗಳೂರಿನ ಸಂಶೋಧಕಿ ಡಾ.ಎಚ್.ಜಯಮ್ಮ ಕರಿಯಣ್ಣ ಅವರಿಗೆ ‘ನೊಳಂಬ ಶ್ರೀ’ ಪ್ರಶಸ್ತಿ (ರೂ 10 ಸಾವಿರ ನಗದು) ಪ್ರದಾನ ಮಾಡಲಾಗುವುದು.

**ಐವರು ಶಿಲ್ಪಿಗಳಿಗೆ 2016ನೇ ಸಾಲಿನ ಶಿಲ್ಪಕಲಾ ಅಕಾಡಮಿ ಗೌರವ ಪ್ರಶಸ್ತಿ**

ಕರ್ನಾಟಕ ಶಿಲ್ಪಕಲಾ ಅಕಾಡಮಿ ವತಿಯಿಂದ ಐದು ಮಂದಿ ಶಿಲ್ಪಿಗಳಿಗೆ 2016 ನೆ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಪ್ರಶಸ್ತಿಯು ತಲಾ 50 ಸಾವಿರ ರೂ.ಗಳು ನಗದು ಮತ್ತು ನೆನಪಿನ ಕಾಣಿಕೆಯನ್ನು ಹೊಂದಿದೆ. ಸೆಪ್ಟೆಂಬರ್ನಲ್ಲಿ ದಾವಣಗೆರೆಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿಯನ್ನು ವಿತರಿಸಲಾಗುವುದು.

**ಪ್ರಶಸ್ತಿ ವಿಜೇತರು**:

- ಶಿವಮೊಗ್ಗ ಜಿಲ್ಲೆಯ ಕೆ.ನಾರಾಯಣ ರಾವ್ (ಸಂಪ್ರದಾಯ ಶಿಲ್ಪ)
- ರಾಯಚೂರು ಜಿಲ್ಲೆಯ ಮಾನಯ್ಯ ಬಡಿಗೇರ (ರಥ ಶಿಲ್ಪ)
- ಕೋಲಾರ ಜಿಲ್ಲೆಯ ಎಸ್. ಮಂಜುನಾಥ ಆಚಾರ್ಯ (ಸಂಪ್ರದಾಯ ಶಿಲ್ಪ)
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಂ.ವೆಂಕಟೇಶ್ (ಸಮಕಾಲೀನ ಶಿಲ್ಪ)
- ಕಲಬುರಗಿ ಜಿಲ್ಲೆಯ ಶೋಭಾ ಕಂಬಾರ (ಸಂಪ್ರದಾಯ ಶಿಲ್ಪ)
- ಇವರುಗಳಿಗೆ ಕಲಾ ಪ್ರಶಸ್ತಿ ನೀಡಲಾಗುತ್ತಿದೆ.

**ಅಮೆರಿಕಾದ ಸಾಹಿತಿ ಪಾಲ್ ಬೇಟ್ಟಿ ರವರಿಗೆ 2016 ಮ್ಯಾನ್ ಬೂಕರ್ ಪ್ರಶಸ್ತಿ**

ಅಮೆರಿಕದ ಖ್ಯಾತ ಸಾಹಿತಿ ಪಾಲ್ ಬೇಟ್ಟಿ ಅವರು 2016 ಮ್ಯಾನ್ ಬೂಕರ್ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಆ ಮೂಲಕ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಮೊಟ್ಟಮೊದಲ ಅಮೆರಿಕನ್ ಸಾಹಿತ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಬೇಟ್ಟಿ ಅವರ "ದ ಸೆಲ್ ಔಟ್" ಕಾದಂಬರಿಗೆ ಈ ಪ್ರಶಸ್ತಿ ಲಭಿಸಿದೆ. "ಈ ಕಾದಂಬರಿಯು ಆಘಾತಕಾರಿ ಹಾಗೂ ಅನಿರೀಕ್ಷಿತವಾಗಿ ಹಾಸ್ಯಮಯ" ಎಂದು ತೀರ್ಪುಗಾರರು ಬಣ್ಣಿಸಿದ್ದಾರೆ. ಹುಟ್ಟೂರು ಲಾಸ್ ಏಂಜಲೀಸ್ನ ಚಿತ್ರಣವನ್ನು ಕಾದಂಬರಿಗಾರ ಇದರಲ್ಲಿ ಕಟ್ಟಿಕೊಟ್ಟಿದ್ದು, ಜನಾಂಗೀಯ ಸಮಾನತೆಯ ವಿಡಂಬನೆಗೆ ಕಾದಂಬರಿಯ ರೂಪ ನೀಡಿದ್ದಾರೆ ಎಂದು ತೀರ್ಪುಗಾರರು ಹೇಳಿದ್ದಾರೆ.

**ಪಾಲ್ ಬೇಟ್ಟಿ ಬಗ್ಗೆ:**

- ಪಾಲ್ ಬೇಟ್ಟಿ 1962 ರಲ್ಲಿ ಲಾಸ್ ಏಂಜಲೀಸ್ ನಲ್ಲಿ ಜನಿಸಿದ್ದಾರೆ.
- ಬೊಸ್ಟೊನ್ ವಿಶ್ವವಿದ್ಯಾಲಯದಿಂದ ಎಂ.ಎ ಸೈಕಾಲಜಿಯಲ್ಲಿ ಪದವಿಯನ್ನು ಬೇಟ್ಟಿ ಹೊಂದಿದ್ದಾರೆ.
- “ದಿ ವೈಟ್ ಬಾಯ್ ಶಫಲ್ (1996)”, “ಟಫ್ (2000)”, “ಸ್ಲಂಬರ್ಲ್ಯಾಂಡ್ (2008)” ಮತ್ತು “ದಿ ಸೆಲ್ ಔಟ್ (2015)” ಇವರ ಪ್ರಮುಖ ಪುಸ್ತಕಗಳು.
- 2016 ರಲ್ಲಿ ಇವರ ಪುಸ್ತಕ ಸೆಲ್ ಔಟ್ ಗೆ “ನ್ಯಾಷನಲ್ ಬುಕ್ ಕ್ರಿಟಿಕ್ಸ್ ಸರ್ಕಲ್ ಅವಾರ್ಡ್” ಪ್ರಶಸ್ತಿಯನ್ನು ನೀಡಲಾಗಿದೆ.

**ಮ್ಯಾನ್ ಬೂಕರ್ ಪ್ರಶಸ್ತಿ ಬಗ್ಗೆ:**

- ಇದು ಜಾಗತಿಕ ಮಟ್ಟದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರತಿಷ್ಠಿತ ಪ್ರಶಸ್ತಿಯಾಗಿದ್ದು, ಮ್ಯಾನ್ ಗ್ರೂಫ್ 1969 ರಲ್ಲಿ ಸ್ಥಾಪಿಸಿದೆ.

www.karunaduexams.com

- ಈ ಪ್ರಶಸ್ತಿ ವಿಜೇತ ಸಾಹಿತಿ 52,500 ಪೌಂಡ್ ಬಹುಮಾನ ಪಡೆಯುವರು. ಆದರೆ ಈ ಪ್ರಶಸ್ತಿ ಪಡೆದ ಕಾದಂಬರಿ ಮಾರಾಟದಿಂದ ದೊಡ್ಡ ಮೊತ್ತದ ಲಾಭ ಬರುತ್ತದೆ. ಕಾಮನ್ವೆಲ್ತ್ ದೇಶದ ಸಾಹಿತಿಗಳಿಗಷ್ಟೇ ಸೀಮಿತವಾಗಿದ್ದ ಈ ಪ್ರಶಸ್ತಿಯನ್ನು 2013ರಲ್ಲಿ ಇತರ ದೇಶಗಳ ಸಾಹಿತಿಗಳಿಗೂ ಮುಕ್ತಗೊಳಿಸಲಾಯಿತು.
- **2015 ಮತ್ತು 2016ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪ್ರಕಟ**
- 2015 ಮತ್ತು 2016ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ರಂಗಭೂಮಿಗೆ ಸಲ್ಲಿಸಿರುವ ಸೇವೆ ಪರಿಗಣಿಸಿ ದಾವಣಗೆರೆಯ ಮಾನೂಬಾಯಿ ನಾಕೋಡ ಮತ್ತು ಚಲನಚಿತ್ರ ಸಂಗೀತ ನಿರ್ದೇಶಕ ಹಂಸಲೇಖ ಅವರನ್ನು ಕ್ರಮವಾಗಿ 2015 ಮತ್ತು 2016ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

  'ರಂಗ ಸಾಧನೆ' ಹೆಸರಿನಲ್ಲಿ ನೀಡಲಾಗುವ ಈ ಪ್ರಶಸ್ತಿ ಫಲಕ ಮತ್ತು ತಲಾ ₹50 ಸಾವಿರ ಒಳಗೊಂಡಿದೆ. ರಂಗಭೂಮಿಯ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರಿಗೆ ವಾರ್ಷಿಕ ಪ್ರಶಸ್ತಿಗಳನ್ನು ಘೋಷಿಸಲಾಗಿದೆ. 2015ರಲ್ಲಿ 15 ಹಾಗೂ 2016ರಲ್ಲಿ 25 ರಂಗ ಕರ್ಮಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ವಾರ್ಷಿಕ ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ.

  **ರಂಗಭೂಮಿ ಪುಸ್ತಕ ಪುರಸ್ಕಾರ:** ಪ್ರಕಾಶ ಗರುಡ ಅವರ 'ಕಂಪನಿ ನಾಟಕ ಅರ್ಥಾತ್ ವೃತ್ತಿ ರಂಗಭೂಮಿ' ಹಾಗೂ ಗೋಪಾಲ ವಾಜಪೇಯಿ ಅವರ 'ರಂಗದ ಒಳಗೆ ಮತ್ತು ಹೊರಗೆ' ನಾಟಕ ಕೃತಿಗಳು ಪುಸ್ತಕ ಪುರಸ್ಕಾರಕ್ಕೆ ಆಯ್ಕೆಯಾಗಿವೆ.
- ***2016ನೇ ಸಾಲಿನ ಪ್ರಶಸ್ತಿ**: ಎಲ್. ರಾಮಕೃಷ್ಣ (ಬೆಂಗಳೂರು), ವಿರೂಪಾಕ್ಷರಾವ್ ಮೊರಗೇರಿ (ಬಳ್ಳಾರಿ), ಬಸವರಾಜ ಹೂಗಾರ (ವಿಜಯಪುರ), ಮಹಾಂತಯ್ಯ ಖಾನಪೂರ (ಯಾದಗಿರಿ), ಎಚ್. ಹನುಮಂತ ನರಿಬೋಳ (ಕಲಬುರ್ಗಿ), ಅಶೋಕ ನೇಸರಗಿ (ಬೆಳಗಾವಿ), ಸಿದ್ಧಪ್ಪ ನಿಂಗಪ್ಪ ಗುಳ್ಳೆ (ಗದಗ) ಭಾಗ್ಯಶ್ರೀ (ಬೆಂಗಳೂರು), ಮಹದೇವಪ್ಪ ಹುಣಶ್ಯಾಳ (ಬೀದರ್), ಬೈರನಹಳ್ಳಿ ಶಿವರಾಂ (ರಾಮನಗರ) ಚೌಡಶೆಟ್ಟಿ (ಮಂಡ್ಯ), ವೆಂಕಟೇಶ್ (ಹಾಸನ), ವಾಸುದೇವರಾವ್ (ಉಡುಪಿ), ಲಕ್ಷ್ಮಣದಾಸ್ (ತುಮಕೂರು), ಚೇತನ ಡಿ ಪ್ರಸಾದ್ (ಕೋಲಾರ), ಕಮಲಮ್ಮ ಬೀಳಗಿ (ಬಾಗಲಕೋಟೆ) ಆಂಜನೇಯ (ಬೆಂಗಳೂರು ಗ್ರಾಮಾಂತರ), ಲಲಿತಾ ಸಣ್ಣಂಗಿ (ಹಾವೇರಿ), ಛಾಯಾ ರೆಡ್ಡಿ (ಧಾರವಾಡ) ವಿಜಯಕಾಶಿ (ಶಿವಮೊಗ್ಗ), ಪ್ರೇಮಾ ಆರ್ ತಾಳೀಕೋಟಿ (ವಿಜಯಪುರ), ವೆಂಕಟೇಶ್ ಹೆಗಡೆ (ಉತ್ತರ ಕನ್ನಡ), ಸುಂದರಮೂರ್ತಿ ಆಲೆಮನೆ, (ಬೆಂಗಳೂರು), ಎ. ಭದ್ರಪ್ಪ (ದಾವಣಗೆರೆ), ಜಿ.ಎಂ. ಸಿದ್ಧರಾಜು (ಮಂಡ್ಯ)

  **2015ನೇ ಸಾಲಿನ ಪ್ರಶಸ್ತಿ:** ದೇವಿರಪ್ಪ ಶಿವಪ್ಪ ಬಣಕಾರ(ಹಾವೇರಿ), ವೆಂಕಟೇಶ ಕುಲಕರ್ಣಿ, (ಬಾಗಲಕೋಟೆ), ಕೆ.ವಿ. ಕೃಷ್ಣಯ್ಯ (ಬೆಂಗಳೂರು ನಗರ), ಪೂಜಾರ ಚಂದ್ರಪ್ಪ (ದಾವಣಗೆರೆ) ಟಿ.ಆರ್.ರಾಮಚಂದ್ರರಾವ್ (ಬೆಂಗಳೂರು), ಕೆ.ವಿ. ವೆಂಕಟೇಶ್ (ಚಾಮರಾಜನಗರ), ಎಸ್.ಕೆ. ಸೂರಯ್ಯ (ಚಿತ್ರದುರ್ಗ), ಸರೋಜಿನಿ (ಮೈಸೂರು), ವಿಠ್ಠಲಕೊಪ್ಪ (ಧಾರವಾಡ), ಕಿಶೋರ್ ಡಿ.ಶೆಟ್ಟಿ (ಮಂಗಳೂರು), ಚಂದ್ರು ಉಡುಪಿ (ಶಿರಸಿ), ಮಾನಮ್ಮ ರಾಯನಗೌಡ (ರಾಯಚೂರು) ವನಜಶ್ರೀ ಶೆಟ್ಟಿ (ಬೆಂಗಳೂರು), ಬಿ.ಇ. ತಿಪ್ಪೇಸ್ವಾಮಿ (ದಾವಣಗೆರೆ), ಪರಶುರಾಮ ಪ್ರಿಯ (ಕೊಪ್ಪಳ)

www.karunaduexams.com

# ಪರಿಸರ

**ರಾಷ್ಟ್ರೀಯ ಜೈವಿಕ ಆರ್ಥಿಕತೆ ಮಿಷನ್ (The National Mission on Bioeconomy)ಗೆ ಶಿಲ್ಲಾಂಗ್ ನಲ್ಲಿ ಚಾಲನೆ**

ಮೇಘಾಲಯದ ಶಿಲ್ಲಾಂಗ್ ನಲ್ಲಿ ರಾಷ್ಟ್ರೀಯ ಜೈವಿಕ ಆರ್ಥಿಕತೆ ಮಿಷನ್ ಗೆ ಚಾಲನೆ ನೀಡಲಾಯಿತು. ಇನ್ಸ್ಟಿಟ್ಯೂಟ್ ಆಫ್ ಬಯೋರಿಸೋರ್ಸ್ ಅಂಡ್ ಸಸ್ಟೈನಬಲ್ ಡೆವೆಲಪ್ಮೆಂಟ್ (IBSD) ಈ ಮಿಷನ್ ಅನ್ನು ಜಾರಿಗೆ ತಂದಿದೆ. ಜೈವಿಕ ಸಂಪನ್ಮೂಲಗಳ ಸದ್ಬಳಕೆ ಮಾಡಲು ಆಗ್ನೇಯ ಏಷ್ಯಾದಲ್ಲೇ ಇದೊಂದು ವಿಶಿಷ್ಠ ರೀತಿಯ ಕಾರ್ಯಕ್ರಮವಾಗಿದೆ.

**ಪ್ರಮುಖಾಂಶಗಳು**:

- ಜೈವಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಗ್ರಾಮೀಣ ಆರ್ಥಿಕತೆಯನ್ನು ಸಧೃಡಪಡಿಸುವುದು ಇದರ ಮುಖ್ಯ ಗುರಿ. ಜೊತೆಗೆ ಗ್ರಾಮ ಮಟ್ಟದಲ್ಲಿ ಉದ್ಯೋಗ ಸೃಜನೆ ಮಾಡುವುದು ಸಹ ಆಗಿದೆ.
- ಜ್ಞಾನ ಆಧಾರಿತ ವಿಧಾನಗಳ ಮೂಲಕ ನವೀಕರಿಸಬಹುದಾದ ಜೈವಿಕ ಮೂಲಗಳನ್ನು ಆಹಾರ, ಜೈವಿಕ ಇಂಧನ ಮತ್ತು ಜೈವಿಕ ಆಧಾರಿತ ಉತ್ಪನ್ನಗಳನ್ನಾಗಿ ಸುಸ್ಥಿರವಾಗಿ ಬಳಕೆ ಮಾಡಲು ಉತ್ತೇಜಿಸುವುದಾಗಿದೆ.
- ಆಹಾರ, ಆರೋಗ್ಯ, ನೀರು, ಇಂಧನ, ಹವಾಮಾನ ಬದಲಾವಣೆ ಸಂಬಂಧಿಸಿದ ಪ್ರಮುಖ ಸವಾಲುಗಳಿಗೆ ಪರಿಹಾರಗಳನ್ನು ಸೃಷ್ಟಿಸಲು ಮತ್ತು ಸಾಮಾಜಿಕ, ಆರ್ಥಿಕ ಮತ್ತು ಪರಿಸರದ ಲಾಭವನ್ನು ತಲುಪಿಸಲು ಇದು ಸಹಾಯವಾಗಲಿದೆ.
- ಜೈವಿಕ ಆರ್ಥಿಕತೆ ಒಂದು ಹೊಸ ಪರಿಕಲ್ಪನೆಯಾಗಿದ್ದು, ಅಮೆರಿಕಾ, ಕೆನಡಾ ಮತ್ತು ಯುರೋಪಿಯನ್ ಒಕ್ಕೂಟ ರಾಷ್ಟ್ರಗಳು ಈಗಾಗಲೇ ಈ ಕ್ಷೇತ್ರದಲ್ಲಿ ವಿನೂತನ ಪ್ರಯೋಗಕ್ಕೆ ಮುಂದಾಗಿವೆ. ಭಾರತದಲ್ಲಿ ಜೈವಿಕ ಆರ್ಥಿಕತೆಗೆ ಸಾಕಷ್ಟು ಅವಕಾಶಗಳಿದ್ದು, ಭವಿಷ್ಯದಲ್ಲಿ ಬಹಳಷ್ಟು ಬೇಡಿಕೆ ಬರಲಿದೆ.

**ಆಂಧ್ರಪ್ರದೇಶ ಮತ್ತು ಗುಜರಾತಿನ ನಗರ ಪ್ರದೇಶಗಳು ಬಯಲು ಬಹಿರ್ದೆಸೆ ಮುಕ್ತ**

ಆಂಧ್ರಪ್ರದೇಶ ಮತ್ತು ಗುಜರಾತಿನ ನಗರ ಪ್ರದೇಶಗಳು ಬಯಲು ಬಹಿರ್ದೆಸೆ ಮುಕ್ತವೆಂದು ಕೇಂದ್ರ ನಗರಾಭಿವೃದ್ಧಿ ಸಚಿವಾಲಯ ಘೋಷಿಸಿದೆ. ಸ್ವಚ್ಚ ಭಾರತ ಅಭಿಯಾನಕ್ಕೆ ಎರಡು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಹಾಗೂ ಗಾಂಧಿ ಜಯಂತಿ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಘೋಷಿಸಲಾಯಿತು. ಆಂಧ್ರಪ್ರದೇಶ ಮತ್ತು ಗುಜರಾತ್ ರಾಜ್ಯಗಳು ನಗರ ಪ್ರದೇಶಗಳನ್ನು ಬಯಲು ಬಹಿರ್ದೆಸೆಯಿಂದ ಮುಕ್ತ ಮಾಡಿದ ದೇಶದ ಮೊದಲ ರಾಜ್ಯಗಳೆನಿಸಿವೆ.

**ಪ್ರಮುಖಾಂಶಗಳು:**

- ಎರಡು ರಾಜ್ಯಗಳ 180 ನಗರಗಳು ಮತ್ತು 110 ಪಟ್ಟಣಗಳನ್ನು ಬಯಲು ಬಹಿರ್ದೆಸೆ ಮುಕ್ತ ಪ್ರದೇಶಗಳೆಂದು ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ.
- ದೇಶದ 4041 ನಗರ ಪ್ರದೇಶಗಳ ಪೈಕಿ 405 ಪ್ರದೇಶಗಳನ್ನು ಬಯಲು ಬಹಿರ್ದೆಸೆ ಮುಕ್ತ ಪ್ರದೇಶಗಳೆಂದು ಘೋಷಿಸಲಾಗಿದೆ.
- 2017ರ ವೇಳೆಗೆ 334 ನಗರ ಪ್ರದೇಶಗಳನ್ನು ಬಯಲು ಮಲ ವಿಸರ್ಜನೆ ಮುಕ್ತ ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.
- ಗ್ರಾಮೀಣ ಪ್ರದೇಶಗಳಲ್ಲಿ ಹಿಮಾಚಲ ಪ್ರದೇಶ, ಕೇರಳ ಮತ್ತು ಸಿಕ್ಕಿಂ ರಾಜ್ಯಗಳು ಶೇ 90% ಶೌಚಾಲಯಗಳನ್ನು ಹೊಂದಿವೆ.
- ಆದರೆ ಬಿಹಾರ, ಓಡಿಶಾ ಮತ್ತು ಜಮ್ಮು ಮತ್ತು ಕಾಶ್ಮೀರದ ಗ್ರಾಮೀಣ ಪ್ರದೇಶದಲ್ಲಿ ಶೇ 30% ಕುಟುಂಬಗಳು ಮಾತ್ರ ಶೌಚಾಲಯ ನಿರ್ಮಿಸಿಕೊಂಡಿವೆ.

www.karunaduexams.com

**ಬಯಲು ಮಲ ವಿಸರ್ಜನೆ ಮುಕ್ತವೆಂದರೇನು?**

- ಯಾವುದೇ ಒಂದು ಪ್ರದೇಶವನ್ನು ಬಯಲು ಮಲ ವಿಸರ್ಜನೆ ಮುಕ್ತ ಎನ್ನಬೇಕಾದರೆ ಆ ಪ್ರದೇಶ ಎಲ್ಲಾ ಕುಟುಂಬಗಳು ಶೇ 100 ರಷ್ಟು ಶೌಚಾಲಯಗಳನ್ನು ಹೊಂದಿರಬೇಕು ಹಾಗೂ ಬಳಸುತ್ತಿರಬೇಕು. ಮುಖ್ಯವಾಗಿ ಬಯಲ ಮೇಲೆ ಮಲ ವಿಸರ್ಜನೆ ಮಾಡುತ್ತಿರಬಾರದು.

**ಐತಿಹಾಸಿಕ ಜಾಗತಿಕ ಹಸಿರು ಮನೆ ಅನಿಲ ಹೊರಸೂಸುವಿಕೆ ಒಪ್ಪಂದಕ್ಕೆ "ಕಿಗಾಲಿ"ಯಲ್ಲಿ ಸಹಿ**

ಐತಿಹಾಸಿಕ ಹವಾಮಾನ ಕುರಿತಾದ ಒಪ್ಪಂದಕ್ಕೆ ರುವಾಂಡದ ಕಿಗಾಲಿಯಲ್ಲಿ ವಿಶ್ವದ 197 ರಾಷ್ಟ್ರಗಳು ಸಹಿ ಮಾಡಿವೆ. ಓಝೋನ್ ಪದರದ ಮೇಲೆ ಹಾನಿಕಾರಕ ಪರಿಣಾಮ ಬೀರುವ ಪದಾರ್ಥಗಳ ಕುರಿತಾದ ಮಾಂಟ್ರಿಯಲ್ ನಿಯಮಾವಳಿ ಸದಸ್ಯ ರಾಷ್ಟ್ರಗಳ 28ನೇ ಸಭೆಯಲ್ಲಿ ಈ ಮಹತ್ವದ ಒಪ್ಪಂದಕ್ಕೆ ಸಹಿಹಾಕಲಾಯಿತು. "ಕಿಗಾಲಿ ಒಪ್ಪಂದ (Kigali Agreement)" ಎನ್ನಲಾಗಿರುವ ಈ ಒಪ್ಪಂದವು 1987ರ ಮಾಂಟ್ರಿಯಲ್ ನಿಯಮಾವಳಿಗೆ ತಿದ್ದುಪಡಿ ತಂದು ಪ್ರಬಲ ಹಸಿರು ಮನೆ ಅನಿಲವಾದ "ಹೈಡ್ರೊಫ್ಲೂರೊ ಇಂಗಾಲದ (ಎಚ್‌ಎಫ್ಸಿ)" ಬಳಕೆಯನ್ನು 2040ರ ವೇಳೆಗೆ ನಿಯಂತ್ರಿಸುವುದಾಗಿದೆ. ಒಪ್ಪಂದದಡಿ ಭಾರತ ಸೇರಿದಂತೆ 197 ದೇಶಗಳು "ಹೈಡ್ರೊಫ್ಲೂರೊ ಇಂಗಾಲದ (ಎಚ್‌ಎಫ್ಸಿ)" ಬಳಕೆಯನ್ನು 2045ರ ಆಧಾರ ವರ್ಷವಾಗಿಟ್ಟುಕೊಂಡು ಶೇ 85% ತಗ್ಗಿಸುವುದು ಆಗಿದೆ.

**"ಹೈಡ್ರೊಫ್ಲೂರೊ ಇಂಗಾಲದ ( Hydrofluorocarbons (HFCs)?**

- ಹಸಿರು ಮನೆ ಅನಿಲ ಗುಂಪಿಗೆ ಸೇರಿರುವ ಪ್ರಬಲ ಹಸಿರು ಮನೆ ಅನಿಲವಾಗಿರುವ ಹೈಡ್ರೊಫ್ಲೂರೊ ಇಂಗಾಲದ (ಎಚ್ ಎಫ್ಸಿ) ಯನ್ನು ರೆಫ್ರಿಜರೇಟರ್, ಹವಾ ನಿಯಂತ್ರಕ ಮತ್ತು ಏರ್ ಸ್ಪ್ರೇಗಳಲ್ಲಿ ಬಳಸಲಾಗುತ್ತದೆ.
- ಓಝೋನ್ ಪದರವನ್ನು ಸರಂಕ್ಷಿಸುವ ಸಲುವಾಗಿ ಹೈಡ್ರೊಫ್ಲೂರೊ ಇಂಗಾಲವನ್ನು 1987 ಮಾಂಟ್ರಿಲ್ ನಿಯಮಾವಳಿ ಪ್ರಕಾರ CFC ಬದಲಿಗೆ ಬಳಸಲು ತೀರ್ಮಾನಿಸಲಾಗಿತ್ತು.

**ಹೈಡ್ರೊಫ್ಲೂರೊ ಇಂಗಾಲ ಹಾನಿಕಾರಕವೇ?**

- ಇತ್ತೀಚಿನ ದಿನಗಳಲ್ಲಿ "ಹೈಡ್ರೊಫ್ಲೂರೊ ಇಂಗಾಲ" ಅನಿಲವು ಇತರೆ ಹಸಿರು ಮನೆ ಅನಿಲಗಳಿಗೆ ಹೋಲಿಸಿದರೆ ಸಾವಿರಾರು ಪಟ್ಟು ಹೆಚ್ಚು ತಾಪವನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದಾಗಿ ಸಾಬೀತಾಗಿದೆ. ಓಝೋನ್ ಪದರವನ್ನು ಸಂರಕ್ಷಿಸಲಿದೆ ಎಂದು ನಂಬಲಾಗಿದ್ದ, ಈ ಅನಿಲದಿಂದ ಜಾಗತಿಕ ತಾಪಮಾನ ಮತ್ತಷ್ಟು ಹೆಚ್ಚಳವಾಗಿದೆ.
- ಪ್ರಸ್ತುತ ಹೈಡ್ರೊಫ್ಲೂರೊ ಇಂಗಾಲ ಜಗತ್ತಿನಲ್ಲಿ ಅತಿ ವೇಗದಿಂದ ಬಳಕೆಯಾಗುತ್ತಿರುವ ಅನಿಲವಾಗಿದ್ದು, ಪ್ರತಿ ಈ ಅನಿಲ ಬಿಡುಗಡೆಯಲ್ಲಿ ಶೇ 10% ಏರಿಕೆಯಾಗುತ್ತಿದೆ.

**ಕಿಗಾಲಿ ಒಪ್ಪಂದದ ಮಹತ್ವ:**

- ಓಝೋನ್ ರಂಧ್ರವನ್ನು ಕುಗ್ಗಿಸುವ ಮೂಲಕ ಓಝೋನ್ ಪದರವನ್ನು ಸಂರಕ್ಷಿಸುವ ಸಲುವಾಗಿ 1987ರಲ್ಲಿ ಜಾರಿಗೆ ತರಲಾಗಿದ್ದ ಮಾಂಟ್ರಿಯಲ್ ನಿಯಮಾವಳಿಗೆ ಕಿಗಾಲಿ ಒಪ್ಪಂದ (Kigali Agreement)"ದ ಮೂಲಕ ತಿದ್ದುಪಡಿ ತರಲಾಗಿದೆ.
- ಮಾಂಟ್ರಿಯಲ್ ನಿಯಮಾವಳಿ ಪ್ರಕಾರ ಕೇವಲ ಓಝೋನ್ ಪದರಕ್ಕೆ ಹಾನಿಕಾರ ಪದಾರ್ಥಗಳ ಬಳಕೆ ಮಾತ್ರ ತಗ್ಗಿಸುವುದಾಗಿತ್ತು, ಆದರೆ ತಿದ್ದುಪಡಿ ತರುವ ಮೂಲಕ ಜಾಗತಿಕ ತಾಪಮಾನಕ್ಕೆ ಕೊಡುಗೆ ನೀಡುವ ಅನಿಲಗಳ ಬಳಕೆಯ ಮೇಲು ನಿರ್ಬಂಧ ಹೇರಲಾಗಿದೆ.
- ಶತಮಾನದ ಅಂತ್ಯಕ್ಕೆ 0.5 ಸೆಲ್ಸಿಯಸ್ ಉಷ್ಣಾಂಶ ಏರಿಕೆಯನ್ನು ನಿಯಂತ್ರಿಸಲು ಈ ಒಪ್ಪಂದ ಸಹಕಾರಿಯಾಗಲಿದೆ.

www.karunaduexams.com

- ಕಿಗಾಲಿ ಒಪ್ಪಂದ ಪ್ರಕಾರ ಸದಸ್ಯ ರಾಷ್ಟ್ರಗಳು 2019 ರಿಂದ ಹೆಚ್ಎಫ್ಸಿ ಬಳಕೆಯನ್ನು ಕಡ್ಡಾಯವಾಗಿ ತಗ್ಗಿಸಬೇಕಿದೆ. ಈ ಒಪ್ಪಂದಕ್ಕೆ ವಿರುದ್ದವಾಗಿ ನಡೆದರೆ ದಂಡ ವಿಧಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

**ವಿವಿಧ ಕಾಲಾವಧಿ:**

ಹೈಡ್ರೊಫ್ಲೂರೊ ಇಂಗಾಲ ಬಳಕೆಯನ್ನು ತಗ್ಗಿಸುವ ಸಲುವಾಗಿ ಸದಸ್ಯ ರಾಷ್ಟ್ರಗಳಿಗೆ ವಿವಿಧ ರೀತಿಯ ಕಾಲಾವಕಾಶಗಳನ್ನು ನೀಡಲಾಗಿದೆ.

- **ಮೊದಲ ತಂಡ:** ಈ ತಂಡದಲ್ಲಿ ಅಭಿವೃದ್ದಿ ಹೊಂದಿರುವ ದೇಶಗಳಾದ ಅಮೆರಿಕ, ಐರೋಪ್ಯ ಒಕ್ಕೂಟ ರಾಷ್ಟ್ರಗಳಿದ್ದು, 2018ರ ವೇಳೆಗೆ ಈ ಅನಿಲದ ಉತ್ಪಾದನೆ ಮತ್ತು ಬಳಕೆಯನ್ನು ನಿರ್ಬಂಧಿಸಲಿವೆ. 2012ರ ವೇಳೆಯಲ್ಲಿ ಬಳಸಲಾಗುತ್ತಿದ್ದ HFC ಪ್ರಮಾಣದಲ್ಲಿ 2036ರ ವೇಳೆಗೆ ಶೇ 12% ತಗ್ಗಿಸಲಿವೆ.
- **ಎರಡನೇ ತಂಡ:** ಚೀನಾ, ಬ್ರೆಜಿಲ್ ಮತ್ತು ಆಫ್ರಿಕಾ ದೇಶಗಳನ್ನು ಈ ಗುಂಪು ಒಳಗೊಂಡಿದೆ. ಈ ರಾಷ್ಟ್ರಗಳು ಹೆಚ್ಎಫ್ಸಿ ಬಳಕೆಯನ್ನು 2024ರ ವೇಳೆಗೆ ಸ್ಥಗಿತಗೊಳಿಸಲಿವೆ.
- **ಮೂರನೇ ತಂಡ:** ಭಾರತ, ಇರಾನ್, ಪಾಕಿಸ್ತಾನ ಇತ್ಯಾದಿ ರಾಷ್ಟ್ರಗಳನ್ನು ಈ ಗುಂಪಿಗೆ ಸೇರ್ಪಡೆಗೊಳಿಸಲಾಗಿದೆ. ಈ ರಾಷ್ಟ್ರಗಳು ಹೆಚ್ಎಫ್ಸಿ ಬಳಕೆಯನ್ನು 2028 ವೇಳೆಗೆ ಸ್ಥಗಿತಗೊಳಿಸಲಿವೆ.

**ಪ್ಯಾರಿಸ್ ಒಪ್ಪಂದಕ್ಕಿಂತ ಹೇಗೆ ಭಿನ್ನವಾಗಿದೆ?**

- ಪ್ಯಾರಿಸ್ ಒಪ್ಪಂದ 2020 ರಿಂದ ಜಾರಿಗೆ ಬರಲಿದ್ದು, ಇದರಡಿ ಜಾಗತಿಕ ಹಸಿರು ಮನೆ ಹೊರಸೂಸುವಿಕೆಯನ್ನು ತಗ್ಗಿಸಲು ಸದಸ್ಯ ರಾಷ್ಟ್ರಗಳ ಮೇಲೆ ಕಡ್ಡಾಯ ನಿರ್ಬಂಧವನ್ನು ಹೇರಲಾಗಿಲ್ಲ.

## ಕಾಶ್ಮೀರದ ಜಿಂಕೆಗಳನ್ನು ಅಪಾಯದ ಅಂಚಿನಲ್ಲಿರುವ ಪ್ರಭೇದವೆಂದು ಘೋಷಿಸಲು ಐಯುಸಿಎನ್ ತೀರ್ಮಾನ

ಅಂತಾರಾಷ್ಟ್ರೀಯ ಪರಿಸರ ಸಂರಕ್ಷಣೆ ಒಕ್ಕೂಟ(ಐಯುಸಿಎನ್)ವು ಕಾಶ್ಮೀರದ ಜಿಂಕೆಗಳನ್ನು ಅಪಾಯದ ಅಂಚಿನಲ್ಲಿರುವ ಪ್ರಭೇದವೆಂದು ಘೋಷಿಸಲು ನಿರ್ಧರಿಸಿದೆ. ಕಾಶ್ಮೀರದ ಜಿಂಕೆಯನ್ನು ಹಂಗುಲ್ ಎಂತಲೂ ಕರೆಯಲಾಗುತ್ತದೆ. ಐಯುಸಿಎನ್ ಈ ನಿರ್ಧಾರದಿಂದ ತೀವ್ರವಾಗಿ ಕಣ್ಮರೆಯಾಗುತ್ತಿರುವ ಕಾಶ್ಮೀರದ ಜಿಂಕೆಗಳ ರಕ್ಷಣೆಗೆ ಅನುಕೂಲವಾಗಲಿದೆ.

**ಕಾಶ್ಮೀರದ ಜಿಂಕೆ/ಹಂಗುಲ್:**

- ಕಾಶ್ಮೀರದ ಸಾರಂಗಗಳು ಭಾರತದ ಸ್ಥಳೀಯ ಪ್ರಭೇದವಾದ ಇಲ್ಕ್ (Elk)ನ ಉಪಪ್ರಭೇದವಾಗಿವೆ.
- ಮುಂಚೆ ಇವುಗಳನ್ನು ಕೆಂಪು ಸಾರಂಗದ ಉಪಪ್ರಭೇದಗಳೆಂದು ನಂಬಲಾಗಿತ್ತು. ಆದರೆ ಇವುಗಳ ಮಿಟೋಕಾಂಡಿಯಾ ಡಿಎನ್ಎ ಅಧ್ಯಯನ ನಡೆಸಿದ ನಂತರ ಕಾಶ್ಮೀರದ ಸಾರಂಗಗಳನ್ನು ಇಲ್ಕ್ ಪ್ರಭೇದಗಳ ಉಪಪ್ರಭೇದವೆಂದು ಖಚಿತಪಡಿಸಲಾಗಿದೆ.
- ಕಾಶ್ಮೀರದ ಜಿಂಕೆಗಳು ಹೆಚ್ಚಾಗಿ ಕಾಶ್ಮೀರದ ದಟ್ಟ ನದಿ ಕಾಡು ಕಣಿವೆಗಳು ಹಾಗೂ ಕಾಶ್ಮೀರ ಕಣಿವೆಯ ಪರ್ವತ ಪ್ರದೇಶ ಮತ್ತು ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯಲ್ಲಿ ಕಂಡುಬರುತ್ತವೆ.
- 1940ರ ಅಸುಪಾಸಿನಲ್ಲಿ 3000 ರಿಂದ 5000 ಇದ್ದ ಇವುಗಳ ಸಂಖ್ಯೆ ಗಣನೀಯವಾಗಿ ಕುಸಿದಿದ್ದು, ಪ್ರಸ್ತುತ 150 ಜಿಂಕೆಗಳನ್ನು ಮಾತ್ರ ಕಾಣಬಹುದಾಗಿದೆ. ಕಾಶ್ಮೀರದ ದಚಿಗಾಮ್ ರಾಷ್ಟ್ರೀಯ ಉದ್ಯಾನವನ ಇವುಗಳ ಸಂರಕ್ಷಣೆಗೆ ಮೀಸಲಾಗಿದೆ.

**ಅಳಿವಿಗೆ ಕಾರಣ:**

- ಆವಾಸಸ್ಥಾನದ ನಾಶ, ಕಳ್ಳಭೇಟೆ ಮತ್ತು ದೇಶಿಯ ಜಾನುವಾರುಗಳ ಅತಿಯಾದ ಮೇಯುವಿಕೆ ಇವುಗಳ ಅವನತಿಗೆ ಕಾರಣವಾಗಿವೆ.

www.karunadueyams.com

## ಇನ್ಫೋಸಿಸ್ ಪ್ರತಿಷ್ಠಾನದಿಂದ ಬನ್ನೇರುಘಟ್ಟ ಉದ್ಯಾನವನದಲ್ಲಿ ಜೀಬ್ರಾ ಎನ್‌ಕ್ಲೋಸರ್ ಸ್ಥಾಪನೆ

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಇನ್ಫೊಸಿಸ್ ಪ್ರತಿಷ್ಠಾನದ ವತಿಯಿಂದ ರೂ 63 ಲಕ್ಷ ವೆಚ್ಚದಲ್ಲಿ ಜೀಬ್ರಾ ಎನ್‌ಕ್ಲೋಸರ್ ಅನ್ನು ನಿರ್ಮಿಸಲಾಗಿದೆ. ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ ಅವರು ಹೇಸರಗತ್ತೆ ಜೀಬ್ರಾ ಎನ್‌ಕ್ಲೋಸರ್ ಅನ್ನು ಉದ್ಘಾಟಿಸಿದರು.

**ಪ್ರಮುಖಾಂಶಗಳು**:

- ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸ್ಥಾಪಿಸಿರುವ ಜೀಬ್ರಾ ಆವರಣದಲ್ಲಿ ಎರಡು ಗಂಡು ಹಾಗೂ ಎರಡು ಹೆಣ್ಣು ಜೀಬ್ರಾಗಳಿವೆ.
- ಇವುಗಳನ್ನು ಇಸ್ರೇಲ್‌ನ ಟೆಲ್‌ಅವಿವ್ ರಾಮತ್‌ಜನ್ ಸಫಾರಿಯಿಂದ ಪ್ರಾಣಿ ವಿನಿಮಯ ಯೋಜನೆಯಡಿ ಬನ್ನೇರುಘಟ್ಟಕ್ಕೆ ತರಲಾಗಿದೆ.
- ಈ ಜೀಬ್ರಾಗಳಿಗೆ ಸುಧಾ.ಎನ್.ಮೂರ್ತಿ ಅವರು ಭರತ್, ಪೃಥ್ವಿ, ಕಾವೇರಿ ಹಾಗೂ ಹೇಮಾವತಿ ಎಂದು ನಾಮಕರಣ ಮಾಡಿದ್ದು ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿವೆ.

**ಬನ್ನೇರುಘಟ್ಟ ಉದ್ಯಾನವನ**

- 1972ರಲ್ಲಿ ಪುಟ್ಟ ಪ್ರವಾಸಿತಾಣವಾಗಿದ್ದ 'ಬನ್ನೇರುಘಟ್ಟ ಪಾರ್ಕ್ ' ಅಭಿವೃದ್ಧಿ ಹೊಂದಿ ಪ್ರತಿ ವರ್ಷ ರೂ 25 ಕೋಟಿ ಆದಾಯ ಗಳಿಸುವ ಹಂತಕ್ಕೆ ಬೆಳೆದಿದೆ. ಉದ್ಯಾನದಲ್ಲಿ 95 ಪ್ರಭೇದಗಳ 900 ಪ್ರಾಣಿಗಳಿದ್ದು ಕಳೆದ ವರ್ಷ 12 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ.

## ಅಂಟಾರ್ಟಿಕದ ರಾಸ್ ಸಮುದ್ರ ವಿಶ್ವದ ಅತಿ ದೊಡ್ಡ ಕಡಲ ಸಂರಕ್ಷಿತ ಪ್ರದೇಶ

ಅಂಟಾರ್ಟಿಕದ ರಾಸ್ ಸಮುದ್ರವನ್ನು ವಿಶ್ವದ ಅತಿ ದೊಡ್ಡ ಕಡಲ ಸಂರಕ್ಷಿತ ಪ್ರದೇಶ (Marine Protect Area)ವೆಂದು ಘೋಷಿಸಲಾಗಿದೆ. ಆಸ್ಟ್ರೇಲಿಯಾದ ಹೊಬರ್ಟ್ ನಲ್ಲಿ ನಡೆದ ಅಂತಾರಾಷ್ಟ್ರೀಯ ಅಂಟಾರ್ಟಿಕ ಸಾಗರ ಜೀವ ಸಂಪನ್ಮೂಲ (CCAMLR) ಸಂರಕ್ಷಣೆ ಆಯೋಗದ ಸಭೆಯಲ್ಲಿ 24 ರಾಷ್ಟ್ರಗಳು ಮತ್ತು ಐರೋಪ್ಯ ಒಕ್ಕೂಟದ ನಡುವಿನ ಐತಿಹಾಸಿಕ ಒಪ್ಪಂದ ಮೂಡುವ ಮೂಲಕ ರಾಸ್ ಸಮುದ್ರವನ್ನು ವಿಶ್ವದ ಅತಿ ದೊಡ್ಡ ಕಡಲ ಸಂರಕ್ಷಿತ ಪ್ರದೇಶವೆಂದು ಘೋಷಿಸಲಾಯಿತು.

- ರಾಸ್ ಸಮುದ್ರ ವಿಶ್ವದ ಕಡೆಯ ಸಮುದ್ರ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿದೆ. ಇದರ ಒಟ್ಟಯ ವಿಸ್ತೀರ್ಣ 1.6 ಮಿಲಿಯನ್ ಚದರ ಕಿ.ಮೀರಷ್ಟಿದೆ.
- ರಾಸ್ ಸಮುದ್ರವನ್ನು ಕಡಲ ಸಂರಕ್ಷಿತ ಪ್ರದೇಶವೆಂದು ಘೋಷಿಸಿರುವ ಹಿನ್ನಲೆಯಲ್ಲಿಈ ಪ್ರದೇಶದ ಸರಿಸುಮಾರು ಮುಕ್ಕಾಲಷ್ಟು ಭಾಗದಲ್ಲಿ ಮೀನುಗಾರಿಕೆ ಮೇಲೆ ಸಂಪೂರ್ಣ ನಿಷೇಧ ಹೇರಲಾಗುವುದು.
- ರಾಸ್ ಸಮುದ್ರ ವಿಶ್ವದ ಅಪರೂಪದ ಜಲಚರಗಳ ಆವಾಸ ತಾಣವಾಗಿದೆ. ವಿಶ್ವದ ಶೇ 38% ಅಡೆಲೀ ಪೆಂಗ್ವಿನ್ಗಳು, ಶೇ 30 ರಷ್ಟು ಅಂಟಾರ್ಟಿಕ್ ಪೆಟ್ರಲ್ ಮತ್ತು ಶೇ 6% ರಷ್ಟು ಸಣ್ಣ ತಿಮಿಂಗಲಗಳನ್ನು ಹೊಂದಿದೆ.

**ಅಂತಾರಾಷ್ಟ್ರೀಯ ಅಂಟಾರ್ಟಿಕ ಸಾಗರ ಜೀವ ಸಂಪನ್ಮೂಲ ಸಂರಕ್ಷಣೆ ಆಯೋಗ:**

- ಅಂತಾರಾಷ್ಟ್ರೀಯ ಅಂಟಾರ್ಟಿಕ ಸಾಗರ ಜೀವ ಸಂಪನ್ಮೂಲಗಳ ಸಂರಕ್ಷಣೆ ಆಯೋಗವನ್ನು ((Commission for the Conservation of Antarctic Marine Living Resources (CCAMLR)) ಅಂಟಾರ್ಟಿಕ ಸಮುದ್ರ ಜೀವ ವೈವಿಧ್ಯತೆ ಸಂರಕ್ಷಿಸುವ ಸಲುವಾಗಿ 1982 ರಲ್ಲಿ ರಚಿಸಲಾಗಿದೆ. ಇದು ಅಂಟಾರ್ಟಿಕ ಒಪ್ಪಂದ ವ್ಯವಸ್ಥೆಯ ಒಂದು ಭಾಗ.
- 14 ರಾಷ್ಟ್ರಗಳು ಇದಕ್ಕೆ ಸಹಿ ಮಾಡಲಾಗಿದ್ದು, ಭಾರತ, ಐರೋಪ್ಯ ಒಕ್ಕೂಟ ಸೇರಿದಂತೆ 35 ರಾಷ್ಟ್ರಗಳು ಅನುಮೋದಿಸಿವೆ.



www.karunaduexams.com

- ಇದರ ಕೇಂದ್ರ ಕಚೇರಿ ಆಸ್ಟ್ರೇಲಿಯಾದ ತಸ್ಮನಿಯಾದಲ್ಲಿದೆ.

**ಹಿಮಾಚಲ ಪ್ರದೇಶ ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯ**

ಹಿಮಾಚಲ ಪ್ರದೇಶ ರಾಜ್ಯವನ್ನು ಅಧಿಕೃತವಾಗಿ ಬಯಲು ಮಲ ವಿಸರ್ಜನೆ ಮುಕ್ತ ರಾಷ್ಟ್ರವೆಂದು ಘೋಷಿಸಲಾಗಿದೆ. ಸ್ವಚ್ಚ ಭಾರತ ಅಭಿಯಾನದಡಿ ರಾಜ್ಯದಲ್ಲಿ ಎಲ್ಲಾ ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಂಡಿದ್ದು, ಬಳಸಲಾಗುತ್ತಿದೆ. ಆ ಮೂಲಕ ಸಿಕ್ಕಿಂ ನಂತರ ಈ ಸಾಧನೆ ಮಾಡಿದ ಎರಡನೇ ರಾಜ್ಯ ಹಿಮಾಚಲ ಪ್ರದೇಶ. ಆದರೆ ದೊಡ್ಡ ರಾಜ್ಯಗಳ ಪೈಕಿ ಈ ಸಾಧನೆ ಮಾಡಿದ ಮೊದಲ ರಾಜ್ಯವೆನಿಸಿದೆ.

- ರಾಜ್ಯದ ಎಲ್ಲಾ ಕುಟುಂಬಗಳು ಶೇ 100% ಶೌಚಾಲಯವನ್ನು ನಿರ್ಮಿಸಿಕೊಂಡು, ಬಳಸುತ್ತಿವೆ.
- ಹಿಮಾಚಲ ಪ್ರದೇಶದ 12 ಜಿಲ್ಲೆಗಳು ಬಯಲು ಮಲ ವಿಸರ್ಜನೆ ಮುಕ್ತವಾಗಿವೆ.

**ಬಯಲು ಮಲ ವಿಸರ್ಜನೆ ಮುಕ್ತವೆಂದರೆ?**

- ಯಾವುದೇ ಒಂದು ಪ್ರದೇಶವನ್ನು ಬಯಲು ಮಲ ಮುಕ್ತ ಪ್ರದೇಶವೆಂದು ಘೋಷಿಸಲು ಆ ಪ್ರದೇಶದ ಎಲ್ಲಾ ಕುಟುಂಬಗಳು, ಶಾಲೆ, ಅಂಗನವಾಡಿ ಮತ್ತು ಸಾವರ್ಜನಿಕ ಸಂಸ್ಥೆಗಳು ಶೌಚಾಲಯಗಳನ್ನು ನಿರ್ಮಿಸಿ ಬಳಸಬೇಕು ಅಲ್ಲದೇ ಬಯಲು ಪ್ರದೇಶದಲ್ಲಿ ಮಲ ವಿಸರ್ಜನೆ ಸಂಪೂರ್ಣವಾಗಿ ನಿಂತಿರಬೇಕು.

**ಬಯಲು ಮಲದ ವಿಸರ್ಜನೆಯಿಂದಾಗುವ ತೊಂದರೆ**:

- ಜಂತುಗಳ ಸೋಂಕು, ಪೋಲಿಯೊ, ಡಯಾರಿಯೊ ಮತ್ತು ಹೆಪಟೆಟಿಸ್ ಕಾಯಿಲೆಗಳಿಗೆ ಮೂಲ ಕಾರಣ ಬಯಲು ಮಲ ವಿಸರ್ಜನೆ.

www.karunaduexams.com

## ಸುದ್ದಿಯಲ್ಲಿರುವ ವ್ಯಕ್ತಿಗಳು

**21ನೇ ಕಾನೂನು ಆಯೋಗದ ಪೂರ್ಣಾವಧಿ ಸದಸ್ಯರಾಗಿ ಎಸ್ ಸಿವಕುಮಾರ್ ನೇಮಕ**

21ನೇ ಭಾರತ ಕಾನೂನು ಆಯೋಗದ ಪೂರ್ಣಾವಧಿ ಸದಸ್ಯರಾಗಿ ಎಸ್ ಶಿವಕುಮಾರ್ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ಕೇರಳ ಮೂಲದವರಾದ ಎಸ್ ಸಿವಕುಮಾರ್ ಅವರು ಇಂಡಿಯನ್ ಲಾ ಇನ್ಸ್ ಟಿಟ್ಯೂಟ್, ದೆಹಲಿಯಲ್ಲಿ ಪ್ರಾಧ್ಯಪಕರಾಗಿದ್ದಾರೆ. ಕಾನೂನು ಕುರಿತಾದ ಹಲವಾರು ಪುಸ್ತಕಗಳನ್ನು ಇವರು ಬರೆದಿರುವರು. ಆಡಳಿತಾತ್ಮಕ ಕಾನೂನು ಮತ್ತು ಮಾಧ್ಯಮ ಕಾನೂನಿನಲ್ಲಿ ಪರಿಣಿತಿ ಹೊಂದಿರುವ ಇವರಿಗೆ 2008ರಲ್ಲಿ ರಾಷ್ಟ್ರೀಯ ಕಾನೂನು ಪ್ರಶಸ್ತಿ ಸಂದಿದೆ.

**21ನೇ ಕಾನೂನು ಆಯೋಗದ ಬಗ್ಗೆ:**

- ಕೇಂದ್ರ ಸರ್ಕಾರ 21ನೇ ಭಾರತ ಕಾನೂನು ಆಯೋಗವನ್ನು 1ನೇ ಸೆಪ್ಟೆಂಬರ್, 2015 ರಿಂದ 31ನೇ ಆಗಸ್ಟ್ 2018ರ ತನಕ ಮೂರು ವರ್ಷ ಅವಧಿಗೆ ರಚಿಸಿದೆ.
- ಸುಪ್ರೀಂಕೋರ್ಟ್ನ ನಿವೃತ್ತ ನ್ಯಾಯಾಧೀಶರಾದ ಬಲ್ಬೀರ್ ಸಿಂಗ್ ಚೌಹಣ್ ರವರು 21ನೇ ಕಾನೂನು ಆಯೋಗದ ಅಧ್ಯಕ್ಷರಾಗಿದ್ದಾರೆ.
- ಭಾರತೀಯ ದಂಡ ಸಂಹಿತೆ (ಐಪಿಸಿ), ಅಪರಾಧ ನ್ಯಾಯ ವ್ಯವಸ್ಥೆ ಮತ್ತು ಜಾಮೀನು ಕಾನೂನು ವಿಮರ್ಶೆ ಮಾಡಿ ಏಕರೂಪ ವ್ಯವಸ್ಥೆಯನ್ನು ಜಾರಿಗೆ ತರಲು ಶಿಫಾರಸ್ಸು ಮಾಡುವುದು ಈ ಆಯೋಗದ ಪ್ರಮುಖ ಜವಾಬ್ದಾರಿಗಳಾಗಿವೆ. ಸಮಾನ ನಾಗರೀಕ ಸಂಹಿತೆ ಅಳವಡಿಸಿಕೊಳ್ಳುವ ಕಾರ್ಯಸಾಧ್ಯತೆ ಹಾಗೂ ಹಳೆಯ ಕಾನೂನುಗಳನ್ನು ರದ್ದುಪಡಿಸುವ ಬಗ್ಗೆಯು ಶಿಫಾರಸ್ಸುಗಳನ್ನು ಆಯೋಗ ಮಾಡಲಿದೆ.

**ಭಾರತ ಕಾನೂನು ಆಯೋಗ:**

- ಭಾರತ ಕಾನೂನು ಆಯೋಗ ಶಾಸನಬದ್ದವಲ್ಲದ ಮತ್ತು ಸಂವಿಧಾನಿಕವಲ್ಲದ ಸಂಸ್ಥೆಯಾಗಿದ್ದು, ಕೇಂದ್ರ ಸರ್ಕಾರ ಕಾಲ ಕಾಲಕ್ಕೆ ನೇಮಕ ಮಾಡುತ್ತದೆ.
- ಪ್ರಪ್ರಥಮ ಭಾರತ ಕಾನೂನು ಆಯೋಗವನ್ನು 1955ರಲ್ಲಿ ಸ್ಥಾಪಿಸಲಾಗಿದ್ದು, ಅನಂತರ ಪ್ರತಿ ಮೂರು ವರ್ಷಕ್ಕೊಮ್ಮೆ ಆಯೋಗಗಳನ್ನು ರಚಿಸಲಾಗಿದೆ.
- ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಧೀಶರು ಅಥವಾ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಾಧೀಶರು ಕಾನೂನು ಆಯೋಗದ ಅಧ್ಯಕ್ಷರಾಗಿರುತ್ತಾರೆ.
- ದೇಶದಲ್ಲಿ ಕಾನೂನಿನ ಪ್ರಗತಿಪರ ಅಭಿವೃದ್ದಿಗಾಗಿ 262 ಪ್ರಮುಖ ಶಿಫಾರಸ್ಸುಗಳನ್ನು ವಿವಿಧ ಕಾನೂನು ಆಯೋಗಗಳು ಇದುವರೆಗೂ ಮಾಡಿವೆ.

**ಇಸ್ಟೋನಿಯಾದ ಮೊದಲ ಮಹಿಳಾ ರಾಷ್ಟ್ರಾಧ್ಯಕ್ಷರಾಗಿ ಕೆರ್ಸ್ಟಿ ಕಜುಲೈದ್ ನೇಮಕ**

ಇಸ್ಟೋನಿಯಾದ ಸಂಸತ್ತು ಕೆರ್ಸ್ಟಿ ಕಜುಲೈದ್ (Kersti Kaljulaid) ಅವರನ್ನು ಇಸ್ಟೋನಿಯಾದ ಅಧ್ಯಕ್ಷರನ್ನಾಗಿ ಆಯ್ಕೆಮಾಡಿದೆ. ಕೆರ್ಸ್ಟಿ ಕಜುಲೈದ್ ಅವರು ಇಸ್ಟೋನಿಯಾದ ಮೊದಲ ಮಹಿಳಾ ಅಧ್ಯಕ್ಷರಾಗಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 20 ಸದಸ್ಯರ ಗೈರು ಹಾಜರಿ ಹೊರತಾಗಿಯೂ ಕೆರ್ಸ್ಟಿ ಅವರ ಪರವಾಗಿ 81-0 ಮತಗಳು ದಾಖಲಾದವು.

- ಕೆರ್ಸ್ಟಿ ಕಜುಲೈದ್ ಇಸ್ಟೋನಿಯಾದ ಐದನೇ ರಾಷ್ಟ್ರಾಧ್ಯಕ್ಷರು. ಕೆರ್ಸ್ಟಿ ಅವರು ಅಕ್ಟೋಬರ್ 10, 2016 ರಂದು ಅಧಿಕಾರವಹಿಸಿಕೊಳ್ಳಲಿದ್ದಾರೆ.

www.karunanduexams.com

- ಕೆರ್ಸ್ಟಿ ಅವರು ಇಸ್ಟೋನಿಯಾದ ರಾಷ್ಟ್ರಾಧ್ಯಕ್ಷ ಹುದ್ದೆಯನ್ನು ಅಲಂಕರಿಸಿದ ಕಿರಿಯ ವ್ಯಕ್ತಿ ಸಹ ಆಗಿದ್ದಾರೆ.
- ಕೆರ್ಸ್ಟಿ ಅವರು ಜೀವಶಾಸ್ತ್ರದಲ್ಲಿ ಪದವಿ ಪಡೆದಿದ್ದು ತಳಿಶಾಸ್ತ್ರದಲ್ಲಿ ಪರಿಣಿತಿಯನ್ನು ಹೊಂದಿದ್ದಾರೆ. ಟರ್ಟು ವಿಶ್ವವಿದ್ಯಾಲಯದಿಂದ ಎಂಬಿಎ ಪದವಿಯನ್ನು ಪಡೆದಿದ್ದಾರೆ.
- 1999ರಲ್ಲಿ ಇಸ್ಟೋನಿಯಾದ ಪ್ರಧಾನ ಮಂತ್ರಿ ಕಚೇರಿಯಲ್ಲಿ ಆರ್ಥಿಕ ನೀತಿ ಸಲಹೆಗಾರರಾಗಿ ನೇಮಕಗೊಂಡರು.
- 2011 ರಲ್ಲಿ ಯುರೋಪಿಯನ್ ಆಡಿಟರ್ಸ್ ಕೋರ್ಟ್ ನಲ್ಲಿ ಇಸ್ಟೋನಿಯಾದ ಪ್ರತಿನಿಧಿಯಾಗಿ ಸೇವೆ ಸಲ್ಲಿಸುತ್ತಿದ್ದರು.

**ಮೊರಾಕೊದ ಪ್ರಧಾನ ಮಂತ್ರಿಯಾಗಿ "ಅಬ್ದೆಲಿಲಹ್ ಬೆಕಿರನೆ (Abdelilah Bekirane)" ನೇಮಕ**

ಅಬ್ದೆಲಿಲಹ್ ಬೆಕಿರನೆ ರವರು ಮೊರಾಕಾದ ಪ್ರಧಾನಿಯಾಗಿ ಎರಡನೇ ಅವಧಿಗೆ ನೇಮಕಗೊಂಡಿದ್ದಾರೆ. ನವೆಂಬರ್ 2011ರಿಂದ ಬೆಕಿರನೆ ಅವರು ಮೊರಾಕೊದ ಪ್ರಧಾನಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇತ್ತೀಚೆಗೆ ನಡೆದ ಸಾರ್ವತಿಕ ಚುನಾವಣೆಯಲ್ಲಿ ಬೆಕಿರನೆ ನೇತೃತ್ವದ "ಇಸ್ಲಾಮಿಕ್ ಜಸ್ಟೀಸ್ ಅಂಡ್ ಡೆವೆಲಪ್ಮೆಂಟ್" ಪಕ್ಷ ಜಯಭೇರಿಯಾದ ಹಿನ್ನಲೆಯಲ್ಲಿ ಮೊರಾಕೊದ ಅಧ್ಯಕ್ಷ ಮೊಹಮ್ಮದ್ V ರವರು ಬೆಕಿರನೆ ಅವರನ್ನು ಪ್ರಧಾನಿಯೆಂದು ಅಧಿಕೃತವಾಗಿ ಘೋಷಿಸಿದರು.

**ಹಿನ್ನಲೆ**:

- ಇತ್ತೀಚೆಗೆ ನಡೆದ ಮೊರಾಕೊದ ಸಾರ್ವತಿಕ ಚುನಾವಣೆಯಲ್ಲಿ ಬೆಕರನೆ ಅವರ "ಇಸ್ಲಾಮಿಕ್ ಜಸ್ಟೀಸ್ ಅಂಡ್ ಡೆವೆಲಪ್ಮೆಂಟ್" ಪಕ್ಷ 125 ಸ್ಥಾನಗಳನ್ನು ಗೆಲ್ಲುವ ಮೂಲಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.
- ಮೊರಾಕೊದ ವಿರೋಧ ಪಕ್ಷವಾದ "ಅಥೆಂಟಿಸಿಟಿ ಮತ್ತು ಮಾಡರ್ನಿಟಿ" ಪಕ್ಷ 102 ಸ್ಥಾನಗಳನ್ನು ಗೆದ್ದು ಎರಡನೇ ಸ್ಥಾನವನ್ನು ಪಡೆದುಕೊಂಡರೆ, ದೇಶದ ಅತ್ಯಂತ ಹಳೆಯ ಪಕ್ಷವಾದ ಇಂಡಿಪೆಂಡೆನ್ಸ್ ಪಕ್ಷ ಕೇವಲ 46 ಸ್ಥಾನಗಳನ್ನು ಗೆದ್ದಿತು.
- ಮೊರಾಕೊ ಬಹು ಪಕ್ಷೀಯ ವ್ಯವಸ್ಥೆಯನ್ನು ಹೊಂದಿದ್ದು, 395 ಸ್ಥಾನಗಳನ್ನು ಹೊಂದಿರುವ ಕೆಳಮನೆಯಲ್ಲಿ ಯಾವುದೇ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ಪಡೆಯುವುದು ಅಸಾಧ್ಯವಾಗಿತ್ತು.

**ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ ಮುಖ್ಯಸ್ಥರಾಗಿ ಪಿ ಎಸ್ ರಾಘವನ್ ನೇಮಕ**

ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯನ್ನ (ಎನ್ಎಸ್ಎಬಿ) ಪುನರ್ ಸ್ಥಾಪಿಸಲಾಗಿದ್ದು, ಇದರ ಮುಖ್ಯಸ್ಥರಾಗಿ ಪಿ.ಎಸ್. ರಾಘವನ್ ಅವರನ್ನು ನೇಮಿಸಲಾಗಿದೆ. ಪಿ ಎಸ್ ರಾಘವನ್ ಹಿಂದೆ ರಷ್ಯಾದಲ್ಲಿ ಭಾರತದ ರಾಯಭಾರಿಯಾಗಿದ್ದರು. ಪುನರ್ ಸ್ಥಾಪಿಸಲಾಗಿರುವ ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯು ಮುಖ್ಯಸ್ಥರು ಸೇರಿದಂತೆ ನಾಲ್ಕು ಜನರನ್ನು ಒಳಗೊಂಡಿದೆ.

**ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ ಬಗ್ಗೆ**:

- ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯನ್ನ ಮೊದಲ ಬಾರಿಗೆ 1998 ರಲ್ಲಿ ಸ್ಥಾಪಿಸಲಾಯಿತು. ಕೆ ಸುಬ್ರಮಣ್ಯಂರವರು ಮೊದಲ ಭದ್ರತಾ ಸಲಹಾ ಮಂಡಳಿಯ ಮುಖ್ಯಸ್ಥರಾಗಿದ್ದರು.
- ಕೊನೆಯ ಬಾರಿಗೆ ರಚಿಸಲಾಗಿದ್ದ ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿ ಅಧ್ಯಕ್ಷರಾಗಿದ್ದ ಮಾಜಿ ವಿದೇಶಾಂಗ ಕಾರ್ಯದರ್ಶಿ ಶ್ಯಾಮ್ ಶರಣ್ ನೇಮಕಗೊಂಡಿದ್ದರು. ಅವರ ಅವಧಿ 2015ರ ಜನವರಿಗೆ ಕೊನೆಗೊಂಡಿತ್ತು. ಈ ಮಂಡಳಿಯು ಒಟ್ಟು 14 ಸದಸ್ಯರನ್ನು ಒಳಗೊಂಡಿತ್ತು. ಆದರೆ ಹೊಸದಾಗಿ ರಚಿಸಲಾಗಿರುವ ಮಂಡಳಿಯಲ್ಲಿ ಸದಸ್ಯರ ಸಂಖ್ಯೆಯನ್ನು ಅಧ್ಯಕ್ಷರು ಸೇರಿದಂತೆ ನಾಲ್ಕಕ್ಕೆ ಇಳಿಸಲಾಗಿದೆ.

www.karunaduexams.com

- ಗುಪ್ತಚರ ಸಂಸ್ಥೆ 'ರಾ'ದ ಮಾಜಿ ಅಧಿಕಾರಿ ಎ.ಬಿ. ಮಾಥೂರ್, ಲೆ.ಜ.(ನಿವೃತ್ತ) ಎಸ್.ಎಲ್. ನರಸಿಂಹನ್ ಮತ್ತು ಗುಜರಾತ್ ನ್ಯಾಷನಲ್ ಲಾ ಯುನಿವರ್ಸಿಟಿಯ ಪ್ರೊ. ವಿಮಲ್ ಎನ್. ಪಟೇಲ್ ಅವರನ್ನು ಮಂಡಳಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

**ಮಂಡಳಿಯ ಕರ್ತವ್ಯ:**

- ಆಂತರಿಕ ಮತ್ತು ಬಾಹ್ಯ ಭದ್ರತೆ, ವಿದೇಶಾಂಗ ವ್ಯವಹಾರ, ರಕ್ಷಣೆ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಆರ್ಥಿಕ ವ್ಯವಹಾರಗಳ ಬಗ್ಗೆ ಈ ಮಂಡಳಿಯು ಸಲಹೆ ನೀಡುತ್ತದೆ.ಇದು ಉನ್ನತ ಮಟ್ಟದ ಸಮಿತಿಯಾಗಿದ್ದು ತಿಂಗಳಿಗೆ ಒಮ್ಮೆ ಸಭೆ ನಡೆಸುತ್ತದೆ.

## ಅಜಯ್ ಕುಮಾರ್ ಭಲ್ಲ ಡೈರೆಕ್ಟರ್ ಜನರಲ್ ಆಫ್ ಫಾರೀನ್ ಟ್ರೇಡ್ ನ ನೂತನ ಡೈರೆಕ್ಟರ್ ಜನರಲ್

ಹಿರಿಯ ಐಎಎಸ್ ಅಧಿಕಾರಿ ಅಜಯ್ ಕುಮಾರ್ ಭಲ್ಲ ಅವರನ್ನು ಡೈರೆಕ್ಟರ್ ಜನರಲ್ ಆಫ್ ಫಾರೀನ್ ಟ್ರೇಡ್ (Directorate General of Foreign Trade)ನ ನೂತನ ಡೈರೆಕ್ಟರ್ ಜನರಲ್ ಆಗಿ ನೇಮಕಮಾಡಲಾಗಿದೆ. ಅನೂಪ್ ವಾಧ್ವನ್ ಅವರಿಂದ ತೆರವಾಗಿದ್ದ ಸ್ಥಾನವನ್ನು ಭಲ್ಲ ರವರು ತುಂಬಲಿದ್ದಾರೆ. ಅನೂಪ್ ಅವರು ಕೇಂದ್ರ ವಾಣಿಜ್ಯ ಸಚಿವಾಲಯದ ಹೆಚ್ಚುವರಿ ನಿರ್ದೇಶಕರಾಗಿ ನೇಮಕಗೊಂಡ ಕಾರಣ ಈ ಹುದ್ದೆ ಖಾಲಿಯಾಗಿತ್ತು.

**ಡೈರೆಕ್ಟರ್ ಜನರಲ್ ಆಫ್ ಫಾರೀನ್ ಟ್ರೇಡ್ (DGFT):**

- ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದಡಿ ಕಾರ್ಯನಿರ್ವಹಿಸುವ ಡೈರೆಕ್ಟರ್ ಜನರಲ್ ಆಫ್ ಫಾರೀನ್ ಟ್ರೇಡ್ ರಫ್ತು ಮತ್ತು ಆಮದು ನಿಯಮಗಳನ್ನು ಜಾರಿ ಮಾಡುವ ನೋಡಲ್ ಏಜೆನ್ಸಿಯಾಗಿದೆ.
- ವಿದೇಶಿ ವ್ಯಾಪಾರ ನೀತಿಯನ್ನು ರೂಪಿಸುವುದು ಮತ್ತು ಜಾರಿಗೊಳಿಸುವುದು ಅದರಲ್ಲೂ ಮುಖ್ಯವಾಗಿ ದೇಶದ ರಫ್ತು ಹೆಚ್ಚಿಸುವ ಜವಾಬ್ದಾರಿಯನ್ನು ಇದು ಹೊತ್ತಿದೆ.
- DGFT ವಿವಿಧ ರಾಷ್ಟಗಳೊಂದಿಗೆ ವ್ಯಾಪಾರ ಸಂಬಂಧಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

## ಅಂಟೋನಿಯೊ ಗುಟೆರಸ್ ವಿಶ್ವಸಂಸ್ಥೆಯ ನೂತನ ಮಹಾ ಪ್ರಧಾನ ಕಾರ್ಯದರ್ಶಿ

ಪೋರ್ಚುಗಲ್ ಮಾಜಿ ಪ್ರಧಾನಿ ಅಂಟೋನಿಯೊ ಗುಟೆರಸ್ ಅವರನ್ನು ವಿಶ್ವಸಂಸ್ಥೆಯ ನೂತನ ಮಹಾಪ್ರಧಾನ ಕಾರ್ಯದರ್ಶಿಯನ್ನಾಗಿ ಸಾಮಾನ್ಯ ಸಭೆಯು ಅಧಿಕೃತವಾಗಿ ಆಯ್ಕೆ ಮಾಡಲಿದೆ._15 ರಾಷ್ಟ್ರಗಳ ಸದಸ್ಯರನ್ನು ಒಳಗೊಂಡ ಭದ್ರತಾ ಮಂಡಳಿಯು ಕಳೆದ ವಾರ ನಡೆಸಿದ ರಹಸ್ಯ ಸಭೆಯಲ್ಲಿ ಗುಟೆರಸ್ ಆಯ್ಕೆಗೆ ತೀರ್ಮಾನ ತೆಗೆದುಕೊಂಡಿದ್ದು, ಅನುಮೋದನೆಗಾಗಿ ಅವರ ಹೆಸರನ್ನು 193 ದೇಶಗಳ ಸಾಮಾನ್ಯ ಸಭೆಗೆ ಕಳುಹಿಸಿತ್ತು._ಬಾನ್ ಕಿ ಮೂನ್ ಅವರ ಉತ್ತರಾಧಿಕಾರಿಯಾಗಿ, ಮಹಾಪ್ರಧಾನ ಕಾರ್ಯದರ್ಶಿ ಹುದ್ದೆಗೆ ಗುಟೆರಸ್ ಅವರ ಹೆಸರು ಈ ಹಿಂದೆ ಅನೇಕ ಬಾರಿ ಕೇಳಿಬಂದಿತ್ತು. ವಿಶ್ವಸಂಸ್ಥೆಯ ಈಗಿನ ಮಹಾಪ್ರಧಾನ ಕಾರ್ಯದರ್ಶಿ ಬಾನ್ ಕಿ ಮೂನ್ ಅವರ ಅವಧಿ ಡಿಸೆಂಬರ್ 31ಕ್ಕೆ ಮುಕ್ತಾಯವಾಗಲಿದೆ. 67 ವರ್ಷದ ಗುಟೆರಸ್ ಅವರು ವಿಶ್ವಸಂಸ್ಥೆಯ 9ನೇ ಮಹಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾಗಲಿದ್ದು, 2017ರ ಜನವರಿ 1ರಿಂದ 2022ರ ಡಿಸೆಂಬರ್ 31ರವರೆಗೆ ಅವರ ಅಧಿಕಾರ ಅವಧಿ ಇರಲಿದೆ.

**ಅಂಟೋನಿಯೊ ಗುಟೆರಸ್:**

- 1976 ರಲ್ಲಿ ರಾಜಕೀಯ ಪ್ರವೇಶಿಸಿದ ಗುಟೆರಸ್ ಅವರು 1995ರಿಂದ 2002ರವರೆಗೆ ಪೋರ್ಚುಗಲ್ನ ಪ್ರಧಾನಿಯಾಗಿದ್ದರು.
- 2005ರಿಂದ 2015ರವರೆಗೆ ವಿಶ್ವಸಂಸ್ಥೆಯ ನಿರಾಶ್ರಿತರ ಹೈ ಕಮಿಷನರ್ ಆಗಿ ಕರ್ತವ್ಯ ನಿರ್ವಹಿಸಿದ್ದರು.

**ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ:**

- ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯು ವಿಶ್ವಸಂಸ್ಥೆಯ ಸಚಿವಾಲಯದ ಮುಖ್ಯಸ್ಥರಾಗಿರುತ್ತಾರೆ. ವಿಶ್ವಸಂಸ್ಥೆಯ ವಕ್ತಾರ ಹಾಗೂ ವಿಶ್ವಸಂಸ್ಥೆಯ ನಾಯಕ ಸಹ ಆಗಿರುತ್ತಾರೆ.
- ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಕರ್ತವ್ಯಗಳ ಬಗ್ಗೆ ವಿಶ್ವಸಂಸ್ಥೆ ಚಾರ್ಟರ್ ನ ಅಧ್ಯಾಯ XV ಪರಿಚ್ಛೇದ 97 ರಿಂದ 101 ರಲ್ಲಿ ವಿವರಿಸಲಾಗಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಅವಧಿ ಐದು ವರ್ಷಗಳ ವರೆಗೆ ಇದ್ದು, ಗರಿಷ್ಠ ಎರಡು ಅವಧಿಗೆ ಮಾತ್ರ ನೇಮಕವಾಗಬಹುದು.

**ಜಾರಿ ನಿರ್ದೇಶನಾಲಯದ ನಿರ್ದೇಶಕರಾಗಿ ಕರ್ನಲ್ ಸಿಂಗ್ ನೇಮಕ**

ಹಿರಿಯ ಐಪಿಎಸ್ ಅಧಿಕಾರಿ ಕರ್ನಲ್ ಸಿಂಗ್ ರವರನ್ನು ಜಾರಿ ನಿರ್ದೇಶನಾಲಯದ (Enforcement Directorate) ನಿರ್ದೇಶಕರಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಪ್ರಧಾನಿ ಮೋದಿ ನೇತೃತ್ವದ ನೇಮಕಾತಿ ಸಮಿತಿ ಕರ್ನಲ್ ಸಿಂಗ್ ಅವರನ್ನು ನಿರ್ದೇಶಕ ಹುದ್ದೆಗೆ ನೇಮಕ ಮಾಡಿದೆ. ಸಿಂಗ್ ಅವರು ಆಗಸ್ಟ್ 31, 2017 ರವರೆಗೆ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

- ಕರ್ನಲ್ ಸಿಂಗ್ 1984 ಬ್ಯಾಚ್ ನ ಕೇಂದ್ರಾಡಳಿತ ಪ್ರದೇಶ ಕ್ಯಾಡ್ರೆಯ ಐಪಿಎಸ್ ಅಧಿಕಾರಿ.
- ಈ ನೇಮಕಾತಿ ಮುನ್ನ ಸಿಂಗ್ ಅವರು ಜಾರಿ ನಿರ್ದೇಶನಾಲಯದ ಹೆಚ್ಚುವರಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು.

**ಜಾರಿ ನಿರ್ದೇಶನಾಲಯ**:

- ಜಾರಿ ನಿರ್ದೇಶನಾಲಯವು ಆರ್ಥಿಕ ಗುಪ್ತಚರ ಮತ್ತು ಕಾನೂನು ಜಾರಿ ಸಂಸ್ಥೆಯಾಗಿದ್ದು, ಆರ್ಥಿಕ ಅಪರಾಧದ ವಿರುದ್ದ ಹೋರಾಡುವ ಮತ್ತು ಆರ್ಥಿಕ ಕಾನೂನು ಜಾರಿಗೊಳಿಸುವ ಜವಾಬ್ದಾರಿ ಹೊಂದಿದೆ.
- ಕೇಂದ್ರ ಹಣಕಾಸು ಸಚಿವಾಲಯದ ಕಂದಾಯ ಇಲಾಖೆಯಡಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ.
- ಕಪ್ಪುಹಣ ಮತ್ತು ಹವಾಲಾ ವ್ಯಾಪಾರ ತಡೆಯುವ ಸಲುವಾಗಿ ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ (FEMA) ಮತ್ತು ಮನಿ ಲಾಂಡರಿಂಗ್ ತಡೆ ಕಾಯಿದೆ (PMLA) ಜಾರಿಗೊಳಿಸುವ ಪ್ರಮುಖ ಹೊಣೆಗಾರಿಕೆ ಹೊಂದಿದೆ.

**ಗಳಗನಾಥ ಮತ್ತು ರಾಜಪುರೋಹಿತ ಪ್ರಶಸ್ತಿ ಪ್ರಕಟ**

ಶ್ರೀ ಗಳಗನಾಥ ಮತ್ತು ನಾ. ಶ್ರೀ ರಾಜಪುರೋಹಿತ ಪ್ರತಿಷ್ಠಾನದ ಈ ಸಾಲಿನ 'ಶ್ರೀ ಗಳಗನಾಥ' ಪ್ರಶಸ್ತಿಗೆ ಕಾರ್ಕಳ ತಾಲ್ಲೂಕಿನ ಕಾಂತಾವರದ ಡಾ. ನಾ. ಮೊಗಸಾಲೆ ಹಾಗೂ 'ನಾ. ಶ್ರೀ. ರಾಜಪುರೋಹಿತ' ಪ್ರಶಸ್ತಿಗೆ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ಶ್ರೀನಿವಾಸ ವಿ. ಪಾಡಿಗಾರ ಆಯ್ಕೆಯಾಗಿದ್ದಾರೆ. ಪ್ರತಿಷ್ಠಾನವು ಇದೇ ಮೊದಲ ಬಾರಿ ಪ್ರಶಸ್ತಿ ನೀಡುತ್ತಿದೆ.

- ಈ ಪ್ರಶಸ್ತಿಗಳು ತಲಾ ₹ 50 ಸಾವಿರ ನಗದು ಹಾಗೂ ಫಲಕಗಳನ್ನು ಒಳಗೊಂಡಿವೆ.
- ಕನ್ನಡ ಸಾಹಿತ್ಯ, ಇತಿಹಾಸ ಮತ್ತು ಸಂಶೋಧನೆಯಲ್ಲಿ ಸಾಧನೆ ಮಾಡಿದವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.
- ನವೆಂಬರ್ 27 ರಂದು ಬೆಂಗಳೂರಿನ ಚಿತ್ರಕಲಾ ಪರಿಷತ್ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.



www.karunaduexams.com

# ವ್ಯವಹಾರ

**ಹಣಕಾಸು ನೀತಿ ಸಮಿತಿ (ಎಂಪಿಸಿ) ರಚನೆ ಅಧಿಕೃತ ಸೂಚನೆ ಹೊರಡಿಸಿದ ಕೇಂದ್ರ ಸರ್ಕಾರ**

ಆರು ಜನ ಸದಸ್ಯರನ್ನು ಒಳಗೊಂಡಿರುವ ಹಣಕಾಸು ನೀತಿ ಸಮಿತಿಯನ್ನು ರಚಿಸಿ ಕೇಂದ್ರ ಸರ್ಕಾರ ಅಧಿಕೃತ ಸೂಚನೆಯನ್ನು ಹೊರಡಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ-1934ರ 45ZB ಪ್ರಕರಣದಡಿ ಗೊತ್ತುಪಡಿಸಲಾದ ಅಧಿಕಾರವನ್ನು ಬಳಸಿ ಕೇಂದ್ರ ಹಣಕಾಸು ಸಚಿವರು ಈ ಅಧಿಸೂಚನೆಯನ್ನು ಹೊರಡಿಸಿದ್ದಾರೆ.

**ಹಣಕಾಸು ನೀತಿ ಸಮಿತಿ**:

- ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ **ಉರ್ಜಿತ್ ಪಟೇಲ್** ಸಮಿತಿಯ ಅಧ್ಯಕ್ಷರು.
- ಭಾರತೀಯ ರಿಸರ್ವ್ ಬ್ಯಾಂಕ್ ಡೆಪ್ಯೂಟಿ ಗವರ್ನರ್ **ಆರ್ ಗಾಂಧಿ** ಸಮಿತಿಯ ಸದಸ್ಯರು
- ಭಾರತೀಯ ರಿಸರ್ವ್ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕ "**ಮೈಕಲ್ ಪತ್ರ**" ಸಮಿತಿಯ ಸದಸ್ಯರು
- ಇಂಡಿಯನ್ ಸ್ಟಾಟಿಸ್ಟಿಕಲ್ ಇನ್ಸ್ಟಿಟ್ಯೂಟ್ ಪ್ರಾಧ್ಯಪಕರಾದ **ಚೇತನ್ ಘಾಟೆ** ಸಮಿತಿಯ ಸದಸ್ಯರು
- ದೆಹಲಿ ಸ್ಕೂಲ್ ಆಫ್ ಎಕಾನಮಿಕ್ಸ್, ನಿರ್ದೇಶಕರಾದ **ಪ್ರೊ.ಪಮಿ ದುವ** ಸಮಿತಿಯ ಸದಸ್ಯರು
- ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್, ಅಹಮದಬಾದ್ ಪ್ರಾಧ್ಯಪಕರಾದ ರವೀಂದ್ರ ಎಚ್ ದೊಲಕಿಯಾ ಸಮಿತಿಯ ಸದಸ್ಯರು.

**ಹಣಕಾಸು ನೀತಿ ಸಮಿತಿಯ ಬಗ್ಗೆ:**

- ಆರು ಸದಸ್ಯರನ್ನು ಒಳಗೊಂಡಿರುವ ಹಣಕಾಸು ನೀತಿ ಸಮಿತಿಯು ಅಲ್ಪಾವಧಿ ಬಡ್ಡಿ ದರವನ್ನು ನಿಗದಿಪಡಿಸಿ ಹಣದುಬ್ಬರವನ್ನು ನಿಗದಿಪಡಿಸಿದ ಗುರಿ ಮಟ್ಟಕ್ಕೆ ನಿಯಂತ್ರಿಸುವ ಹೊಣೆಗಾರಿಕೆಯನ್ನು ಹೊಂದಿದೆ.
- ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿ ಹಣಕಾಸು ನೀತಿ ಸಮಿತಿ ಸಭೆ ನಡೆಸಲಿದ್ದು, ಸಭೆಯ ನಂತರ ತನ್ನ ನಿರ್ಧಾರಗಳನ್ನು ಪ್ರಕಟಿಸಲಿದೆ.
- ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆಯನ್ನು ಹಣಕಾಸು ಕಾಯಿದೆ-2016ರಡಿ ತಿದ್ದುಪಡಿ ತರುವ ಮೂಲಕ ಹಣಕಾಸು ನೀತಿ ಸಮಿತಿಗೆ ಶಾಸನಬದ್ದ ಮತ್ತು ಸಾಂಸ್ಥಿಕ ಚೌಕಟ್ಟನ್ನು ಒದಗಿಸಲಾಗಿದೆ.

**ತೈಲ ಉತ್ಪಾದನೆ ತಗ್ಗಿಸಲು ಪೆಟ್ರೋಲಿಯಂ ರಫ್ತು ರಾಷ್ಟ್ರಗಳ ಒಕ್ಕೂಟ (OPEC) ನಿರ್ಧಾರ**

ಎಂಟು ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಒಕ್ಕೂಟವು (ಒಪೆಕ್) ಕಚ್ಚಾ ತೈಲ ಉತ್ಪಾದನೆ ತಗ್ಗಿಸುವ ನಿರ್ಧಾರಕ್ಕೆ ಬಂದಿವೆ. ಅಲ್ಜೀರಿಯಾದಲ್ಲಿ ನಡೆದ ಅಲ್ಜೀರಿಸ್ ಒಪೆಕ್ ರಾಷ್ಟ್ರಗಳ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ. ಒಪೆಕ್ ರಾಷ್ಟ್ರಗಳು ಪ್ರಸ್ತುತ ಪ್ರತಿದಿನ 33.24 ಮಿಲಿಯನ್ ಬ್ಯಾರೆಲ್ ತೈಲವನ್ನು ಪ್ರತಿದಿನ ಉತ್ಪಾದಿಸುತ್ತಿದ್ದು, ಈ ಪ್ರಮಾಣವನ್ನು 32.5 ರಿಂದ 33.0 ಮಿಲಿಯನ್ ಬ್ಯಾರೆಲ್ ಗೆ ತಗ್ಗಿಸಲು ತೀರ್ಮಾನಿಸಲಾಗಿದೆ. ಆದರೆ ಯಾವ ರಾಷ್ಟ್ರಗಳು ಎಷ್ಟು ತೈಲ ಉತ್ಪಾದನೆಯನ್ನು ತಗ್ಗಿಸಲಿವೆ ಎಂಬುದನ್ನು ನವೆಂಬರ್ ನಲ್ಲಿ ನಡೆಯಲಿರುವ ಸಭೆಯಲ್ಲಿ ಒಮ್ಮತಕ್ಕೆ ಬರಲಿವೆ.

**ಭಾರತದ ಮೇಲಾಗುವ ಪರಿಣಾಮ**:

- ಒಪೆಕ್ ರಾಷ್ಟ್ರಗಳಿಂದ ತೈಲವನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳ ಪೈಕಿ ಭಾರತ ಮೂರನೆ ಸ್ಥಾನದಲ್ಲಿದೆ. ಭಾರತ ಶೇ 85% ರಷ್ಟ ಕಚ್ಚಾ ತೈಲ ಹಾಗೂ ಶೇ 95% ನೈಸರ್ಗಿಕ ಅನಿಲವನ್ನು ಒಪೆಕ್ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ.

www.karunaduexams.com

- ಇತ್ತೀಚಿನ ದಿನಗಳಲ್ಲಿ ಒಪೆಕ್ ರಾಷ್ಟ್ರಗಳು ಅಧಿಕ ಪ್ರಮಾಣದಲ್ಲಿ ತೈಲವನ್ನು ಉತ್ಪಾದಿಸುತ್ತಿದ್ದ ಕಾರಣ ಹಾಗೂ ಒಪೆಕ್ ರಾಷ್ಟ್ರಗಳ ನಡುವೆ ಸಹಕಾರದ ಕೊರತೆಯಿಂದಾಗಿ ಕಚ್ಚಾ ತೈಲದ ಬೆಲೆ ಕುಸಿದಿದ್ದ ಕಾರಣ ಭಾರತದ ಆರ್ಥಿಕತೆಗೆ ಆಗಾಧವಾಗಿ ಪ್ರಯೋಜನವಾಗಿತ್ತು.
- ಆದರೆ ಒಪೆಕ್ ರಾಷ್ಟ್ರಗಳ ಈ ನಿರ್ಧಾರದಿಂಗಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಏರಿಕೆಯಾಲಿದ್ದು ಅತಿ ಹೆಚ್ಚು ತೈಲ ಆಮದು ಮಾಡಿಕೊಳ್ಳುತ್ತಿರುವ ಭಾರತದ ಮೇಲೆ ಹೆಚ್ಚಿನ ಹೊರೆ ಬೀಳುವ ಸಾಧ್ಯತೆ ಇದೆ.

**ಪೆಟ್ರೋಲಿಯಂ ರಫ್ತು ದೇಶಗಳ ಒಕ್ಕೂಟ (ಒಪೆಕ್):**

- ಒಪೆಕ್ 14 ತೈಲ ರಫ್ತು ಮಾಡುವ ರಾಷ್ಟ್ರಗಳ ಒಕ್ಕೂಟವಾಗಿದೆ. ತನ್ನ ಸದಸ್ಯ ರಾಷ್ಟ್ರಗಳಲ್ಲಿ ಪೆಟ್ರೋಲಿಯಂ ನೀತಿಯನ್ನು ಜಾರಿಗೊಳಿಸುವುದು ಒಕ್ಕೂಟದ ಪ್ರಮುಖ ಕಾರ್ಯ.
- ಒಪೆಕ್ ಅನ್ನು 1960 ರಲ್ಲಿ ಇರಾನ್ ನ ಬಾಗ್ದಾದ್ ನಲ್ಲಿ ಸ್ಥಾಪಿಸಲಾಯಿತು. ಇದರ ಕೇಂದ್ರ ಕಚೇರಿ ಆಸ್ಟ್ರೀಯಾದ ವಿಯೆನ್ನಾದಲ್ಲಿದೆ.
- ಒಪೆಕ್ ಸದಸ್ಯ ರಾಷ್ಟ್ರಗಳು: ಅಲ್ಜೀರಿಯಾ, ಅಂಗೋಲಾ, ಲಿಬಿಯಾ, ನೈಜೀರಿಯಾ, ಗಾಬನ್, ಇಂಡೋನೇಷಿಯಾ, ಇರಾನ್, ಇರಾಕ್, ಸೌಧಿ ಅರೇಬಿಯಾ, ಕುವೈತ್, ಕತಾರ್, ಯುಎಇ, ಈಕ್ವೆಡರ್ ಮತ್ತು ವೆನೆಜುವೆಲಾ.
- 2015 ಅಂತ್ಯಕ್ಕೆ ಒಪೆಕ್ ರಾಷ್ಟ್ರಗಳು ಜಾಗತಿಕ ತೈಲ ಉತ್ಪಾದನೆ ಪೈಕಿ ಶೇ 43% ರಷ್ಟು ಪಾಲು ಹೊಂದಿದ್ದು, ವಿಶ್ವದ ಶೇ 73% ತೈಲ ನಿಕ್ಷೇಪಗಳನ್ನು ಹೊಂದಿವೆ.

## ರಫೆಲ್ ಜೆಟ್ ತಯಾರಿಕೆಗೆ ಡಸಾಲ್ಟ್-ರಿಲಯನ್ಸ್ ಒಪ್ಪಂದ

ಅನಿಲ್ ಅಂಬಾನಿ ನೇತೃತ್ವದ ರಿಲಯನ್ಸ್ ಮತ್ತು ಫ್ರಾನ್ಸ್ ನ ಡಸಾಲ್ಟ್ ಏವೀಯೇಷನ್ ನಡುವೆ ರಫೆಲ್ ಯುದ್ದ ವಿಮಾನ ತಯಾರಿಕೆ ಸಂಬಂಧ ಒಪ್ಪಂದ ಏರ್ಪಟ್ಟಿದೆ. ಈ ಜಂಟಿ ಉದ್ದಿಮೆಯನ್ನು ಇನ್ನು ಮುಂದೆ ಡಸಾಲ್ಟ್ ರಿಲಯನ್ಸ್ ಏರೋಸ್ಪೇಸ್ ಎನ್ನಲಾಗುವುದು. ಫ್ರಾನ್ಸ್ ನಿಂದ ಭಾರತ ಖರೀದಿಸಲಿರುವ 36 ರಫೆಲ್ ಜೆಟ್ಗಳ ತಯಾರಿಕೆಗೆ ಡಸಾಲ್ಟ್ ರಿಲಯನ್ಸ್ ಏರೋಸ್ಪೇಸ್ ಅಗತ್ಯ ಸೇವೆಯನ್ನು ಒದಗಿಸಲಿದೆ. ಸುಮಾರು ರೂ 30,000 ಕೋಟಿ ಒಪ್ಪಂದ ಇದಾಗಿದ್ದು, ಭಾರತದ ರಕ್ಷಣಾ ತಯಾರಿಕ ಸಂಸ್ಥೆಯೊಂದು ಇಷ್ಟು ದೊಡ್ಡ ಮೊತ್ತದ ಒಪ್ಪಂದಕ್ಕೆ ಸಹಿಹಾಕಿರುವುದು ಇದೇ ಮೊದಲು.

**ಪ್ರಮುಖಾಂಶಗಳು:**

- ರಿಲಯನ್ಸ್ ಮತ್ತು ಡಸಾಲ್ಟ್ ಏರೋಸ್ಪೇಸ್ ನಡುವೆ ಏರ್ಪಟ್ಟಿರುವ ಈ ಒಪ್ಪಂದದಡಿ ಐಐಡಿಎಂ ಯೋಜನೆಯಡಿ ಸಂಶೋಧನೆ ಮತ್ತು ಅಭಿವೃದ್ದಿ (ಆರ್ & ಡಿ)ಗು ಒತ್ತು ನೀಡಲಾಗುವುದು.
- **ಐಐಡಿಎಂ** ಎಂದರೆ ಸ್ಥಳೀಯವಾಗಿ ವಿನ್ಯಾಸ, ನಿರ್ಮಾಣ ಮತ್ತು ತಯಾರಿಸಲ್ಪಟ್ಟ (Indigenously Designed, Developed and Manufactured) ಎಂದರ್ಥ. ಇದನ್ನು ರಕ್ಷಣಾ ಇಲಾಖೆಯ ಖರೀದಿ ಪ್ರಕ್ರಿಯೆ (DPP)2016 ರಡಿ ಹೊಸದಾಗಿ ಕಲ್ಪಿಸಲಾಗಿದೆ.

**ಹಿನ್ನಲೆ:**

www.karunadu exams.com

ಸೆಪ್ಟೆಂಬರ್ 2016 ರಲ್ಲಿ ಭಾರತ ಮತ್ತು ಫ್ರಾನ್ಸ್ ನಡುವೆ 36 ಅತ್ಯಾಧುನಿಕ ರಫೆಲ್ ಯುದ್ದ ವಿಮಾನ ಖರೀದಿ ಸಂಬಂಧ ಒಪ್ಪಂದಕ್ಕೆ ಸಹಿಹಾಕಲಾಗಿತ್ತು. ಸುಮಾರು 59 ಸಾವಿರ ಕೋಟಿ ಒಪ್ಪಂದ ಇದಾಗಿದೆ. ಒಪ್ಪಂದದ ಪ್ರಕಾರ ಭಾರತೀಯ ಕಂಪನಿಯೊಂದಿಗೆ ಶೇ.50 ರಷ್ಟು ಪಾಲುದಾರಿಕೆಯೊಂದಿಗೆ ಯುದ್ಧ ವಿಮಾನವನ್ನು ತಯಾರಿಸಬೇಕಿದೆ.

**ಕುಲಾಂತರಿ ಸಾಸಿವೆ ವಾಣಿಜ್ಯ ಉದ್ದೇಶಕ್ಕೆ ಬಿಡುಗಡೆ ಮಾಡುವುದಕ್ಕೆ ಸುಪ್ರೀಂ ಕೋರ್ಟ್ ತಡೆ**

ಕುಲಾಂತರಿ ಸಾಸಿವೆಯನ್ನು ವಾಣಿಜ್ಯ ಉದ್ದೇಶಕ್ಕೆ ಸುಪ್ರೀಂ ಕೋರ್ಟ್ ತಾತ್ಕಲಿಕ ತಡೆ ನೀಡಿದ್ದು, ಅಕ್ಟೋಬರ್ 17, 2016ರವರೆಗೆ ಬಿಡುಗಡೆ ಮಾಡದಂತೆ ತಾಕೀತು ಮಾಡಿದೆ. ಕುಲಾಂತರಿ ಸಾಸಿವೆಯನ್ನು ಬಿತ್ತನೆ ಉದ್ದೇಶಕ್ಕೆ ಬಿಡುಗಡೆ ಮಾಡುವ ಮುನ್ನ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸುವಂತೆ ಕೋರ್ಟ್ ತಿಳಿಸಿದೆ. ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಠಾಕೂರ್ ಮತ್ತು ನ್ಯಾಯಮೂರ್ತಿ ಎ.ಎಂ.ಖನ್ವಿಲ್ಕರ್ ಒಳಗೊಂಡ ಪೀಠ ಈ ಆದೇಶ ನೀಡಿದೆ.

**ಹಿನ್ನಲೆ:**

- ಕುಲಾಂತರಿ ಸಾಸಿವೆಯನ್ನು ವಾಣಿಜ್ಯ ಉದ್ದೇಶಕ್ಕೆ ಬಿಡುಗಡೆ ಮಾಡದಂತೆ ತಡೆ ನೀಡಲು ಅರುಣ ರೋಡ್ರಿಗಸ್ ಎಂಬುವವರು ನ್ಯಾಯಾಲಕ್ಕೆ ಅರ್ಜಿ ಸಲ್ಲಿಸಿದ್ದರು.
- ಸಾಕಷ್ಟು ಪರೀಕ್ಷೆಗೆ ಒಳಪಡಿಸಿದೆ ಹಾಗೂ ಜೈವಿಕ ಸುರಕ್ಷತೆ ಮನಗಾಣದೆ ಕುಲಾಂತರಿ ಸಾಸಿವೆ ತಳಿಯನ್ನು ಬಿತ್ತನೆಗೆ ಬಳುಸುವುದು ಆತಂತಕಾರಿ ಎಂದು ಅರ್ಜಿಯಲ್ಲಿ ತಿಳಿಸಿದ್ದರು. ಅಲ್ಲದೇ, ತೆರದ ಪ್ರದೇಶದಲ್ಲಿ ಕುಲಾಂತರಿ ಸಾಸಿವೆಯನ್ನು ಪರೀಕ್ಷಿಸುವುದು ಮತ್ತು ವಾಣಿಜ್ಯ ಬಳಕೆಗೆ ಬಿಡುಗಡೆಗೊಳಿಸಬಾರದೆಂದು ಒತ್ತಾಯಿಸಲಾಗಿತ್ತು.

**ಕುಲಾಂತರಿ ಸಾಸಿವೆ:**

- ಸಾಸಿವೆಯು ಭಾರತದ ಪ್ರಮುಖ ಚಳಿಗಾಲದ ಬೆಳೆಗಳಲ್ಲಿ ಒಂದಾಗಿದ್ದು, ಅಕ್ಟೋಬರ್ ಮಧ್ಯದಲ್ಲಿ ಮತ್ತು ನವೆಂಬರ್ ಅಂತ್ಯದಲ್ಲಿ ಬಿತ್ತನೆ ಮಾಡಲಾಗುತ್ತದೆ. ಸಾಸಿವೆ ಭಾರತದ ಅತಿ ಹೆಚ್ಚು ಖಾದ್ಯ ತೈಲ ನೀಡುವ ಬೆಳೆಯಾಗಿದೆ.
- "ಡಿಎಂಎಚ್ (ದಾರ ಮಸ್ಟರ್ಡ್ ಹೈಬ್ರಿಡ್)-11 (Dhara Mustard Hybrid)" ಕುಲಾಂತರಿ ಸಾಸಿವೆ ತಳಿಯನ್ನು ದೆಹಲಿ ವಿಶ್ವವಿದ್ಯಾಲಯದ "ಸೆಂಟರ್ ಫಾರ್ ಜೆನಿಟಿಕ್ ಮನಿಪುಲೇಷನ್ ಆಫ್ ಕ್ರಾಪ್ ಪ್ಲಾಂಟ್ಸ್" ಅಭಿವೃದ್ದಿಪಡಿಸಿದೆ. ಇದು ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ತಳಿ ಬದಲಾವಣೆಗಾಗಿ ಬರ್ನೆಸ್/ಬರ್ಸ್ಟರ್ ತಂತ್ರಜ್ಞಾನ ಬಳಸಿ ಈ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಕಳೆನಾಶಕ ಸಹಿಷ್ಣ ತಳಿ (It is Herbicide Tolerant (HT) crop)ಆಗಿದೆ.

**ಡಿಎಂಎಚ್-11 ಅನುಕೂಲ:**

- ಸಾಂಪ್ರದಾಯಿಕ ಸಾಸಿವೆ ತಳಿಗೆ ಹೋಲಿಸಿದರೆ ಡಿಎಂಎಚ್-11 ಕುಲಾಂತರಿ ತಳಿ ಶೇ 30% ಹೆಚ್ಚು ಇಳುವರಿ ನೀಡಲಿದೆ.
- ಆ ಮೂಲಕ ಹೆಚ್ಚು ಖಾದ್ಯ ತೈಲವನ್ನು ಉತ್ಪಾದಿಸಲು ಸಹಕಾರಿಯಾಗಲಿದೆ. ಪ್ರಸ್ತುತ ಭಾರತ ವಿದೇಶಗಳಿಂದ ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ.

**ವಿರೋಧ ಏಕೆ:**

- ಡಿಎಂಎಚ್-11 ದೇಶದ ಮೊದಲ ಕುಲಾಂತರಿ ಆಹಾರ ಬೆಳೆ ತಳಿ ಎನಿಸಿದೆ. ಒಂದು ವೇಳೆ ಈ ತಳಿಯನ್ನು ಬಿತ್ತನೆ ಮಾಡಲು ಅನುಮತಿ ನೀಡಿದರೆ ಇತರೆ ಆಹಾರ ಬೆಳೆಗಳ ಕುಲಾಂತರಿ ತಳಿಗಳ ಬಿಡುಗಡೆಗೆ ಹಾದಿ ಸುಗಮವಾಗಲಿದೆ ಎಂಬುದು ಆಂತಕಕ್ಕೆ ಕಾರಣವಾಗಿದೆ.
- ಕುಲಾಂತರಿ ತಳಿಯಿಂದ ಪರಿಸರ, ಮಾನವ ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂಬುದು ಪರಿಸರವಾದಿಗಳ ಕಳವಳ.

- ಕಳೆನಾಶಕ ಸಹಿಷ್ಣುತೆ ತಳಿಗಳಿಂದ ಕೂಲಿಕಾರ್ಮಿಕರು ನಿರುದ್ಯೋಗಿಗಳಾಗುತ್ತಾರೆ ಎನ್ನುವುದು ಮತ್ತೊಂದು ಕಾರಣ. ಬೆಳೆಗಳಲ್ಲಿ ಕಳೆ ತೆಗೆಯುವುದು ಹೆಚ್ಚು ಜನರಿಗೆ ಕೆಲಸ ನೀಡುತ್ತಿದೆ.

**ಪೇಮೆಂಟ್ ಬ್ಯಾಂಕ್ ಸೇವೆಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ನ ಪೂರ್ವಾನುಮತಿ ಕಡ್ಡಾಯ**

ಪೇಮೆಂಟ್ ಬ್ಯಾಂಕ್ ಗಳು ಗ್ರಾಹಕರಿಗೆ ಹೊಸ ಉತ್ಪನ್ನಗಳನ್ನು ಪರಿಚಯಿಸುವ ಮುಂಚೆ ಭಾರತೀಯ ರಿಸರ್ವ್ ಬ್ಯಾಂಕ್ ಪೂರ್ವಾನುಮತಿ ಪಡೆಯುವುದು ಕಡ್ಡಾಯವೆಂದು ಆರ್ ಬಿಐ ಅಧಿಕೃತ ಸೂಚನೆಯನ್ನು ಹೊರಡಿಸಿದೆ. ಈ ನಿಟ್ಟಿನಲ್ಲಿ ಆರ್ಥಿಕ ಸೇರ್ಪಡೆಯನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ರಿಸರ್ವ್ ಬ್ಯಾಂಕ್ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಿದೆ.

**ಪ್ರಮುಖಾಂಶಗಳು**:

- ಪೇಮೆಂಟ್ ಬ್ಯಾಂಕ್ ನೌಕರರು ನಿಶ್ಚಿತ ಸ್ಥಳದಲ್ಲಿ ಸಾಕಷ್ಟು ಅವಧಿಯವರೆಗೆ ಗ್ರಾಹಕರಿಗೆ ಲಭ್ಯವಿರಬೇಕು. ಅಲ್ಲದೇ ಬ್ಯಾಂಕ್ ಸೌಲಭ್ಯ ಲಭ್ಯವಿಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ ಪಕ್ಷ ಶೇ 25% ಸೇವಾ ಕೇಂದ್ರಗಳನ್ನು ಹೊಂದಿರಬೇಕು.
- ಪೇಮೆಂಟ್ ಬ್ಯಾಂಕ್ ಗಳು ಠೇವಣೆ ಇಡುವುದು, ಹಣ ವರ್ಗಾವಣೆ ಮಾಡುವ ಸೇವೆಯನ್ನು ನೀಡಬಹುದು. ಆದರೆ ಸಾಲ ನೀಡುವ ಆಗಿಲ್ಲ.
- ವಿಮೆ ಮತ್ತು ಮ್ಯೂಚಯಲ್ ಫಂಡ್ ನಂತಹ ಸಣ್ಣ ಸೇವೆಗಳನ್ನು ಪೇಮೆಂಟ್ ಬ್ಯಾಂಕ್ ನೀಡಲಿವೆ.
- ಪೇಮೆಂಟ್ ಬ್ಯಾಂಕ್ ಗಳು ಕಾರ್ಯವಿಧಾನ ಮತ್ತು ನೀಡುವ ಸೇವೆಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಬಹುದು.
- ಪೇಮೆಂಟ್ ಬ್ಯಾಂಕ್ ಉತ್ಪನ್ನಗಳು ಗ್ರಾಹಕರಿಗೆ ಸೂಕ್ತವಲ್ಲವೆಂದು ಆರ್ ಬಿಐ ಭಾವಿಸಿದರೆ, ಅಂತಹ ಉತ್ಪನ್ನಗಳನ್ನು ಆರ್ ಬಿಐ ನಿಲ್ಲಿಸಬಹುದು.
- ವಾಣಿಜ್ಯ ಬ್ಯಾಂಕ್ ಅಥವಾ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಜೊತೆ ಪೇಮೆಂಟ್ ಬ್ಯಾಂಕ್ ಗಳು ಒಪ್ಪಂದ ಮಾಡಿಕೊಂಡರೆ ಅದಕ್ಕೆ ಆರ್ ಬಿಐನಿಂದ ಯಾವುದೇ ಅಡ್ಡಿಯಿಲ್ಲ.

**ಹಿನ್ನಲೆ**:

- ಏಪ್ರಿಲ್ 2015 ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ 11 ಸಂಸ್ಥೆಗಳಿಗೆ ಪೇಮೆಂಟ್ ಬ್ಯಾಂಕಿಂಗ್ ನಡೆಸಲು ಅನುಮತಿ ನೀಡಿತ್ತು. ಆದರೆ ಇವುಗಳಲ್ಲಿ ಮೂರು ಸಂಸ್ಥೆಗಳು ಹಿಂದೆ ಸರಿದವು. ಉಳಿದ ಸಂಸ್ಥೆಗಳು ಅನುಮತಿ ನೀಡಿದ 18 ತಿಂಗಳೊಳಗೆ ಕಾರ್ಯಾರಂಭ ಮಾಡಬೇಕಿದೆ.

**ಬ್ಯಾಂಕ್ ಶಾಖೆ ನಿಯಮ ಸರಳೀಕರಣಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಸಮಿತಿ ಶಿಫಾರಸ್ಸು**

ಬ್ಯಾಂಕ್ ಶಾಖೆ ಸ್ಥಾಪಿಸಲು ಈಗಿರುವ ನಿಯಮವನ್ನು ಸರಳೀಕರಣಗೊಳಿಸಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕ್ ಆಂತರಿಕ ಕಾರ್ಯಪಡೆ ಶಿಫಾರಸ್ಸು ಮಾಡಿದೆ. ಲಿಲಿ ವದೆರ (Lily Vadera) ಈ ಕಾರ್ಯಪಡೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಆರ್ಥಿಕ ಸೇರ್ಪಡೆಗೆ ಅನುಕೂಲವಾಗುವಂತೆ ಕಟ್ಟಡ, ನೌಕರರು ಸಂಖ್ಯೆ ಸೇರಿದಂತೆ ಬ್ಯಾಂಕ್ ಶಾಖೆ ಸ್ಥಾಪನೆಗೆ ಅನುಸರಿಸುತ್ತಿರುವ ನಿಯಮಗಳನ್ನು ಸಡಿಲಗೊಳಿಸಬೇಕೆಂದು ಕಾರ್ಯಪಡೆ ಶಿಫಾರಸ್ಸು ಮಾಡಿದೆ.

ಪ್ರಮುಖ ಶಿಫಾರಸ್ಸುಗಳು:

- ಬ್ಯಾಂಕ್ ಶಾಖೆಗಳು, ವ್ಯಾಪಾರ ಪ್ರವರ್ತಕರನ್ನು ಒಳಗೊಂಡ ಶಾಖೆಗಳು ಸೇರಿದಂತೆ ವಾರದ ಐದು ದಿನಗಳಲ್ಲಿ ಕನಿಷ್ಠ 4 ಗಂಟೆ ಸೇವೆ ನೀಡುವ ಶಾಖೆಗಳನ್ನು ಪೂರ್ಣ ಶಾಖೆಗಳನ್ನಾಗಿ ಪರಿಗಣಿಸಲು ಶಿಫಾರಸ್ಸು ಮಾಡಲಾಗಿದೆ.

- ಕನಿಷ್ಠ ಕೆಲಸ ಅವಧಿ ಅನುಸರಿಸದೆ ಕಾರ್ಯನಿರ್ವಹಿಸುವ ಯಾವುದೇ ಬ್ಯಾಂಕಿನ ಘಟಕವನ್ನು "ಅರೆಕಾಲಿಕ ಬ್ಯಾಂಕಿಂಗ್ ಘಟಕ"ವೆಂದು ಪರಿಗಣಿಸಲು ಶಿಫಾರಸ್ಸು ಮಾಡಿದೆ.
- ಅರೆಕಾಲಿಕ ಬ್ಯಾಂಕಿಂಗ್ ಘಟಕವನ್ನು ಎಲ್ಲಿ ಬೇಕಾದರು ತೆರೆಯಬಹುದಾಗಿದೆ. ಆದರೆ ಶೇ 25% ರಷ್ಟನ್ನು ಗ್ರಾಮೀಣ ಭಾಗದಲ್ಲಿ ತೆರೆಯುವುದು ಕಡ್ಡಾಯ.

**ಜಾಗತಿಕ ಹಸಿವು ಸೂಚ್ಯಂಕ: ಭಾರತಕ್ಕೆ 97ನೇ ಸ್ಥಾನ**

ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತ 118 ದೇಶಗಳ ಪೈಕಿ 97ನೇ ಸ್ಥಾನವನ್ನು ಪಡೆದುಕೊಂಡಿದೆ. 2016ನೇ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತ 100 ಅಂಕಗಳಿಗೆ ಕೇವಲ 28.5 ಅಂಕಗಳನ್ನು ಮಾತ್ರ ಭಾರತ ಪಡೆದುಕೊಂಡಿದೆ. ಆ ಮೂಲಕ ಭಾರತದಲ್ಲಿ ಇನ್ನೂ ವ್ಯಾಪಕ ಪ್ರಮಾಣದಲ್ಲಿ ಹಸಿವಿನ ಸಮಸ್ಯೆ ತಾಂಡವಾಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇಂಟರ್ ನ್ಯಾಷನಲ್ ಫುಡ್ ಪಾಲಿಸಿ ರಿಸರ್ಚ್ ಇನ್ಸ್ಟಿಟ್ಯೂಟ್ (IFPRI) ಈ ಸೂಚ್ಯಂಕವನ್ನು ಬಿಡುಗಡೆಗೊಳಿಸಿದೆ.

**ಜಾಗತಿಕ ಹಸಿವು ಸೂಚ್ಯಂಕ:**

- ಜಾಗತಿಕ ಹಸಿವು ಸೂಚ್ಯಂಕವನ್ನ ಇಂಟರ್ ನ್ಯಾಷನಲ್ ಫುಡ್ ಪಾಲಿಸಿ ರಿಸರ್ಚ್ ಇನ್ಸ್ಟಿಟ್ಯೂಟ್ 2006 ರಿಂದ ಹೊರತರುತ್ತಿದೆ. ವಿವಿಧ ಆಯಾಮಗಳನ್ನು ಪರಿಗಣಿಸಿ ತಯಾರಿಸಲಾಗುವ ಸೂಚ್ಯಂಕದಲ್ಲಿ ವಿವಿಧ ದೇಶಗಳಲ್ಲಿ ಹಸಿವಿನ ಪರಿಸ್ಥಿತಿಯನ್ನು ತೋರಿಸುತ್ತದೆ.
- 100 ಅಂಕಗಳ ಪ್ರಮಾಣದಲ್ಲಿ ದೇಶಗಳ ಶ್ರೇಣಿಯನ್ನ ಅಳೆಯಲಾಗುವುದು. 0 ಅಂಕಗಳಿಸಿದರೆ ಹಸಿವು ಮುಕ್ತ ರಾಷ್ಟ್ರವೆಂದು ಹಾಗೂ 100 ಅಂಕಗಳಿಸಿದರೆ ಅತ್ಯಂತ ಹಸಿವು ಭಾದಿತ ದೇಶವೆಂದು ಪರಿಗಣಿಸಲಾಗುವುದು.
- ಜಾಗತಿಕ ಹಸಿವು ಸೂಚ್ಯಂಕವನ್ನು ಮುಖ್ಯವಾಗಿ ನಾಲ್ಕು ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ತಯಾರಿಸಲಾಗುವುದು ಅವುಗಳೆಂದರೆ, ಪೌಷ್ಠಿಕತೆಯ ಕೊರತೆ ಜನಸಂಖ್ಯೆ, ಮಕ್ಕಳ ವ್ಯರ್ಥ (ಕಡಿಮೆ ತೂಕ), ಮಕ್ಕಳ ಕುಂಠಿತ ಬೆಳವಣಿಗೆ ಮತ್ತು ಶಿಶು ಮರಣ ಪ್ರಮಾಣ.

**ಭಾರತ ನೆರೆಹೊರೆ ರಾಷ್ಟ್ರಗಳ ಸ್ಥಾನಮಾನ:**

- ಚೀನಾ 29, ನೇಪಾಳ 72, ಮ್ಯಾನ್ಮಾರ್ 75, ಶ್ರೀಲಂಕಾ 84, ಬಾಂಗ್ಲದೇಶ 90 ಮತ್ತು ಪಾಕಿಸ್ತಾನ 107 ನೇ ಸ್ಥಾನದಲ್ಲಿದೆ.

**21 ಹೊಸರಾಜ್ಯಗಳನ್ನು ರಚಿಸಿದ ತೆಲಂಗಣ ರಾಜ್ಯ**

ಆಡಳಿತದಲ್ಲಿ ಬಾರಿ ಬದಲಾವಣೆ ತರಲು ಮುಂದಾಗಿರುವ ತೆಲಂಗಣ ರಾಜ್ಯ ಸರ್ಕಾರ ಹೊಸದಾಗಿ 21 ಜಿಲ್ಲೆಗಳನ್ನು ರಚಿಸಿದೆ. ರಾಜ್ಯ ರಚನೆಯಾದ ಎರಡು ವರ್ಷಗಳ ಬಳಿಕ ಹೊಸದಾಗಿ 21 ಜಿಲ್ಲೆಗಳನ್ನು ರಚಿಸಿದ್ದು, ರಾಜ್ಯದ ಒಟ್ಟು ಜಿಲ್ಲೆಗಳ ಸಂಖ್ಯೆ 31ಕ್ಕೆ ಏರಿದೆ.

**ಹೊಸದಾಗಿ ರಚನೆಯಾಗಿರುವ ಜಿಲ್ಲೆಗಳು**:

ಸಿದ್ದಿಪೇಟ, ಜನಗಾಮ, ಜಯಶಂಕರ್, ಜಗಿತ್ಯಾಲ, ವಾರಂಗಲ್ ಗ್ರಾಮಾಂತರ, ಯದಾದ್ರಿ, ಪೆದ್ದಪಲ್ಲಿ, ಕಾಮಾರೆಡ್ಡಿ, ಮೆದಕ್, ಮಂಚಿರ್ಯಾಲ, ವಿಕಾರಾಬಾದ್, ರಾಜನ್ನ, ಆಸಿಫಾಬಾದ್, ಸೂರ್ಯಾಪೇಟ, ಕೊತ್ತಗೂಡೆಂ, ನಿರ್ಮಲ್, ವನಪರ್ತಿ, ನಾಗರ್ ಕರ್ನೂಲು, ಮಹಬೂಬಾಬಾದ್ ಜೋಗುಲಾಂಬ ಮತ್ತು ಮಲ್ಕಾಜ್‌ಗಿರಿ.

**ಹಿನ್ನಲೆ:**

www.karunaduexams.com

- ಜೂನ್ 4, 2014 ರಂದು ತೆಲಂಗಣ ರಾಜ್ಯ ಭಾರತದ 29ನೇ ರಾಜ್ಯವಾಗಿ ಉದಯಿಸಿತು. ಆಂಧ್ರಪ್ರದೇಶವನ್ನು ವಿಭಜನೆಗೊಳಿಸಿ ತೆಲಂಗಣ ಹೊಸ ರಾಜ್ಯವಾಗಿ ಸ್ಥಾಪನೆಯಾಯಿತು. ತೆಲಂಗಣ ರಾಜ್ಯ ಸ್ಥಾಪನೆಯಾದಾಗ 10 ಜಿಲ್ಲೆಗಳನ್ನು ಒಳಗೊಂಡಿತ್ತು.
- ಆಡಳಿತ ಸುಧಾರಣೆ ತರಲು ಹೊಸ ಜಿಲ್ಲೆಗಳನ್ನು ರಚಿಸಲಾಗಿದ್ದು, ಎರಡ ರಿಂದ ನಾಲ್ಕು ಲಕ್ಷ ಜನಸಂಖ್ಯೆಗೆ ಒಂದು ಹೊಸ ಜಿಲ್ಲೆಯನ್ನು ರಚಿಸಲಾಗಿದೆ.
- ರಾಜ್ಯಗಳನ್ನು ಸಣ್ಣ ಜಿಲ್ಲೆಗಳಾಗಿ ವಿಂಗಡಿಸುವ ಮೂಲಕ ಜನ ಕೇಂದ್ರೀಕೃತ ಕಲ್ಯಾಣ ಯೋಜನೆಗಳನ್ನು ಮತ್ತು ಆಡಳಿತವನ್ನು ಜಾರಿಗೆ ತರಲು ಈ ಕ್ರಮಕೈಗೊಳ್ಳಲಾಗಿದೆ. ಸ್ಕಾಂಡಿನೇವಿಯಾ ರಾಷ್ಟ್ರಗಳ ಮಾದರಿಯಲ್ಲಿ ಹೊಸ ಆಡಳಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುತ್ತಿದೆ.

## ಮುಂಬೈನಲ್ಲಿ ದೇಶದ ಮೊದಲ "ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರ (International Arbitration Centre)"

ದೇಶದ ಮೊದಲ ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರವನ್ನು ಮುಂಬೈ, ಮಹಾರಾಷ್ಟ್ರದಲ್ಲಿ ಆರಂಭಗೊಂಡಿತು. ಮುಂಬೈ ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರವನ್ನು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ರವರು ಉದ್ಘಾಟಿಸಿದರು. ವಾಣಿಜ್ಯ ವಿವಾದಗಳನ್ನು ಬಗೆಹರಿಸಿಕೊಳ್ಳಲು ಈ ಕೇಂದ್ರ ಸಹಕಾರಿಯಾಗಲಿದೆ.

**ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರದ ಬಗ್ಗೆ:**

- ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರ ಸ್ವತಂತ್ರ ಮತ್ತು ಲಾಭದಾಯಕವಲ್ಲದ ಸಂಸ್ಥೆಯಾಗಿದ್ದು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕಾನೂನು ತಜ್ಞರನ್ನು ಒಳಗೊಂಡಿರಲಿದೆ.
- ವಿಶ್ವದರ್ಜೆಯ ಮೂಲಸೌಕರ್ಯ, 24 X 7 ಕಾರ್ಯಾಚರಣೆ ಮತ್ತು ಮಧ್ಯಸ್ಥಿಕೆ ವಿಚಾರಣೆ ಪ್ರಕ್ರಿಯೆಯನ್ನು ನೇರವಾಗಿ ದಾಖಲಿಸುವ ಮೂಲಕ ಪಾರದರ್ಶಕತೆಯನ್ನು ತೋರುವ ವ್ಯವಸ್ಥೆಯನ್ನು ಈ ಕೇಂದ್ರ ಹೊಂದಿದೆ.
- ನಿಗದಿತ ಸಮಯದೊಳಗೆ ಮತ್ತು ಮಿತ ವ್ಯಯದಲ್ಲಿ ವಿವಾದಗಳನ್ನು ಬಗೆಹರಿಸಿ, ಹೂಡಿಕೆದಾರರಲ್ಲಿ ವಿಶ್ವಾಸ ಮೂಡಿಸಲು ನೇರವಾಗಲಿದೆ.

**ಹಿನ್ನಲೆ:**

- ಪ್ರಸ್ತುತ ದೇಶದಲ್ಲಿ ಮಧ್ಯಸ್ಥಿಕೆ ಕೇಂದ್ರವಿಲ್ಲದ ಕಾರಣ ವಾಣಿಜ್ಯ ವಿವಾದಗಳನ್ನು ಸಿಂಗಾಪುರ ಅಥವಾ ಲಂಡನ್ ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರಗಳಲ್ಲಿ ಬಗೆಹರಿಸಿಕೊಳ್ಳಲಾಗುತ್ತಿದೆ. ಇದಕ್ಕಾಗಿ ಸುಮಾರು $ ಬಿಲಿಯನ್ ಡಾಲರ್ ಅನ್ನು ಭರಿಸಲಾಗುತ್ತಿದೆ. ಮುಂಬೈನಲ್ಲಿ ಸ್ಥಾಪನೆಗೊಂಡಿರುವ ಮಧ್ಯಸ್ಥಿಕೆ ಕೇಂದ್ರದಿಂದ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರಕಲಿದೆ.

## ತಮಿಳುನಾಡಿನಲ್ಲಿ ಸ್ಥಾಪನೆಯಾಗಲಿದೆ ದೇಶದ ಮೊದಲ ಮೆಡಿಕಲ್ ಪಾರ್ಕ್

ದೇಶದ ಮೊದಲ ಮೆಡಿಕಲ್ ಪಾರ್ಕ್ ಚನ್ನೈ ಸಮೀಪದ ಚೆಂಗಲ್ಪಟ್ಟು ಎಂಬಲ್ಲಿ ಸ್ಥಾಪನೆಯಾಗಲಿದೆ. ಇದಕ್ಕಾಗಿ 330.10 ಎಕರೆ ಭೂಮಿಯನ್ನು ಉಪಗುತ್ತಿಗೆ ಆಧಾರದಲ್ಲಿ ನೀಡಲು ಆರೋಗ್ಯ ಸಚಿವಾಲಯದ ಅಧೀನದಲ್ಲಿರುವ ಸಾರ್ವಜನಿಕ ಕ್ಷೇತ್ರದ ಉದ್ಯಮ ಎಚ್‌ಎಲ್‌ಎಲ್ ಲೈಫ್ಕೇರ್‌ಗೆ ಸರಕಾರವು ಬುಧವಾರ ಹಸಿರು ನಿಶಾನೆಯನ್ನು ತೋರಿಸಿದೆ.

- ಎಚ್‌ಎಲ್‌ಎಲ್ನ ಶೇ.50ರಷ್ಟು ಪಾಲು ಬಂಡವಾಳದೊಂದಿಗೆ ಅಸ್ತಿತ್ವಕ್ಕೆ ಬರಲಿರುವ ಹೊಸ ಕಂಪನಿಯೊಂದರ ಮೂಲಕ ಮೆಡಿಕಲ್ ಪಾರ್ಕ್ ತಲೆಯೆತ್ತಲಿದೆ.

- ಈ ಮೆಡಿಪಾರ್ಕ್ ಹಂತಹಂತವಾಗಿ ಮುಂದಿನ ಏಳು ವರ್ಷಗಳಲ್ಲಿ ಪೂರ್ಣ ಗೊಳ್ಳಲಿದೆ. ಮೊದಲ ಹಂತದಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲಾಗುವುದು ಮತ್ತು ಮೂರನೇ ವರ್ಷದಿಂದ ಹೂಡಿಕೆದಾರರಿಗೆ ಭೂಮಿಯನ್ನು ಉಪಗುತ್ತಿಗೆಯ ಆಧಾರದಲ್ಲಿ ಮಂಜೂರು ಮಾಡಲಾಗುವುದು.

**ಮಹತ್ವ**:

- ಈ ಯೋಜನೆಯು ದೇಶದ ವೈದ್ಯಕೀಯ ಉಪಕರಣಗಳು ಮತ್ತು ಸಾಧನಗಳ ಆವಲಂಬನೆಯನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಲಿದೆ.
- ಅತ್ಯಾಧುನಿಕ ವೈದ್ಯಕೀಯ ಉಪಕರಣಗಳ ತಯಾರಿಕೆ ಕ್ಲಸ್ಟರ್ ನಿರ್ಮಾಣಗೊಳ್ಳಲು ಇದು ವೇದಿಕೆಯಾಗಲಿದೆ.

**<u>ಎರಡನೇ ರಾಷ್ಟ್ರೀಯ ಸಂಸ್ಕೃತಿ ಮಹೋತ್ಸವಕ್ಕೆ ದೆಹಲಿಯಲ್ಲಿ ಚಾಲನೆ</u>**

ಎರಡನೇ ರಾಷ್ಟ್ರೀಯ ಸಂಸ್ಕೃತಿ ಮಹೋತ್ಸವವನ್ನು ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ರವರು ನವದೆಹಲಿಯ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದಲ್ಲಿ ಉದ್ಘಾಟಿಸಿದರು. ಹತ್ತು ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮದಲ್ಲಿ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸಲಾಗುವುದು.

**ಪ್ರಮುಖಾಂಶಗಳು**:

- ಕರಕುಶಲ, ಚಿತ್ರಕಲೆ, ತಿನಿಸು, ಜಾನಪದ ಕಲೆ, ಶಿಲ್ಪಕಲೆ ಮತ್ತು ಬುಡಕಟ್ಟು ಕಲೆಗಳನ್ನು ಪ್ರದರ್ಶಿಲಾಗುವುದು.
- ದೇಶದ ವಿವಿಧ ಭಾಗಗಳಿಂದ 2000 ಕ್ಕೂ ಹೆಚ್ಚು ಕಲಾವಿದರು ಈ ಮಹೋತ್ಸವದಲ್ಲಿ ಭಾಗವಹಿಸಲಿದ್ದು, ವಿವಿಧ ಕಲೆಗಳನ್ನು ಪ್ರದರ್ಶಿಸಲಿದ್ದಾರೆ.
- ಪ್ರಸ್ತಕ ಸಾಲಿನಲ್ಲಿ ಒಟ್ಟು ಇಂತಹ ಐದು ಮಹೋತ್ಸವಗಳನ್ನು ಹಮ್ಮಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮುಂದಿನ ದಿನಗಳಲ್ಲಿ ಬೆಂಗಳೂರು, ವಾರಣಾಸಿ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಇದೇ ತರಹದ ಕಾರ್ಯಕ್ರಮಗಳು ನಡೆಯಲಿವೆ.
- "ಏಕ್ ಭಾರತ್ ಶ್ರೇಷ್ಠ ಭಾರತ್", "ಹಮಾರಿ ಸಂಸ್ಕೃತಿ ಹಮಾರಿ ಪಹ್ಚನ್" ಮತ್ತು "ಸ್ವಚ್ಛ ಭಾರತ" ಪರಿಕಲ್ಪನೆಯನ್ನು ಈ ಮಹೋತ್ಸವದಲ್ಲಿ ತಿಳಿಸಲಾಗುವುದು.

**<u>ದೇಶದ ಅತಿ ಉದ್ದದ ಅಡುಗೆ ಅನಿಲ (LPG) ಕೊಳವೆ ಮಾರ್ಗ ನಿರ್ಮಿಸಲಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್</u>**

ದೇಶದ ಅತ್ಯಂತ ಉದ್ದದ ಎಲ್ಪಿಜಿ (ಅಡುಗೆ ಅನಿಲ) ಕೊಳವೆಮಾರ್ಗ ನಿರ್ಮಿಸಲು ಯೋಜನೆ ರೂಪಿಸುತ್ತಿರುವುದಾಗಿ ಸರ್ಕಾರಿ ಸ್ವಾಮ್ಯದ ತೈಲ ಕಂಪೆನಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಹೇಳಿದೆ. ಈ ಮಾರ್ಗವು ಗುಜರಾತ್ ಕರಾವಳಿಯಿಂದ ಉತ್ತರ ಪ್ರದೇಶದ ಗೋರಖ್ಪುರದವರೆಗೆ ನಿರ್ಮಾಣಗೊಳ್ಳಲಿದೆ. ದೇಶದಲ್ಲಿ ಹೆಚ್ಚುತ್ತಿರುವ ಅಡುಗೆ ಅನಿಲ ಬೇಡಿಕೆಯನ್ನು ಪೂರೈಸಲು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಕಂಪೆನಿ ಹೇಳಿದೆ. ಇದಕ್ಕೆ ಅನುಮತಿ ನೀಡುವಂತೆ ಕೋರಿ ಐಒಸಿಯು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದೆ. ಗುಜರಾತ್ನ ಕಾಂಡ್ಲಾ ಬಂದರಿಗೆ ಅನಿಲವನ್ನು ಆಮದು ಮಾಡಿಕೊಳ್ಳಲಿರುವ ಇಂಡಿಯನ್ ಆಯಿಲ್, ಅದನ್ನು ಕೊಳವೆ ಮೂಲಕ ಗೋರಖ್ಪುರಕ್ಕೆ ಸಾಗಿಸಲಿದೆ.

**ಪ್ರಮುಖಾಂಶಗಳು**:

- ಈ ಉದ್ದೇಶಿತ ಕೊಳವೆ ಮಾರ್ಗದ ಉದ್ದ 1,987 ಕಿ.ಮೀ. ಗುಜರಾತ್ ನ ಕಾಂಡ್ಲದಿಂದ ಉತ್ತರ ಪ್ರದೇಶದ ಗೋರಖ್ ಪುರಕ್ಕೆ ಅಡುಗೆ ಅನಿಲವನ್ನು ಸರಬರಾಜು ಮಾಡುವುದು ಈ ಯೋಜನೆಯ ಉದ್ದೇಶ.

- ಕಾಂಡ್ಲ, ಅಹಮದಾಬಾದ್, ಉಜ್ಜಯನಿ, ಭೋಪಾಲ್, ಕಾನ್ಪುರ, ಲಖನೌ, ವಾರಾಣಾಸಿ, ಅಲಹಾಬಾದ್ ಮತ್ತು ಗೋರಖ್ ಪುರ ನಗರಗಳ ಮೂಲಕ ಈ ಕೊಳವೆ ಮಾರ್ಗ ಹಾದುಹೋಗಲಿದೆ.
- ಈ ಮಾರ್ಗದ ಮೂಲಕ ವಾರ್ಷಿಕವಾಗಿ 37.5 ಲಕ್ಷ ಟನ್ ಅಡುಗೆ ಅನಿಲವನ್ನು ರವಾನಿಸಲಾಗುವುದು.
- ಸದ್ಯ ಗುಜರಾತ್ನ ಜಾಮ್ ನಗರದಿಂದ ದೆಹಲಿ ಬಳಿಯ ಲೋನಿ ನಡುವೆ ಇರುವ 1,415 ಕಿ.ಮೀ ಉದ್ದದ ಮಾರ್ಗ ದೇಶದ ಅತಿ ದೊಡ್ಡ ಕೊಳವೆ ಮಾರ್ಗ ಎನಿಸಿದೆ.

**ಗೋವಾದಲ್ಲಿ 8ನೇ ಬ್ರಿಕ್ಸ್ ಶೃಂಗಸಭೆ ಮುಕ್ತಾಯ**

ಗೋವಾದಲ್ಲಿ ಅಕ್ಟೋಬರ್ 15 ಮತ್ತು 16 ರಂದು ನಡೆದ ಎರಡು ದಿನಗಳ 8ನೇ ಬ್ರಿಕ್ಸ್ ಶೃಂಗಸಭೆ "ಗೋವಾ ಘೋಷಣೆ(Goa Declaration)"ಯೊಂದಿಗೆ ಮುಕ್ತಾಯಗೊಂಡಿತು. ಈ ಸಮ್ಮೇಳನದಲ್ಲಿ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಚೀನಾದ ಅಧ್ಯಕ್ಷ ಕ್ಸಿ ಜಿನ್ ಪಿಂಗ್, ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಬ್ರೆಜಿಲ್ ಅಧ್ಯಕ್ಷ ಮಿಷೆಲ್ ಟೆಮೆರ್ ಮತ್ತು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜಾಕೋಬ್ ಝೂಮ ರವರು ಭಾಗವಹಿಸಿದ್ದರು.

**ಗೋವಾ ಘೋಷಣೆ ಪ್ರಮುಖಾಂಶಗಳು**:

- ಎಲ್ಲಾ ವಿಧದ ಭಯೋತ್ಪಾದನೆಯನ್ನು ಬ್ರಿಕ್ಸ್ ರಾಷ್ಟ್ರಗಳು ತೀವ್ರವಾಗಿ ಖಂಡಿಸಿದವು ಹಾಗೂ ಇಂತಹ ಕೃತ್ಯಗಳಿಗೆ ಯಾವುದೇ ಸಮರ್ಥನೆ ಇಲ್ಲವೆಂಬ ಒಮ್ಮತಕೆ ಬಂದವು.
- ಅಂತಾರಾಷ್ಟ್ರೀಯ ಭಯೋತ್ಪಾದನೆ ಅದರಲ್ಲೂ ಮುಖ್ಯವಾಗಿ ಇಸ್ಲಾಮಿಕ್ ಸ್ಟೇಟ್ ನಿಂದ ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಇರುವ ಬೆದರಿಕೆ ಬಗ್ಗೆ ಚರ್ಚಿಸಲಾಯಿತು.
- ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸೇರಿದಂತೆ ವಿಶ್ವಸಂಸ್ಥೆಯ ಸುಧಾರಣೆಯ ತುರ್ತು ಅಗತ್ಯವಿದ್ದು, ಅಭಿವೃದ್ದಿಶೀಲ ರಾಷ್ಟ್ರಗಳ ಪ್ರಾತಿನಿಧ್ಯವನ್ನು ಹೆಚ್ಚಿಸಲು ಅಗತ್ಯವಿರುವ ಬಗ್ಗೆ ಚರ್ಚಿಸಲಾಯಿತು.
- ಅಂತಾರಾಷ್ಟ್ರೀಯ ಭಯೋತ್ಪಾದನೆ ಕುರಿತ ಸಮಗ್ರ ಒಪ್ಪಂದ'ದ (ಸಿಸಿಐಟಿ) ಭಾರತ ವಿಶ್ವಸಂಸ್ಥೆಯಲ್ಲಿ ಈ ಹಿಂದೆಯೇ ಮಂಡಿಸಿದೆ. ಆದರೆ ಅದು ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಈ ಒಪ್ಪಂದವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಚುರುಕುಗೊಳಿಸಬೇಕು ಎಂದು ಒತ್ತಾಯಿಸಲಾಯಿತು.
- ಸುಸ್ಥಿರ ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ದಿ ಗುರಿಗಳ 2030 ಅಜೆಂಡವನ್ನು ಅಳವಡಿಸಿಕೊಂಡಿರುವ ಬಗ್ಗೆ ಮುಕ್ತವಾಗಿ ಶ್ಲಾಘಿಸಲಾಯಿತು.
- 9ನೇ ಬ್ರಿಕ್ಸ್ ಶೃಂಗಸಭೆ ಸೆಪ್ಟೆಂಬರ್ 2017 ರಲ್ಲಿ ಚೀನಾದಲ್ಲಿ ನಡೆಯಲಿದೆ.

**ಬ್ರಿಕ್ಸ್ ಬಗ್ಗೆ:**

- ಬ್ರಿಕ್ಸ್ ಎಂದರೆ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕ ಐದು ಪ್ರಮುಖ ಉದಯೋನ್ಮುಖ ರಾಷ್ಟ್ರೀಯ ಆರ್ಥಿಕ ಸಂಘಟನೆಗಳ ಸಂಕ್ಷಿಪ್ತ ರೂಪವಾಗಿದೆ.
- ಬ್ರಿಕ್ಸ್ ಸಂಘಟನೆಯನ್ನು 2009ರಲ್ಲಿ ಸ್ಥಾಪಿಸಲಾಗಿದೆ. ಮುಂಚೆ ಇದನ್ನು ಬ್ರಿಕ್ ಎನ್ನಲಾಗುತಿತ್ತು. ದಕ್ಷಿಣ ಆಫ್ರಿಕ ಸೇರ್ಪಡೆಗೊಂಡ ನಂತರ ಬ್ರಿಕ್ಸ್ ಎನ್ನಲಾಗುತ್ತಿದೆ.
- ಬ್ರಿಕ್ಸ್ ರಾಷ್ಟ್ರಗಳ ಮೊದಲ ಔಪಚಾರಿಕ ಶೃಂಗಸಭೆ "ಯೆಕಟೇನ್ಬರ್ಗ್, ರಷ್ಯಾ"ದಲ್ಲಿ ನಡೆಯಿತು.
- ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ಅಥವಾ ಹೊಸ ಕೈಗಾರೀಕೃತ ರಾಷ್ಟ್ರಗಳು ಹಾಗೂ ಈ ಐದು ರಾಷ್ಟ್ರಗಳು ಜಿ-20 ಗ್ರೂಪ್ ಸದಸ್ಯ ರಾಷ್ಟ್ರಗಳು ಆಗಿವೆ.

www.karunaduexams.com

**ರಷ್ಯಾದಿಂದ ಎರಡನೇ ಜಲಾಂತರ್ಗಾಮಿ ಲೀಸ್ ಆಧಾರದಲ್ಲಿ ಪಡೆಯಲಿರುವ ಭಾರತ**

ರಷ್ಯಾದಿಂದ ಎರಡನೇ ಜಲಾಂತರ್ಗಾಮಿಯನ್ನು ಲೀಸ್ ಆಧಾರದ ಮೇಲೆ ಪಡೆಯಲು ಭಾರತ ನಿರ್ಧರಿಸಿದ್ದು, ಇದಕ್ಕೆ ರಷ್ಯಾ ಸಹ ಒಪ್ಪಿಗೆ ಸೂಚಿಸಿದೆ ಎನ್ನಲಾಗಿದೆ. ಇದು ಸುಮಾರು 2 ಬಿಲಿಯನ್ ಡಾಲರ್ ಮೊತ್ತದ ಒಪ್ಪಂದ ಆಗಿದೆ. ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಗೋವಾಗೆ ಆಗಮಿಸಿದ ಸಂದರ್ಭದಲ್ಲಿ ಈ ಒಪ್ಪಂದಕ್ಕೆ ಬರಲಾಗಿದೆ. ಪ್ರಾಜೆಕ್ಟ್ 971 ಹೆಸರಿನ ಅಣು ಜಲಾಂತರ್ಗಾಮಿಯನ್ನು ರಷ್ಯಾ ನೌಕಾಪಡೆಯಿಂದ ಭಾರತ ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳಲಿದೆ. 2020-21ರ ವೇಳೆಗೆ ಭಾರತದ ಸೇವೆಗೆ ಇದು ಲಭ್ಯವಿರಲಿದೆ.

**ಹಿನ್ನಲೆ:**

- ಈಗಾಗಲೇ ಭಾರತವು 'ಅಕುಲ-2' ಶ್ರೇಣಿಯ ಜಲಾಂತರ್ಗಾಮಿಯನ್ನು ಹೊಂದಿದೆ. 10 ವರ್ಷ ಅವಧಿಗೆ 2012ರಲ್ಲಿ ರಷ್ಯಾದಿಂದ ಭಾರತ ಇದರ ಗುತ್ತಿಗೆ ಪಡೆದುಕೊಂಡಿತ್ತು.
- ಈ ಜಲಾಂತರ್ಗಾಮಿಯನ್ನು “ಐಎನ್‌ಎಸ್ ಚಕ್ರ” ಎಂಬ ಹೆಸರಿನಡಿ ಸೇವೆಗೆ ಸೇರ್ಪಡೆಗೊಳಿಸಲಾಗಿದೆ. ಇದರ ಅವಧಿ 2021ಕ್ಕೆ ಮುಗಿಯಲಿದೆ.
- ಅಲ್ಲಿಂದಾಚೆಗೆ, ನೌಕಪಡೆಯ ಸಿಬ್ಬಂದಿಗೆ ತರಭೇತಿ ನೀಡಲು ಮತ್ತೊಂದು ಜಲಾಂತರ್ಗಾಮಿ ಅವಶ್ಯವೆನಿಸಿರುವ ಕಾರಣ ಈ ಒಪ್ಪಂದಕ್ಕೆ ಬರಲಾಗಿದೆ.

**ಅಕುಲ ಕ್ಲಾಸ್ ಜಲಾಂತರ್ಗಾಮಿ:**

ಅಕುಲ-2 ಶ್ರೇಣಿಯ ಜಲಾಂತರ್ಗಾಮಿಗಳು ಸುಮಾರು 8,140 ಟನ್ ತೂಕವಿದ್ದು, ತಾಸಿಗೆ 65 ಕಿ.ಮೀ. ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿವೆ. ರಷ್ಯಾದ ಅತ್ಯಾಧುನಿಕ ಜಲಾಂತರ್ಗಾಮಿಗಳಲ್ಲಿ ಇದೂ ಕೂಡ ಒಂದು.

**ಸಿಂಧು ಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆಗಳ ತ್ವರಿತಕ್ಕೆ ಸರಕಾರದ ನಿರ್ಧಾರ**

ಜಮ್ಮು-ಕಾಶ್ಮೀರದಲ್ಲಿ ನೀರಾವರಿ ಪ್ರದೇಶವನ್ನು ಸುಮಾರು 2.05 ಲಕ್ಷ ಎಕರೆಗಳಷ್ಟು ಹೆಚ್ಚಿಸಲು ಸಿಂಧೂ ನದಿಕೊಳ್ಳದಲ್ಲಿ ನಾಲ್ಕು ನೀರಾವರಿ ಯೋಜನೆಗಳ ಕಾಮಗಾರಿಯನ್ನು ತ್ವರಿತಗೊಳಿಸಲು ಕೇಂದ್ರ ಸರಕಾರವು ಯೋಜನೆಯನ್ನು ಸಿದ್ದಪಡಿಸುತ್ತಿದೆ. ಸಿಂಧು ನದಿ ನೀರು ಒಪ್ಪಂದದಡಿ ಸಿಂಧು, ಝೀಲಂ, ಚೇನಾಬ್ ಸೇರಿದಂತೆ ಪಾಕಿಸ್ತಾನದ ನಿಯಂತ್ರಣದಲ್ಲಿರುವ ನದಿಗಳಲ್ಲಿಯ ತನ್ನ ಪಾಲಿನ ಗರಿಷ್ಠ ನೀರನ್ನು ಬಳಸಿಕೊಳ್ಳಲು ಇತ್ತೀಚೆಗೆ ನಿರ್ಧರಿಸಿದ ಹಿನ್ನಲೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ.

**ಪ್ರಮುಖಾಂಶಗಳು:**

ಈ ಯೋಜನೆಗಳ ಪೈಕಿ ಕಾರ್ಗಿಲ್ನ ಪ್ರಾಕಚಿಕ್ ಖೌಸ್ ಕಾಲುವೆ, ಪುಲ್ವಾಮಾದಲ್ಲಿನ ಟ್ರಾಲ್ ನೀರಾವರಿ ಯೋಜನೆ ಹಾಗೂ ಜಮ್ಮುವಿನ ಸಾಂಬಾ ಮತ್ತು ಕಥುವಾದ ಮುಖ್ಯ ರಾವಿ ಕಾಲುವೆಯ ಪುನರುಜ್ಜೀವನ ಮತ್ತು ಆಧುನೀಕರಣ ಇವು ಪ್ರಸಕ್ತ ಹಣಕಾಸು ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ನಾಲ್ಕನೇ ಯೋಜನೆಯಾದ ರಾಜಪೋರಾ ಏತ ನೀರಾವರಿ ಯೋಜನೆ 2019, ಡಿಸೆಂಬರ್ನಲ್ಲಿ ಪೂರ್ಣಗೊಳ್ಳಲಿದೆ.

ಮೊದಲ ಮೂರು ಯೋಜನೆಗಳು 1.45 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ವ್ಯವಸ್ಥೆ ಕಲ್ಪಿಸಲಿವೆ. ರಾಜಪೋರಾ ಏತ ನೀರಾವರಿ ಯೋಜನೆ 59.035 ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಲಿದೆ. ಈ ಎಲ್ಲ ಯೋಜನೆಗಳಿಗೆ 117 ಕೋ.ರೂ.ವೆಚ್ಚವಾಗುವ ನಿರೀಕ್ಷೆಯಿದ್ದು, ಈ ಹಣವನ್ನು ನಬಾರ್ಡ್ ಒದಗಿಸಲಿದೆ.

**ಹಿನ್ನಲೆ:**

ಜಮ್ಮು-ಕಾಶ್ಮೀರದಲ್ಲಿ ಈವರೆಗೆ ಏಳು ಲಕ್ಷ ಎಕರೆ ಭೂಮಿ ನೀರಾವರಿ ಸೌಲಭ್ಯ ಕ್ಕೊಳಪಟ್ಟಿದೆ. ಇದು ಅತ್ಯಲ್ಪ ಪ್ರಮಾಣವಾಗಿದೆ. ಹೀಗಾಗಿ ರಾಜ್ಯದಲ್ಲಿಯ ಒಟ್ಟು ನೀರಾವರಿ ಪ್ರದೇಶದ ವಿಸ್ತೀರ್ಣವನ್ನು ಹೆಚ್ಚಿಸಲು ಈ ಯೋಜನೆಗಳ ಕಾಮಗಾರಿಗಳನ್ನು

www.karunaduexams.com

ಪೂರ್ಣಗೊಳಿಸಲು ಸರಕಾರವು ಪ್ರಯತ್ನಿಸುತ್ತಿದೆ ಎಂದು ಮೂಲಗಳು ತಿಳಿಸಿದವು. ಭಾರತವು ತಾಂತ್ರಿಕವಾಗಿ ರಾಜ್ಯದ 13 ಲಕ್ಷ ಎಕರೆ ಭೂಮಿಗೆ ನೀರುಣ್ಣಿಸ ಬಹುದಾಗಿದೆ. ರಾಜ್ಯದಲ್ಲಿ ಸಾಕಷ್ಟು ನೀರಿನ ಸಂಗ್ರಹ ಸೌಲಭ್ಯವಿದ್ದರೆ ಈ ಗುರಿಯನ್ನು ಸಾಧಿಸಬಹುದಾಗಿದೆ ಎಂದ ಮೂಲಗಳು, ಯೋಜನೆ ಕಾಮಗಾರಿಗಳನ್ನು ಭಾರತದ ಹಕ್ಕಿನ ವ್ಯಾಪ್ತಿಯಲ್ಲಿಯೇ ನಡೆಸಲಾಗುತ್ತಿದೆ ಮತ್ತು ಇದು ಪಾಕಿಸ್ತಾನಕ್ಕೆ ನೀರಿನ ಹರಿವಿನ ಮೇಲೆ ಯಾವುದೇ ಪರಿಣಾಮವನ್ನುಂಟು ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದವು.

**ಮುಂಬೈನಲ್ಲಿ ಪಶ್ಚಿಮ ವಲಯ ಮಂಡಳಿ (Western Zonal Council) ಸಭೆ**

ಪಶ್ಚಿಮ ವಲಯ ಮಂಡಳಿಯ 22ನೇ ಸಭೆಯನ್ನು ಇತ್ತೀಚೆಗೆ ಮುಂಬೈ, ಮಹಾರಾಷ್ಟ್ರದಲ್ಲಿ ಆಯೋಜಿಸಲಾಗಿತ್ತು. ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಪಶ್ಚಿಮ ವಲಯ ಮಂಡಳಿಯು ಮಹಾರಾಷ್ಟ್ರ, ಗುಜರಾತ್, ಗೋವಾ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ದಾದ್ರಾ ಮತ್ತು ನಗರ ಹವೇಲಿ, ಡಮನ್ ಮತ್ತು ಡಿಯುಗಳನ್ನು ಒಳಗೊಂಡಿದೆ.

**ಪ್ರಮುಖಾಂಶಗಳು:**

- ಈ ಸಭೆಯಲ್ಲಿ ಪಶ್ಚಿಮ ವಲಯ ಮಂಡಳಿಯ ರಾಜ್ಯಗಳ ಮುಖ್ಯಮಂತ್ರಿ ಮತ್ತು ಸಚಿವರುಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಅಡ್ಮಿನಿಸ್ಟ್ರೇಟರ್ ಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.
- ಆಂತರಿಕ ಭದ್ರತೆ, ಕರಾವಳಿ ಭದ್ರತೆ, ಮೀನುಗಾರರಿಗೆ ಬಯೋ-ಮೆಟ್ರಿಕ್ ಕಾರ್ಡ್ ವಿತರಣೆ, ಪೊಲೀಸ್ ಪಡೆಯನ್ನು ಆಧುನೀಕರಣಗೊಳಿಸುವುದು ಮತ್ತು ಭಯೋತ್ಪಾದನೆ ವಿರುದ್ಧ ಹೋರಾಡಲು ಯೋಜನೆ ರೂಪಿಸುವ ಕುರಿತಾಗಿ ಚರ್ಚಿಸಲಾಯಿತು.
- ಸಭೆಯಲ್ಲಿ ಕೇಂದ್ರ ಸರ್ಕಾರ ಪ್ರಮುಖ ಯೋಜನೆಯಾದ "ಪ್ರಧಾನ ಮಂತ್ರಿ ಆವಾಸ್ ಯೋಜನೆ"ಯಡಿ ನಗರವಾಸಿ ಬಡವರಿಗೆ ವಸತಿ ಸೌಲಭ್ಯ ಕಲ್ಪಿಸುವದರ ಬಗ್ಗೆಯು ಚರ್ಚಿಸಲಾಯಿತು.
- ವಾಪಿ ಕೈಗಾರಿಕೆ ಪ್ರದೇಶದಿಂದ ಕೈಗಾರಿಕ ತ್ಯಾಜ್ಯವನ್ನು ಡಮನ್ ಗಂಗಾ ನದಿ ಮತ್ತು ಕೊಲಕ್ ನದಿಗೆ ಬಿಡುವ ಕಾರಣ ಉಂಟಾಗಿರುವ ಜಲ ಮಾಲಿನ್ಯದ ಬಗ್ಗೆಯು ಸಭೆಯಲ್ಲಿ ಚರ್ಚಿಸಲಾಯಿತು.

**ವಲಯ ಮಂಡಳಿಗಳು:**

- ವಲಯ ಮಂಡಳಿಗಳನ್ನು ಸಂಸತ್ತಿನಿಂದ ರೂಪಿಸಲಾದ ರಾಜ್ಯ ಪುನರ್ವಿಂಗಡಣಾ ಕಾಯ್ದೆ 1956ರ ಮೂಲಕ ಸ್ಥಾಪಿಸಲಾಗಿದೆ. ಕೇಂದ್ರ-ರಾಜ್ಯ ಸಂಬಂಧಗಳನ್ನು ಹಾಗೂ ಅಂತರರಾಜ್ಯ ಸಂಬಂಧಗಳನ್ನು ಸುಧಾರಿಸಲು ಈ ಮಂಡಳಿಗಳನ್ನು ಸ್ಥಾಪಿಸಲಾಗಿದೆ.
- ಪ್ರಸ್ತುತ ಭಾರತವನ್ನು ಐದು ವಲಯಗಳನ್ನಾಗಿ ವಿಂಗಡಿಸಲಾಗಿದೆ ಅವುಗಳೆಂದರೆ ಉತ್ತರ ವಲಯ ಮಂಡಳಿ, ದಕ್ಷಿಣ ವಲಯ ಮಂಡಳಿ, ಪಶ್ಚಿಮ ವಲಯ ಮಂಡಳಿ, ಪೂರ್ವ ವಲಯ ಮಂಡಳಿ ಮತ್ತು ಕೇಂದ್ರ ವಲಯ ಮಂಡಳಿ.
- ರಾಷ್ಟ್ರದ ನೈಸರ್ಗಿಕ ವಿಭಾಗಗಳು, ನದಿ ವ್ಯವಸ್ಥೆಗಳು, ಸಂಪರ್ಕ ವ್ಯವಸ್ಥೆ, ಸಾಂಸ್ಕೃತಿಕ ಮತ್ತು ಭಾಷಾ ಒಲವು, ಆರ್ಥಿಕ ಅಭಿವೃದ್ಧಿಯ ಅಗತ್ಯಗತೆಗಳು, ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆ ಮುಂತಾದ ವಿಷಯಗಳ ಬಗ್ಗೆ ವಲಯ ಮಂಡಳಿಗಳ ಸಭೆಯಲ್ಲಿ ಚರ್ಚಿಸಬೇಕಾಗುತ್ತದೆ.

**ವಿಶೇಷ ಸೂಚನೆ:**

www.karunaduexams.com

- ಈ ಮೇಲಿನ ವಲಯ ಮಂಡಳಿಗಳಲ್ಲಿ ಈಶಾನ್ಯ ರಾಜ್ಯಗಳನ್ನು ಸೇರಿಸಲಾಗಿಲ್ಲ. ಬದಲಿಗೆ 1971ರ ಕಾಯ್ದೆಯ ಮೂಲಕ ಈಶಾನ್ಯವಲಯ ಮಂಡಳಿಯನ್ನು ಸ್ಥಾಪಿಸಲಾಗಿದೆ. ಈ ವಲಯ ಆಗಸ್ಟ್ 8, 1972 ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇತರೆ ಮಂಡಳಿಗಳಂತೆ ಕೇಂದ್ರ ಗೃಹ ಸಚಿವರು ಈ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ.
- ಈಶಾನ್ಯ ವಲಯ ಮಂಡಳಿಯು ಅಸ್ಸಾಂ, ಮಣಿಪುರ, ಮಿಜೋರಾಂ, ಅರುಣಾಚಲ ಪ್ರದೇಶ, ನಾಗಲ್ಯಾಂಡ್, ಮೇಘಾಲಯ, ಸಿಕ್ಕಿಂ ಮತ್ತು ತ್ರಿಪುರ ರಾಜ್ಯಗಳನ್ನು ಒಳಗೊಂಡಿದೆ.

## ವಾರಣಾಸಿಯಲ್ಲಿ "ಉರ್ಜಾ ಗಂಗಾ (Urja Ganga)" ಯೋಜನೆಗೆ ಚಾಲನೆ ನೀಡದ ಮೋದಿ

ಮಹತ್ವಕಾಂಕ್ಷಿ ಕೊಳವೆ ಅನಿಲ ಯೋಜನೆ "ಉರ್ಜಾ ಗಂಗಾ"ಗೆ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಪ್ರದೇಶದ ವಾರಣಾಸಿಯಲ್ಲಿ ಶಂಕುಸ್ಥಾಪನೆ ನೆರವೇರಿಸಿದರು. 2018ರ ವೇಳಗೆ ಈ ಯೋಜನೆ ಪೂರ್ಣಗೊಳ್ಳಲಿದ್ದು, ದೇಶದ ಪೂರ್ವಭಾಗದ ನಿವಾಸಿಗಳಿಗೆ ಅಡುಗೆ ಅನಿಲ ಪೂರೈಕೆ ಹಾಗೂ ವಾಹನಗಳಿಗೆ CNG ಅನಿಲ ಸರಬರಾಜು ಮಾಡುವ ಉದ್ದೇಶವನ್ನು ಹೊಂದಿದೆ.

**ಪ್ರಮುಖಾಂಶಗಳು:**

- 3,050 ಕಿ.ಮೀ ಉದ್ದದ ಕೊಳವೆ ಅನಿಲ ಮಾರ್ಗವು ಉತ್ತರ ಪ್ರದೇಶದ ಜಗದೀಶ್ಪುರ ಮತ್ತು ಪಶ್ಚಿಮ ಬಂಗಾಳದ ಹಲ್ದೀಯಾ ನಡುವೆ ಸಂಪರ್ಕ ಕಲ್ಪಿಸುತ್ತದೆ.
- ಸುಮಾರು 50,000 ಕುಟುಂಬಗಳು ಹಾಗೂ 20,000 ವಾಹನಗಳಿಗೆ ಶುದ್ಧ ಮತ್ತು ಕಡಿಮೆ ದರದ PNG ಮತ್ತು CNG ಅನಿಲ ದೊರೆಯಲಿದೆ.
- ಈ ಯೋಜನೆಯು ಭಾರತದ ಪೂರ್ವ ಭಾಗದ ಸಾಮೂಹಿಕ ಬೆಳವಣಿಗೆ ಹಾಗೂ ಅಭಿವೃದ್ಧಿ ಕಡೆಗೆ ಪ್ರಮುಖ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಒಟ್ಟಾರೆಯಾಗಿ 20 ಲಕ್ಷ ಕುಟುಂಬಗಳು ಅಡುಗೆ ಅನಿಲ ಸಂಪರ್ಕವನ್ನು ಪಡೆಯಲಿವೆ.
- ದೇಶದ ಪೂರ್ವ ಭಾಗದ ಪ್ರಮುಖ ನಗರಗಳಾದ ವಾರಣಾಸಿ, ಜೇಮ್ ಶೆಡ್ಪುರ, ಪಾಟ್ನಾ, ರಾಂಚಿ, ಕೊಲ್ಕತ್ತಾ, ಭುಬನೇಶ್ವರ ಮತ್ತು ಕಟಕ್ ಈ ಯೋಜನೆಯ ಮುಖ್ಯ ಫಲಾನುಭವಿ ನಗರಗಳು.
- ಈ ಯೋಜನೆಯಡಿ ಅನಿಲ ಬಳಕೆ ಮಾಡಿಕೊಂಡು ಐದು ರಾಜ್ಯಗಳಲ್ಲಿ 25 ಕೈಗಾರಿಕ ಪ್ರದೇಶಗಳನ್ನು ಅಭಿವೃದ್ದಿಪಡಿಸಲಾಗುವುದು. ಅಲ್ಲದೇ 40 ಜಿಲ್ಲೆಗಳು ಮತ್ತು 2600 ಹಳ್ಳಿಗಳೂ ಇದರ ಪ್ರಯೋಜನ ಪಡೆದುಕೊಳ್ಳಲಿವೆ.
- ಬಿಹಾರದ ಬರೌಣಿ, ಉತ್ತರ ಪ್ರದೇಶದ ಗೋರಖ್ ಪುರ, ಜಾರ್ಖಂಡ್ನ ಸಿಂದ್ರಿ, ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ಸ್ಥಗಿತಗೊಂಡಿರುವ ರಸಗೊಬ್ಬರ ಕಾರ್ಖಾನೆಗಳು ಅನಿಲ ಪೊರೈಕೆ ಮಾಡಿ ಮತ್ತೆ ಪುನರ್ ಆರಂಭಿಸಲು ಯೋಜನೆ ಸಹಕಾರಿಯಾಗಲಿದೆ.

## ಮೊದಲ ರಾಷ್ಟ್ರೀಯ ಬುಡಕಟ್ಟು ಉತ್ಸವವನ್ನು ಉದ್ಘಾಟಿಸಿದ ಪ್ರಧಾನಿ ಮೋದಿ

ಪ್ರಪ್ರಥಮ ರಾಷ್ಟ್ರೀಯ ಬುಡಕಟ್ಟು ಉತ್ಸವವನ್ನು ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಉದ್ಘಾಟಿಸಿದರು. ನಾಲ್ಕು ದಿನಗಳ ಕಾಲ ಈ ಉತ್ಸವ ನಡೆಯಲಿದೆ. ಬುಡಕಟ್ಟು ಜನಾಂಗಗಳ ನಡುವೆ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು ಮತ್ತು ದೊಡ್ಡ ಮಟ್ಟದಲ್ಲಿ ಬುಡಕಟ್ಟು ಸಂಸ್ಕೃತಿಯ ವಿವಿಧ ಆಯಾಮಗಳನ್ನು ಪ್ರದರ್ಶಿಸುವುದು ಈ ಉತ್ಸವದ ಮುಖ್ಯ ಉದ್ದೇಶ.

- ಈ ಉತ್ಸವದಲ್ಲಿ 1600 ಬುಡಕಟ್ಟು ಕಲಾವಿದರು ಮತ್ತು 8,000 ಬುಡಕಟ್ಟು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.
- ಜೊತೆಗೆ ಕಲೆ, ಸಂಸ್ಕೃತಿ, ಕ್ರೀಡೆ, ಶೈಕ್ಷಣಿಕ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಪ್ರಖ್ಯಾತ ಬುಡಕಟ್ಟು ವ್ಯಕ್ತಿಗಳು ಪಾಲ್ಗೊಳ್ಳಲಿದ್ದಾರೆ.

www.karunaduexams.com

- ಬುಡಕಟ್ಟು ಜನಾಂಗದ ಕಲೆ, ಸಂಸ್ಕೃತಿ, ಸಂಪ್ರದಾಯವನ್ನು ಸಂರಕ್ಷಿಸುವುದು ಮತ್ತು ಉತ್ತೇಜಿಸುವುದು ಈ ಉತ್ಸವ ಆಯೋಜನೆ ಮಾಡಿರುವ ಹಿಂದಿನ ಉದ್ದೇಶವಾಗಿದೆ.
- ಅರಣ್ಯ ಹಕ್ಕು ಕಾಯಿದೆ-2006, ಬುಡಕಟ್ಟು ಪ್ರದೇಶಕ್ಕೆ ಪಂಚಾಯತ್ ವಿಸ್ತರಣೆ (PESA) ಕಾಯಿದೆ-1996 ಅನುಷ್ಠಾನಗಳ ಬಗ್ಗೆ ಕಾರ್ಯಾಗಾರವನ್ನು ಉತ್ಸವದಲ್ಲಿ ಹಮ್ಮಿಕೊಳ್ಳಲಾಗಿದೆ. ಅಲ್ಲದೇ, ಬುಡಕಟ್ಟು ಜನರ ಕಲೆ/ಕುಶಲ ಕಲೆ, ಸಂಪ್ರದಾಯ, ಕ್ರೀಡೆ, ಸಾಮಾಜಿಕ-ಸಾಂಸ್ಕೃತಿಕ ಆಯಾಮಗಳನ್ನು ಪ್ರದರ್ಶಿಸಲಾಗುವುದು.

**ಚುನಾವಣಾ ನಿಯಮಕ್ಕೆ ಬದಲಾವಣೆ ತಂದು ಇ-ಪೋಸ್ಟಲ್ ಬ್ಯಾಲೆಟ್ಗೆ ಅವಕಾಶ ಕಲ್ಪಿಸಿದ ಚುನಾವಣಾ ಆಯೋಗ**

ಭಾರತೀಯ ಚುನಾವಣಾ ಆಯೋಗವು ಚುನಾವಣಾ ನಿಯಮ 1961ಕ್ಕೆ ತಿದ್ದುಪಡಿ ತಂದಿದ್ದು, ಇ-ಪೋಸ್ಟಲ್ ಬ್ಯಾಲೆಟ್ಗೆ ಅವಕಾಶ ಕಲ್ಪಿಸಿದೆ. ಹೊಸ ನಿಯಮದ ಪ್ರಕಾರ ಯಾವುದೇ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿಯು ಚುನಾವಣಾ ಆಯೋಗ ನಿರ್ದಿಷ್ಟಪಡಿಸಿದ ಮಾನದಂಡಗಳಿಗೆ ಒಳಪಟ್ಟು ಅರ್ಹ ಮತದಾರರಿಗೆ ಬ್ಯಾಲೆಟ್ಗಳನ್ನು ವಿದ್ಯುನ್ಮಾನ ವಿಧಾನದ ಮೂಲಕ ಳುಹಿಸಿಕೊಡಬಹುದಾಗಿದೆ. ಭಾರತದ ಚುನಾವಣೆ ಪ್ರಕಿಯೆಯಲ್ಲಿ ಪೋಸ್ಟಲ್ ಬ್ಯಾಲೆಟ್ ತಮ್ಮದೇ ಆದ ಮಹತ್ವದ ಪಾತ್ರವನ್ನು ಹೊಂದಿವೆ. ಬೇರೆ ಬೇರೆ ಕಡೆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಹಾಗೂ ದುರ್ಗಮ ಭೌಗೋಳಿಕ ಪ್ರದೇಶಗಳಲ್ಲಿ ನೆಲಸಿರುವವರಿಗೆ ಮತದಾನದ ಹಕ್ಕನ್ನು ಚಲಾಯಿಸಲು ಪೋಸ್ಟಲ್ ಬ್ಯಾಲೆಟ್ ವ್ಯವಸ್ಥೆ ಅತ್ಯಂತ ಉಪಯೋಗಕಾರಿ ಎನಿಸಿದೆ.

**ಇ-ಪೋಸ್ಟಲ್ ಬ್ಯಾಲೆಟ್ ವ್ಯವಸ್ಥೆ ಎಂದರೆ?**

ಇದೊಂದು ಅತ್ಯಂತ ಸರಳ ವಿಧಾನವಾಗಿದ್ದು, ರಿಟರ್ನಿಂಗ್ ಅಧಿಕಾರಿಯು ಬ್ಯಾಲೆಟ್ ಗಳನ್ನು ವೆಬ್ ಪೋರ್ಟಲ್ ಮುಖಾಂತರ ಒಂದು ಬಾರಿ ಪಾಸ್ವರ್ಡ್ (OTP) ಸಮೇತ ಕಳುಹಿಸಿಕೊಡುತ್ತಾರೆ. ಮತದಾರರು ಪಾಸ್ವರ್ಡ್ ಬಳಸಿ ಬ್ಯಾಲೆಟ್ಗಳನ್ನು ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಅನಂತರ ಮತದಾರರು ಪೋಸ್ಟ್ ಮೂಲಕ ಮತಪತ್ರವನ್ನು ಕಳುಹಿಸಿಕೊಡಬೇಕು. ಭದ್ರತೆ ಕೊರತೆ ಕಾರಣ ಮತಪತ್ರಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಮಾತ್ರ ಅವಕಾಶ ನೀಡಲಾಗಿದ್ದು, ಮತ ಚಲಾವಣೆ ನಂತರ ಬ್ಯಾಲೆಟ್ ಅನ್ನು ಪೋಸ್ಟ್ ಮುಖಾಂತರ ಮಾತ್ರ ಕಳುಹಿಸಬೇಕಿದೆ.

**ಹೊಸ ವ್ಯವಸ್ಥೆಯ ಅನುಕೂಲವೇನು?**

ಹೊಸ ವ್ಯವಸ್ಥೆಯಿಂದ ಸಮಯದ ಉಳಿತಾಯವಾಗಲಿದೆ. ಅಲ್ಲದೇ ಕಾಗದದ ಬಳಕೆಯು ಉಳಿತಾಯವಾಗಲಿದೆ.

**ವೈಟ್ನರ್ (Whitener) ಮಾರಾಟ ಮೇಲೆ ನಿಷೇಧ ಹೇರಿದ ಉತ್ತರಖಂಡ್ ಹೈಕೋರ್ಟ್**

ವೈಟ್ನರ್ ಮೂಸುವ ಮೂಲಕ ಯುವಕನೊಬ್ಬ ಮೃತಪಟ್ಟ ಹಿನ್ನಲೆಯಲ್ಲಿ ವೈಟ್ನರ್ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಉತ್ತರಖಂಡ್ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ಇತ್ತೀಚೆಗೆ 14 ವರ್ಷದ ಯುವಕನೊಬ್ಬ ಮೋಜಿಗಾಗಿ ವೈಟ್ನರ್ ಬಳಸಿ ಸಾವನ್ನಪ್ಪಿದ ಕಾರಣ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡ ಹೈಕೋರ್ಟ್ ಈ ಆದೇಶ ನೀಡಿದೆ. ಅಲ್ಲದೇ, ಫೆವಿಕ್ವಿಕ್, ಐಯೋಡೆಕ್ಸ್ ನಂತಹ ಪದಾರ್ಥಗಳನ್ನು 18 ವರ್ಷಕ್ಕಿಂತ ಕೆಳಗಿನವರಿಗೆ ಮಾರಾಟ ಮಾಡದಂತೆ ಹೈಕೋರ್ಟ್ ಆದೇಶಿಸಿದೆ.

**ವೈಟ್ನರ್ ಎಂದರೇನು?**

ಕಾಗದದ ಮೇಲೆ ಇಂಕ್ ಅನ್ನು ಅಳಿಸಲು ಬಳಸುವ ಬಿಳಿ ದ್ರವವೇ ವೈಟ್ನರ್. ವೈಟ್ನರ್ ನಲ್ಲಿ ಅಲಿಫಾಟಿಕ್ ಪೆಟ್ರೋಲಿಯಂ ಹೈಡ್ರೋಕಾರ್ಬನ್ ಗಳಾದ ಟಾಲಿನ್ ಮತ್ತು ಟ್ರೈಕ್ಲೋರೋಇಥೇನ್ ನಂತಹ ಅಮಲೇರಿಸುವ ರಾಸಾಯನಿಕಗಳನ್ನು ಬಳಸಲಾಗಿರುತ್ತದೆ

**ವೈಟ್ನರ್ ಸೇವಿಸುವ ಚಟ?**

- ವೈಟ್ನರ್ ಸೇವಿಸುವವರು ವೈಟ್ನರ್ ನಲ್ಲಿರುವ ಅಮಲೇರಿಸುವ ರಾಸಾಯನಿಕಗಳನ್ನು ಮೂಸುವ ಮೂಲಕ ಮೋಜಿಗೆ ಮೊರೆ ಹೋಗುತ್ತಾರೆ. ಹೀಗೆ ಸೇವನೆ ಮಾಡಿದಾಗ ಭ್ರಮಾತ್ಮಕ ಪರಿಣಾಮ ಉಂಟಾಗಿ ಸೇವನೆ ಮಾಡಿದ ವ್ಯಕ್ತಿಯ ಮೇಲೆ ಮಾದಕ ಪರಿಣಾಮ ಬೀರುತ್ತದೆ. ಮದ್ಯ ಸೇವನೆ ಅಥವಾ ಡ್ರಗ್ ಬಳಕೆಯ ಮೊದಲ ಹೆಜ್ಜೆ ಇದಾಗಿದೆ.
- ಇತ್ತೀಚೆಗೆ ಯುವ ಸಮೂಹದಲ್ಲಿ ವೈಟ್ನರ್ ಬಳಕೆ ತೀವ್ರವಾಗಿ ಹೆಚ್ಚುತ್ತಿದೆ. ಸುಲಭವಾಗಿ ಮತ್ತು ಕಡಿಮೆ ದರದಲ್ಲಿ ದೊರೆಯುವ ಕಾರಣ ಇದರ ಬಳಕೆ ಮಿತಿಮೀರುತ್ತಿದೆ.

**ವೈಟ್ನರ್ ಸೇವನೆಯ ಪರಿಣಾಮ:**

- ವೈಟ್ನರ್ ಗಳಲ್ಲಿ ಪ್ರಾಣಾಂತಿಕ ದ್ರಾವಕಗಳಾದ ಹೈಡ್ರೋಕಾರ್ಬನ್ ಇರುವ ಕಾರಣ ಸುಲಭವಾಗಿ ರಕ್ತಕ್ಕೆ ಸೇರ್ಪಡೆಗೊಳ್ಳುವ ಮೂಲಕ ವ್ಯಕ್ತಿಯ ನರಮಂಡಲಕ್ಕೆ ಹಾನಿ ಉಂಟು ಮಾಡುತ್ತವೆ. ಕೆಲವೊಮ್ಮೆ ಆಲಸ್ಯ ಸೇರಿದಂತೆ ಕಿಡ್ನಿ, ಯಕೃತ್ ಮತ್ತು ಶ್ವಾಸಕೋಶದ ನಿಷ್ಕ್ರಿಯತೆಗೆ ಎಡೆಮಾಡುತ್ತದೆ.

**<u>ಜಮ್ಮು ಮತ್ತು ಕಾಶ್ಮೀರದಲ್ಲಿ ಅಧಿಕ ಸರಾಸರಿ ಜೀವಿತಾವಧಿ: ಎಸ್ಆರ್ಎಸ್ ವರದಿ</u>**

ಮಾದರಿ ನೋಂದಣಿ ವ್ಯವಸ್ಥೆಯು (ಎಸ್ಆರ್ಎಸ್) ಸಮೀಕ್ಷೆ ನಡೆಸಿ ಬಿಡುಗಡೆ ಮಾಡಿರುವ ವರದಿ ಪ್ರಕಾರ ಭಾರತದಲ್ಲಿ 2010-14ರ ಅವಧಿಯಲ್ಲಿ ಜನರ ಸರಾಸರಿ ಜೀವಿತಾವಧಿ 67 ವರ್ಷ 11 ತಿಂಗಳಿಗೆ ಏರಿಕೆಯಾಗಿದೆ. 60 ವರ್ಷಗಳ ನಂತರ ಸರಾಸರಿ ಜೀವಿತಾವಧಿ ಜಮ್ಮು ಮತ್ತು ಕಾಶ್ಮೀರದಲ್ಲಿ ಅತಿ ಹೆಚ್ಚು ಎಂದು ಸಮೀಕ್ಷೆಯಿಂದ ತಿಳಿದು ಬಂದಿದೆ. ಆ ಮೂಲಕ ವಿವಿಧ ವಯಸ್ಸಿನವರ ಜೀವಿತಾವಧಿಯಲ್ಲಿ ಮುಂಚೂಣಿಯಲ್ಲಿದ್ದ ಕೇರಳವನ್ನು ಜಮ್ಮು ಮತ್ತು ಕಾಶ್ಮೀರ ಹಿಂದಿಕ್ಕಿದೆ.

**ವರದಿಯ ಬಗ್ಗೆ**:

- ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾದ ಮಾದರಿ ನೋಂದಣಿ ವ್ಯವಸ್ಥೆಯು 2010 ರಿಂದ 2014 ರವರೆಗೆ ನಡೆಸಲಾದ ಸಮೀಕ್ಷೆಯಿಂದ ರಾಜ್ಯಗಳ ಮಟ್ಟದಲ್ಲಿ ಸರಾಸರಿ ಜೀವಿತಾವಧಿ ವರದಿಯನ್ನು ಹೊರ ತಂದಿದೆ.
- 0, 10, 20, 30, 40, 50, 60 ಮತ್ತು 70 ಹೀಗೆ ವಿವಿಧ ವಯಸ್ಸಿನವರ ಸರಾಸರಿ ಜೀವಿತಾವಧಿಯನ್ನು ಪರಿಗಣಿಸಲಾಗಿದೆ.
- ಒಂದು ಕೋಟಿಗಿಂತ ಹೆಚ್ಚು ಜನಸಂಖ್ಯೆ ಇರುವ 21 ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರ ಸಮೀಕ್ಷೆ ನಡೆಸಲಾಗಿದೆ.

**ಪ್ರಮುಖಾಂಶಗಳು**:

- ಗಂಡಸರಿಗಿಂತ ಹೆಂಗಸರ ಸರಾಸರಿ ಜೀವಿತಾವಧಿ ಹೆಚ್ಚು ಎಂಬ ಅಂಶ ಸಮೀಕ್ಷೆಯಿಂದ ತಿಳಿದು ಬಂದಿದೆ. ಹೆಚ್ಚು ನಿಖರವಾದ ಮಾಹಿತಿ ಪಡೆಯುವುದಕ್ಕಾಗಿ ಐದು ವರ್ಷಗಳ ಅವಧಿಯ ಅಂಕಿ ಅಂಶವನ್ನು ವಿಶ್ಲೇಷಣೆ ನಡೆಸಿ ಸರಾಸರಿ ಜೀವಿತಾವಧಿಯನ್ನು ನಿರ್ಧರಿಸಲಾಗುತ್ತದೆ.
- ಕೇರಳದಲ್ಲಿ ಒಟ್ಟಾರೆ ಸರಾಸರಿ ಜೀವಿತಾವಧಿ (ಹುಟ್ಟಿನಿಂದ) ದೇಶದ ಇತರೆ ರಾಜ್ಯಗಳಿಂತ ಹೆಚ್ಚಿದೆ. ಕೇರಳದ ಸರಾಸರಿ ಜೀವಿತಾವಧಿ 74.9ವರ್ಷ. ಪುರಷರ ಜೀವಿತಾವಧಿ 72 ಮತ್ತು ಮಹಿಳೆಯರ ಜೀವಿತಾವಧಿ 77.8 ವರ್ಷ ಇದೆ.
- ದೆಹಲಿ 73 ವರ್ಷ ಎರಡುವರೆ ತಿಂಗಳ ಜೀವಿತಾವಧಿ ಹೊಂದುವ ಮೂಲಕ ಎರಡನೇ ಸ್ಥಾನದಲ್ಲಿದೆ.
- 68 ವರ್ಷ ಒಂಬತ್ತುವರೆ ತಿಂಗಳು ಜೀವಿತಾವಧಿ ಇರುವ ಕರ್ನಾಟಕ 8ನೇ ಸ್ಥಾನದಲ್ಲಿದೆ.
- 63 ವರ್ಷ 11 ತಿಂಗಳು ಹೊಂದಿ ಅಸ್ಸಾಂ ಕಡಿಮೆ ಜೀವಿತಾವಧಿ ಹೊಂದಿದ ರಾಜ್ಯವಾಗಿದೆ.

www.karunaduexams.com

## ಸಮಾನ ಶ್ರೇಣಿ ಸಮಾನ ಪಿಂಚಣಿ ನ್ಯಾಯಾಂಗ ಸಮಿತಿ ವರದಿ ಸಲ್ಲಿಕೆ

ಸಮಾನ ಶ್ರೇಣಿ ಸಮಾನ ಪಿಂಚಣಿ ಯೋಜನೆ ಜಾರಿಗೆ ತರಲು ಕೇಂದ್ರ ಸರ್ಕಾರ ರಚಿಸಿದ್ದ ಏಕ ಸದಸ್ಯ ನ್ಯಾಯಾಂಗ ಸಮಿತಿ ತನ್ನ ವರದಿಯನ್ನು ಕೇಂದ್ರ ರಕ್ಷಣಾ ಸಚಿವ ಮನೋಹರ್ ಪಣಿಕ್ಕರ್ ಅವರಿಗೆ ಸಲ್ಲಿಸಿದೆ. ಪಾಟ್ನಾ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಾಮೂರ್ತಿ ನರಸಿಂಹ ರೆಡ್ಡಿ ನೇತೃತ್ವದ ಸಮಿತಿಯನ್ನು ಕೇಂದ್ರ ಸರ್ಕಾರ ಡಿಸೆಂಬರ್ 2015ರಲ್ಲಿ ನೇಮಿಸಿತ್ತು. ಸಮಾನ ಶ್ರೇಣಿ ಸಮಾನ ಪಿಂಚಣಿ ಯೋಜನೆ ಅನುಷ್ಠಾನಕ್ಕೆ ಎದುರಾಗಬಹುದಾದ ಗೊಂದಲಗಳನ್ನು ನಿವಾರಿಸುವ ಬಗ್ಗೆ ಅಧ್ಯಯನ ನಡೆಸಿ ಶಿಫಾರಸ್ಸು ನಡೆಸುವಂತೆ ಸಮಿತಿಗೆ ಸೂಚಿಸಲಾಗಿತ್ತು. ಸಮಿತಿಯು ದೇಶದ ಸುಮಾರು 20 ನಗರ ಮತ್ತು ಪಟ್ಟಣಗಳಲ್ಲಿ ಮಾಜಿ ಸೈನಿಕರೊಂದಿಗೆ ಸಮಾಲೋಚನೆ ನಡೆಸಿ ವರದಿಯನ್ನು ಸಲ್ಲಿಸಿದೆ.

**ಸಮಾನ ಶ್ರೇಣಿ ಸಮಾನ ಪಿಂಚಣಿ ಎಂದರೇನು?**

ಸಮಾನ ಶ್ರೇಣಿ- ಸಮಾನ ಪಿಂಚಣಿ ಯೋಜನೆ ಎಂದರೆ ಒಂದೇ ಶ್ರೇಣಿಯಲ್ಲಿ, ಸಮಾನ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ಬೇರೆ ಬೇರೆ ದಿನಾಂಕಗಳಂದು ನಿವೃತ್ತಿಯಾದರೂ, 1973ರ ಭಾರತೀಯ ಸಶಸ್ತ್ರ ಪಡೆಗಳ ಕಾಯ್ದೆಯಲ್ಲಿ ನೀಡಲ್ಪಟ್ಟ ಪಿಂಚಣಿ ಹಾಗೂ ಇತರ ಪ್ರಯೋಜನಗಳನ್ನು ಸಮಾನವಾಗಿ ನೀಡುವ ಯೋಜನೆ ಇದಾಗಿದೆ. ಸರಳವಾಗಿ ಹೇಳುವುದಾದರೆ, ಯಾವುದೇ ವರ್ಷ ಅವರು ನಿವೃತ್ತಿಯಾಗಿದ್ದರೂ, ಆ ಶ್ರೇಣಿಯಲ್ಲಿ, ಅಷ್ಟೇ ವರ್ಷ ಸೇವೆಸಲ್ಲಿಸಿದ ಇತರರಿಗೆ ಸಮಾನವಾದ ಪಿಂಚಣಿಯನ್ನು ಪಡೆಯುತ್ತಾರೆ. ಆದರೆ ಈ ಪಿಂಚಣಿಯಲ್ಲಿ ಭಿನ್ನತೆಯ ಏಕೈಕ ಕಾರಣವೆಂದರೆ, ಆ ಶ್ರೇಣಿಯಲ್ಲಿ ಸೇವಾವಧಿಯಲ್ಲಿ ಆತ ವೇತನ ಬಡ್ತಿಯನ್ನು ಪಡೆದಿದ್ದರೆ ಮಾತ್ರ ಪಿಂಚಣಿಯಲ್ಲಿ ಬದಲಾವಣೆಯಾಗುತ್ತದೆ.

## ವಿಶ್ವಬ್ಯಾಂಕ್ ಸುಲಭ ವಹಿವಾಟು ಸೂಚ್ಯಂಕ: ಭಾರತಕ್ಕೆ 130ನೇ ಸ್ಥಾನ

ವಿಶ್ವಬ್ಯಾಂಕ್ ಬಿಡುಗಡೆಗೊಳಿಸಿದ ಸುಲಭ ವಹಿವಾಟು ಸೂಚ್ಯಂಕ-2017 (Easy of Doing Business Index) ರಲ್ಲಿ 190 ರಾಷ್ಟ್ರಗಳ ಪೈಕಿ ಭಾರತ 130ನೇ ಸ್ಥಾನಗಳಿಸಿದೆ. ಕಳೆದ ವರ್ಷದ ಸೂಚ್ಯಂಕದಲ್ಲಿ ಭಾರತ 131ನೇ ಸ್ಥಾನದಲ್ಲಿತ್ತು. ಕೇವಲ ಒಂದು ಸ್ಥಾನವನ್ನು ಮಾತ್ರ ಉತ್ತಮಪಡಿಸಿಕೊಳ್ಳುವಲ್ಲಿ ಭಾರತ ಯಶಸ್ವಿಯಾಗಿದೆ.

**2017 ವರದಿಯ ಪ್ರಮುಖಾಂಶಗಳು:**

- **ಟಾಪ್ ಹತ್ತು ರಾಷ್ಟ್ರಗಳು**: ನ್ಯೂಜಿಲ್ಯಾಂಡ್, ಸಿಂಗಾಪುರ, ಡೆನ್ಮಾರ್ಕ್, ಹಾಂಕ್ ಕಾಂಗ್, ದಕ್ಷಿಣ ಕೊರಿಯಾ, ನಾರ್ವೆ, ಯುಕೆ, ಯುಎಸ್, ಸ್ವೀಡನ್ ಮತ್ತು ಮಸಿಡೊನಿಯ.
- **ಬ್ರಿಕ್ಸ್ ರಾಷ್ಟ್ರಗಳ ಪೈಕಿ:** ಬ್ರಿಕ್ಸ್ ರಾಷ್ಟ್ರಗಳ ಪೈಕಿ ಭಾರತ ಸುಲಭ ವಹಿವಾಟು ವಿಷಯಕ್ಕೆ ಸಂಬಂಧಿಸಿದಂತೆ ತೀರಾ ಹಿಂದಿ ಉಳಿದಿದೆ. ಬ್ರಿಕ್ಸ್ ರಾಷ್ಟ್ರಗಳಲ್ಲಿ ರಷ್ಯಾ (40ನೇ), ದಕ್ಷಿಣ ಆಫ್ರಿಕಾ (74), ಚೀನಾ (78), ಬ್ರೆಜಿಲ್ (123) ಮತ್ತು ಭಾರತ (130) ಸ್ಥಾನ ಪಡೆದುಕೊಂಡಿವೆ.
- **ಭಾರತದ ನೆರೆಹೊರೆ ರಾಷ್ಟ್ರಗಳು:** ಭೂತಾನ್ (73), ಚೀನಾ (78), ನೇಪಾಳ (107), ಶ್ರೀಲಂಕಾ (110), ಪಾಕಿಸ್ತಾನ (144) ಮತ್ತು ಬಾಂಗ್ಲದೇಶ (176).
- **ಭಾರತಕ್ಕೆ ಸಂಬಂಧಿಸಿದಂತೆ:** ವರದಿಯ ಪ್ರಕಾರ ವಿದ್ಯುತ್ ಸಂಪರ್ಕ ನೀಡುವ ವಿಷಯಗಳಲ್ಲಿ ಭಾರತ ಉತ್ತಮ ಸಾಧನೆ ತೋರಿದೆ. ಆದರೆ ತೆರಿಗೆ ಪಾವತಿ, ಗುತ್ತಿಗೆ ನೀಡುವ ವಿಚಾರದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಬೇಕಿದೆ.

**ಸುಲಭ ವಹಿವಾಟು ಸೂಚ್ಯಂಕ:**

- ಸುಲಭ ವಹಿವಾಟು ಸೂಚ್ಯಂಕವನ್ನು ವಿಶ್ವಬ್ಯಾಂಕ್ ಪ್ರತಿ ವರ್ಷ ಹೊರತರುತ್ತಿದೆ. 2004 ರಲ್ಲಿ ಮೊದಲ ಬಾರಿಗೆ ಪ್ರಕಟಿಸಲಾಗಿತ್ತು.
- ಸೂಚ್ಯಂಕದಲ್ಲಿ 10 ಮಾನದಂಡಗಳನ್ನು ಆಧರಿಸಿ ರಾಷ್ಟ್ರಗಳಿಗೆ ಶ್ರೇಣಿಯನ್ನು ನೀಡಲಾಗುತ್ತದೆ.

www.karunaduexams.com

- ಈ ಹತ್ತು ಮಾನದಂಡಗಳೆಂದರೆ ವಿದ್ಯುತ್ ಸಂಪರ್ಕ ಪಡೆಯುವುದು, ನಿರ್ಮಾಣ ಪರವಾನಿಗೆ, ಆಸ್ತಿ ನೋಂದಣಿ, ಹೂಡಿಕೆದಾರರ ಹಿತಾಸಕ್ತಿ ಕಾಪಾಡುವುದು, ಸಾಲ ಪಡೆಯುವುದು, ಕಾರ್ಮಿಕರಿಗೆ ಉದ್ಯೋಗ ನೀಡುವುದು, ಗಡಿಯಾಚೆ ವ್ಯಾಪಾರ ವಹಿವಾಟು, ತೆರಿಗೆ ಪಾವತಿ, ಗುತ್ತಿಗೆ ನೀಡುವುದು ಮತ್ತು ದಿವಾಳಿತನ ಸುಧಾರಿಸುವುದು.

**ವಿಶ್ವ ಆರ್ಥಿಕ ವೇದಿಕೆ ಲಿಂಗ ಸಮಾನತೆ ವರದಿಯಲ್ಲಿ ಭಾರತಕ್ಕೆ 87ನೇ ಸ್ಥಾನ**

ವಿಶ್ವ ಆರ್ಥಿಕ ವೇದಿಕೆ ಲಿಂಗ ಸಮಾನತೆ ವರದಿ-2016 ರಲ್ಲಿ ಭಾರತ 144 ರಾಷ್ಟ್ರಗಳ ಪೈಕಿ 87ನೇ ಸ್ಥಾನ ಪಡೆದುಕೊಂಡಿದೆ. ಲಿಂಗ ಸಮಾನತೆಯ ವಿಚಾರದಲ್ಲಿ ಭಾರತವು ಕಳೆದ ವರ್ಷಕ್ಕಿಂತ 21 ಸ್ಥಾನ ಮೇಲೆ ಏರಿಕೆ ಕಂಡಿದೆ. ಪುರುಷ ಮತ್ತು ಸ್ತ್ರೀ ನಡುವೆ ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ ಆಗಿರುವ ಪ್ರಗತಿಯನ್ನು ಪರಿಗಣಿಸಿ ಈ ವರದಿಯನ್ನು ಸಿದ್ದಪಡಿಸಲಾಗುತ್ತದೆ. ಈ ನಾಲ್ಕು ಕ್ಷೇತ್ರಗಳೆಂದರೆ ಶೈಕ್ಷಣಿಕ ಅರ್ಹತೆ, ಆರೋಗ್ಯ ಮತ್ತು ಬದುಕುಳಿಯುವಿಕೆ, ಆರ್ಥಿಕ ಅವಕಾಶ ಮತ್ತು ರಾಜಕೀಯ ಸಬಲೀಕರಣ.

**ವರದಿಯ ಪ್ರಮುಖಾಂಶಗಳು:**

- ಐಸ್ಲ್ಯಾಂಡ್, ಫಿನ್ಲ್ಯಾಂಡ್, ನಾರ್ವೆ, ಸ್ವೀಡನ್ ಮತ್ತು ರಾವಂಡ ವರದಿಯಲ್ಲಿ ಮೊದಲ ಐದು ಸ್ಥಾನಗಳಿಸಿರುವ ರಾಷ್ಟ್ರಗಳು.
- ಪ್ರಸ್ತುಕ ವರ್ಷದ ವರದಿಯಲ್ಲಿ ಭಾರತ 87ನೇ ಸ್ಥಾನಗಳಿಸುವ ಮೂಲಕ ಚೀನಾ ದೇಶವನ್ನು ಹಿಂದಕ್ಕೆ ತಳ್ಳಿದೆ. ವರದಿಯಲ್ಲಿ ಚೀನಾ 99ನೇ ಸ್ಥಾನದಲ್ಲಿದೆ.
- ಶಿಕ್ಷಣ ರಂಗದಲ್ಲಾಗಿರುವ ಪ್ರಗತಿ ವರದಿಯಲ್ಲಿ ಭಾರತ ಉತ್ತಮ ಸ್ಥಾನಪಡೆಯಲು ಕಾರಣವಾಗಿದೆ. ಶೈಕ್ಷಣಿಕ ಅರ್ಹತೆಯಲ್ಲಿ ಭಾರತ ಕಳೆದ ವರ್ಷ 125ನೇ ಸ್ಥಾನದಲ್ಲಿದ್ದರೆ, ಈ ವರ್ಷ 113ನೇ ಸ್ಥಾನ ಪಡೆದುಕೊಂಡಿದೆ.
- ಆರ್ಥಿಕವಾಗಿ ಪಾಲ್ಗೊಳ್ಳುವಿಕೆ ಮತ್ತು ಅವಕಾಶದ ವಿಷಯದಲ್ಲಿ 136ನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ 139ನೇ ಸ್ತಾನ ಪಡೆದುಕೊಂಡಿತ್ತು.
- ಆರೋಗ್ಯ ಹಾಗೂ ಬದುಕುವಿಕೆಯಲ್ಲಿ ಅದು 142 ರಷ್ಟು ಕೆಳಗಿನ ಸ್ಥಾನದಲ್ಲಿದ್ದರೆ, ರಾಜಕೀಯ ಸಬಲೀಕರಣದಲ್ಲಿ ಅಗ್ರ 10 ರಾಷ್ಟ್ರಗಳಲ್ಲಿ ಸ್ಥಾನ ಪಡೆದಿದೆ.

**ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ ಐರೋಪ್ಯ ಒಕ್ಕೂಟ ಮತ್ತು ಕೆನಡಾ ಸಹಿ**

ಐತಿಹಾಸಿಕ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ (CETA) ಐರೋಪ್ಯ ಒಕ್ಕೂಟ ಮತ್ತು ಕೆನಡಾ ಸಹಿ ಮಾಡಿವೆ. ಕೆನಡಾದ ಪ್ರಧಾನಿ ಜಸ್ಟಿನ್ ಟುಡೆ ಮತ್ತು ಐರೋಪ್ಯ ಒಕ್ಕೂಟದ ಹಿರಿಯ ಅಧಿಕಾರಿಗಳು ಈ ಒಪ್ಪಂದಕ್ಕೆ ಬ್ರೆಜಿಲ್ನ ಬ್ರುಸೆಲ್ ನಲ್ಲಿ ಸಹಿ ಹಾಕಿದರು. ಐರೋಪ್ಯ ಒಕ್ಕೂಟದ 28 ರಾಷ್ಟ್ರಗಳು ಈಗ ಈ ಒಪ್ಪಂದವನ್ನು ಅನುಮೋದಿಸಬೇಕಿದೆ.

**ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ ಎಂದರೇನು**?

- CETA ಕೆನಡಾ ಮತ್ತು ಐರೋಪ್ಯ ಒಕ್ಕೂಟ ನಡುವಿನ ಮುಕ್ತ ವ್ಯಾಪಾರ ಒಪ್ಪಂದವಾಗಿದೆ. ಇದರಡಿ ಅನೇಕ ಕೈಗಾರಿಕಾ ಸರಕು, ಕೃಷಿ ಮತ್ತು ಆಹಾರ ಪದಾರ್ಥಗಳು ಸೇರಿದಂತೆ ಸುಮಾರು 9,000 ವಸ್ತುಗಳ ಮೇಲೆ ತೆರಿಗೆ ರದ್ದತಿ ಉದ್ದೇಶ ಹೊಂದಿದೆ.
- ಏಕೀಕೃತ ಐರೋಪ್ಯ ಮಾರುಕಟ್ಟೆಯನ್ನು ವಿಶ್ವದ 10ನೇ ಅತಿದೊಡ್ಡ ಮಾರುಕಟ್ಟೆಯಾದ ಕೆನಡಾದೊಂದಿಗೆ ಸಂಪರ್ಕಿಸಲು ಒಪ್ಪಂದ ಸಹಕಾರಿಯಾಗಲಿದೆ. ಇದರಿಂದ ಐರೋಪ್ಯ ಒಕ್ಕೂಟ ಆರ್ಥಿಕತೆಗೆ 11.6 ಬಿಲಿಯನ್ ಯುರೋ ಮತ್ತು ಕೆನಡಾ ಆರ್ಥಿಕ ವ್ಯವಸ್ಥೆಗೆ 8.2 ಬಿಲಿಯನ್ ಯುರೋ ಸೇರ್ಪಡೆಗೊಳ್ಳಲಿದೆ.
- ಇದಲ್ಲದೇ ದೂರಸಂಪರ್ಕ, ಹಣಕಾಸು ವಲಯ ಮತ್ತು ಸೇವಾ ವಲಯದಲ್ಲಿ ಸ್ಪರ್ಧೆ ಮತ್ತು ಸಹಕಾರಕ್ಕೆ ನಾಂದಿ ಹಾಡಲಿದೆ.

www.karunaduexams.com

**ಕೇಂದ್ರಾಡಳಿತ ಪ್ರದೇಶಗಳಿಗೆ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮ ಜಾರಿ**

ಕೇಂದ್ರ ವಸತಿ ಸಚಿವಾಲಯವು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮ-2016 ಅನ್ನು ಐದು ಕೇಂದ್ರಾಡಳಿತ ಪ್ರದೇಶಗಳಿಗೂ ಅನ್ವಯವಾಗುವಂತೆ ಅಧಿಸೂಚನೆ ಹೊರಡಿಸಿದೆ. ಅಂಡಮಾನ್ ಮತ್ತು ನಿಕೋಬರ್ ದ್ವೀಪ ಪ್ರದೇಶ, ದಾದ್ರ ಮತ್ತು ನಗರ ಹವೇಲಿ, ದಮನ್ ಮತ್ತು ದಿಯು, ಲಕ್ಷದ್ವೀಪ ಮತ್ತು ಚಂಡೀಘರ್ ಕ್ಕೆ ಈ ಅಧಿಸೂಚನೆ ಅನ್ವಯವಾಗಲಿದೆ.

**ಪ್ರಮುಖಾಂಶಗಳು:**

- ವಸತಿ ಮತ್ತು ವಾಣಿಜ್ಯ ಉದ್ದೇಶಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಈ ನಿಯಮಗಳನ್ನು ಕೇಂದ್ರಾಡಳಿತ ಪ್ರದೇಶಗಳಿಗೂ ವಿಸ್ತರಿಸಲಾಗಿದೆ.
- ಕಾಯಿದೆ ಪ್ರಕಾರ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಮತ್ತು ರಿಯಲ್ ಎಸ್ಟೇಟ್ ಮೇಲ್ಮನವಿ ಪ್ರಾಧಿಕಾರವನ್ನು ಏಪ್ರಿಲ್ 2017 ಕೊನೆಗೆ ಸ್ಥಾಪಿಸಬೇಕು.
- ನಿಯಮ ಉಲ್ಲಘಿಸುವ ಪ್ರವರ್ತಕರಿಗೆ ಗರಿಷ್ಠ ಮೂರು ವರ್ಷ ಜೈಲು ಶಿಕ್ಷೆ ವಿಧಿಸುವ ಅವಕಾಶ ಕಾಯಿದೆಯಲ್ಲಿದೆ. ಅದೇ ರೀತಿ ರಿಯಲ್ ಎಸ್ಟೇಟ್ ಏಜೆಂಟರು ಮತ್ತು ಖರೀದಿದಾರರು ಕಾನೂನು ಉಲ್ಲಂಘಿಸಿದರೆ ಗರಿಷ್ಠ ಒಂದು ವರ್ಷ ಜೈಲು ಶಿಕ್ಷೆ ನೀಡುವುದಕ್ಕೆ ಅವಕಾಶ ಇದೆ. ಇದರ ಜತೆಗೆ ಯೋಜನೆಯ ಶೇ 10% ಮೊತ್ತವನ್ನು ದಂಡವಾಗಿ ತೆರಬೇಕಾಗುತ್ತದೆ.
- ಮನೆ ಮತ್ತಿತರ ರಿಯಲ್ ಎಸ್ಟೇಟ್ ಯೋಜನೆಗಳು ವಿಳಂಬವಾಗುವುದನ್ನು ತಡೆಯಲು ಅಥವಾ ವಿಳಂಬ ಆದಾಗ ಗ್ರಾಹಕರಿಗೆ ಪರಿಹಾರ ಒದಗಿಸಲು ಹಲವು ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಲಾಗಿದೆ.

**ಜಾಗತಿಕ ಯುವಜನ ಅಭಿವೃದ್ಧಿ ಸೂಚ್ಯಂಕ: ಭಾರತಕ್ಕೆ 133ನೇ ಸ್ಥಾನ**

ಜಾಗತಿಕ ಯುವಜನ ಅಭಿವೃದ್ಧಿ ಸೂಚ್ಯಂಕ-2016 ರಲ್ಲಿ 183 ರಾಷ್ಟ್ರಗಳ ಪೈಕಿ ಭಾರತ 133ನೇ ಸ್ಥಾನ ಪಡೆದುಕೊಂಡಿದೆ. ಕಾಮನ್ ವೆಲ್ತ್ ಸಚಿವಾಲಯ ಈ ಸೂಚ್ಯಂಕವನ್ನು ಅಭಿವೃದ್ಧಿಪಡಿಸಿ ಹೊರ ತಂದಿದೆ. ಉದ್ಯೋಗ, ಶಿಕ್ಷಣ, ಆರೋಗ್ಯ ಮತ್ತು ರಾಜಕೀಯ ಕ್ಷೇತ್ರದಲ್ಲಿ ಯುವಕರ ಭವಿಷ್ಯವನ್ನು ಮಾನದಂಡವಾಗಿಟ್ಟುಕೊಂಡು ಸೂಚ್ಯಂಕವನ್ನು ತಯಾರಿಸಲಾಗಿದೆ.

**ಪ್ರಮುಖಾಂಶಗಳು:**

- **ಟಾಪ್ ಹತ್ತು ರಾಷ್ಟ್ರಗಳು**: ಜರ್ಮನಿ, ಡೆನ್ಮಾರ್ಕ್, ಆಸ್ಟ್ರೇಲಿಯಾ, ಸ್ವಿಟ್ಜರ್ಲ್ಯಾಂಡ್, ಯುಕೆ, ನೆದರ್ಲ್ಯಾಂಡ್, ಆಸ್ಟ್ರಿಯಾ, ಲಕ್ಸಂಬರ್ಗ್, ಪೋರ್ಚುಗಲ್ ಮತ್ತು ಜಪಾನ್
- **ಭಾರತದ ನೆರೆ ರಾಷ್ಟ್ರಗಳು:** ಶ್ರೀಲಂಕಾ (31), ಭೂತಾನ್ (69) ಮತ್ತು ನೇಪಾಳ (77).

**ಭಾರತಕ್ಕೆ ಸಂಬಂಧಿಸಿದಂತೆ:**

- ವಿಶ್ವದ ಯುವಜನ ಜನಸಂಖ್ಯೆ ಪೈಕಿ ಭಾರತ ಶೇ 20ರಷ್ಟು ಹೊಂದಿದೆ. ದೇಶದಲ್ಲಿ 15 ರಿಂದ 30 ವರ್ಷದೊಳಗಿನ ಯುವಜನತೆ ಸಂಖ್ಯೆ 345 ಮಿಲಿಯನ್.
- ಭಾರತದ ಒಟ್ಟಾರೆ ಜನಸಂಖ್ಯೆಯಲ್ಲಿ ಯುವಜನತೆ ಪಾಲು ಶೇ 27% ರಷ್ಟಿದೆ.
- 2016 ಯುವಜನ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ ಕಳಪೆ ಸಾಧನೆ ಮಾಡಿದೆ ಯಾದರು ಕಳೆದ ಐದು ವರ್ಷಗಳಿಗೆ ಹೋಲಿಸಿದರೆ ಶೇ 11% ಏರಿಕೆಯಾಗಿದೆ.
- ದೇಶದ ಯುವಜನತೆ ಅಭಿವೃದ್ಧಿಯು ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಹಿಂದಿ ಉಳಿದಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

www.karunaduexams.com

## ರಾಜ್ಯ ಸರ್ಕಾರದ-ಯೋಜನೆಗಳು

**ಸೀಮೆಎಣ್ಣೆ ಯೋಜನೆಯಡಿ ನೇರ ನಗದು ವರ್ಗಾವಣೆ ಜಾರಿಗೆ ತಂದ ಮೊದಲ ರಾಜ್ಯ ಜಾರ್ಖಂಡ್**

ಸೀಮೆಎಣ್ಣೆ ಯೋಜನೆಯಡಿ ನೇರ ನಗದು ವರ್ಗಾವಣೆಯನ್ನು ಜಾರಿಗೆ ತಂದ ದೇಶದ ಮೊದಲ ರಾಜ್ಯವೆಂಬ ಖ್ಯಾತಿಗೆ ಜಾರ್ಖಂಡ್ ಪಾತ್ರವಾಗಿದೆ. ಜಾರ್ಖಂಡ್ ನ ಛತ್ರ, ಹಜಾರಿಬಾಗ್, ಖುಂತಿ ಮತ್ತು ಜಮ್ತರ ನಾಲ್ಕು ಜಿಲ್ಲೆಗಳಲ್ಲಿ ನೇರ ನಗದು ವರ್ಗಾವಣೆ ಯೋಜನೆಯನ್ನು ಅಕ್ಟೋಬರ್ 1, 2017 ರಿಂದ ಜಾರಿಗೊಳಿಸಲಾಗಿದೆ.

- ಈ ಯೋಜನೆಯಡಿ ಸೀಮೆಎಣ್ಣೆಯನ್ನು ಸಬ್ಸಿಡಿ ರಹಿತ ದರದಲ್ಲಿ ಮಾರಲಾಗುವುದು. ಸಬ್ಸಿಡಿ ಹಣವನ್ನು ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು.
- ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ LPG ಸಬ್ಸಿಡಿಗೆ ನೇರ ನಗದು ವರ್ಗಾವಣೆ ಯೋಜನೆ ಜಾರಿಗೆ ತಂದಿರುವ ಮಾದರಿಯಲ್ಲೇ ಇದನ್ನು ಜಾರಿಗೊಳಿಸಲಾಗಿದೆ.
- ಸಬ್ಸಿಡಿ ಹಣ ಯಾವುದೇ ಸೋರಿಕೆ ಇಲ್ಲದೆ ನೇರವಾಗಿ ಗ್ರಾಹಕರ ಕೈಸೇರುವಂತೆ ಮಾಡುವುದು ಇದರ ಉದ್ದೇಶ.
- ಅಲ್ಲದೇ ಕಪ್ಪು ಮಾರುಕಟ್ಟೆಯಲ್ಲಿ ಸೀಮೆಎಣ್ಣೆ ಮಾರಾಟ, ಕಲಬೆರಕೆ ಮಾಡುವುದನ್ನು ತಡೆಯಲು ಸಹಕಾರಿಯಾಗಲಿದೆ.

**ರಾಜ್ಯದಲ್ಲಿ ಪ್ರತ್ಯೇಕ ಅಡಿಕೆ ಮಂಡಳಿ ರಚನೆಗೆ ಶಿಫಾರಸ್ಸು**

ರಾಜ್ಯದ ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಪ್ರತ್ಯೇಕ ಅಡಿಕೆ ಮಂಡಳಿಯನ್ನು ರಚಿಸುವಂತೆ ಡಾ.ಡಿ.ಎಲ್ ಮಹೇಶ್ವರ್ ಸಮಿತಿ ಶಿಫಾರಸ್ಸು ಮಾಡಿದೆ. ಇದರ ಜೊತೆಗೆ ಈರುಳ್ಳಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಈರುಳ್ಳಿ ಮಾರುಕಟ್ಟೆ ಸ್ಥಿರೀಕರಣದ ವ್ಯವಸ್ಥೆ ಮಾಡುವಂತೆ ಸಹ ಸಮಿತಿ ಶಿಫಾರಸ್ಸು ಮಾಡಿದೆ.

**ಸಮಿತಿಯ ಬಗ್ಗೆ:**

- ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾದ ಅಡಿಕೆಯು ಧಾರಣೆ ಕುಸಿತ, ವಿವಿಧ ರೋಗಗಳಿಗೆ ತುತ್ತಾಗುವುದು ಸೇರಿದಂತೆ ಹಲವಾರು ಸಮಸ್ಯೆಗಳಿಂದ ಬೆಳೆಗಾರರಿಗೆ ನಷ್ಟ ಉಂಟಾಗುತ್ತಿದ್ದು, ಇದಕ್ಕೆ ಸ್ಪಂದಿಸಲು ಪ್ರತ್ಯೇಕ ಮಂಡಳಿ ರಚನೆ ಮಾಡುವಂತೆ ಪ್ರಕಾಶ್ ಕಮ್ಮರಡಿ ನೇತೃತ್ವದ ರಾಜ್ಯ ಕೃಷಿ ಬೆಲೆ ಆಯೋಗ ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಿತ್ತು. ಈ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರ ತಜ್ಞರ ಸಮಿತಿಯನ್ನು ನೇಮಕ ಮಾಡಿತ್ತು. ಬಾಗಲಕೋಟೆಯಲ್ಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ ಡಾ| ಡಿ.ಎಲ್.ಮಹೇಶ್ವರ್ ಸಮಿತಿಗೆ ಅಧ್ಯಕ್ಷರಾಗಿದ್ದರು.

**ಪ್ರಮುಖ ಶಿಫಾರಸ್ಸುಗಳು:**

- ಅಡಕೆ ಬೆಳೆಗಾರರ ಹಿತ ಕಾಪಾಡಲು ಅಡಿಕೆ ಆಮದು ನಿಷೇಧಿಸಬೇಕು.
- ಅಡಕೆ ಬೆಳೆಗಾರರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸಲು ರಾಜ್ಯ ಸರಕಾರವು ಪ್ರತ್ಯೇಕ ಮಂಡಳಿಯೊಂದನ್ನು ರಚಿಸುವುದು
- ಅಡಕೆ ಮತ್ತು ಈರುಳ್ಳಿ ಬೆಳೆಯುವ ರೈತರು ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಸಮಸ್ಯೆ ಸೇರಿದಂತೆ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರೈತರಿಗೆ ಸೂಕ್ತ ರಕ್ಷಣೆ ನೀಡಬೇಕು ಮತ್ತು ಈರುಳ್ಳಿ ಹಾಗೂ ಅಡಕೆ ಬೆಳೆಯ ಆರ್ಥಿಕ ವ್ಯವಸ್ಥೆಯನ್ನು ಸದೃಢಗೊಳಿಸಬೇಕು.
- ಈರುಳ್ಳಿ ಮಾರುಕಟ್ಟೆ ಸ್ಥಿರೀಕರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ವರದಿಯಲ್ಲಿ ಹೇಳಲಾಗಿದೆ.

www.karunaduexams.com

## ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ಹೊಸ ಸಮಿತಿ ರಚನೆ

ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಮಾಡಲು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಅಧ್ಯಕ್ಷತೆಯಲ್ಲಿ ವಿವಿಧ ಕ್ಷೇತ್ರಗಳಿಂದ 13 ಸದಸ್ಯರ ಹೊಸ ಸಮಿತಯನ್ನು ರಚಿಸಲಾಗಿದೆ. ಕಳೆದ ಮೂರು ವರ್ಷಗಳಿಂದ ವಿಮರ್ಶಕ ಡಾ.ಕೆ.ಮರುಳಸಿದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿ ಪ್ರಶಸ್ತಿಗೆ ಆಯ್ಕೆಮಾಡುವ ಜವಬ್ದಾರಿಯನ್ನು ಹೊತ್ತಿತ್ತು.

**ಸಮಿತಿಯ ಸದಸ್ಯರು**:

ಜಾನಪದ ಕ್ಷೇತ್ರದಿಂದ ಡಾ.ಅಂಬಳಿಕೆ ಹಿರಿಯಣ್ಣ, ಕೃಷಿ ಕ್ಷೇತ್ರದಿಂದ ಡಾ.ನಾರಾಯಣಗೌಡ, ಸಾಹಿತ್ಯದಲ್ಲಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಮೀನಾಕ್ಷಿ ಬಾಳಿ, ಕೆ.ಬಿ.ಸಿದ್ದಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಸರಜೂ ಕಾಟ್ಕರ್, ರಹಮತ್ ತರೀಕೆರೆ, ನೃತ್ಯದಿಂದ ವಸುಂಧರಾ ದೊರೆಸ್ವಾಮಿ, ಮಾಧ್ಯಮದಿಂದ ನಾಗೇಶ ಹೆಗಡೆ, ಚಿತ್ರಕಲೆಯಿಂದ ಪಿ.ಎಸ್.ಕಡೇಮನಿ, ರಂಗಭೂಮಿಯಿಂದ ನಾ.ದಾಮೋದರ ಶೆಟ್ಟಿ, ಸಂಗೀತದಿಂದ ಡಾ.ಜಯದೇವಿ ಜಂಗಮಶೆಟ್ಟಿ ಅವರನ್ನು ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

**ಸಮಿತಿಯ ಕಾರ್ಯ**:

ಹೊಸ ಸಮಿತಿಯು ರಾಜ್ಯೋತ್ಸವ ಪ್ರಶಸ್ತಿಗೆ ಬಂದಿರುವ ಅರ್ಜಿಗಳಲ್ಲಿ ಹಾಗೂ ಸ್ವಯಂಪ್ರೇರಿತರಾಗಿ ಅರ್ಹರನ್ನು ಆಯ್ಕೆ ಮಾಡಲಿದೆ. ಕರ್ನಾಟಕ ಏಕೀಕರಣವಾಗಿ 61 ವರ್ಷವಾದ ಹಿನ್ನೆಲೆಯಲ್ಲಿ 61 ಪ್ರಶಸ್ತಿ ನೀಡಲಾಗುವುದು. ಹೊಸ ಸಮಿತಿಯು 1:2 ಅನುಪಾತದಲ್ಲಿ ಅಂದರೆ 122 ಹೆಸರುಗಳನ್ನು ಆಯ್ಕೆ ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಮಿತಿಗೆ ರವಾನಿಸಲಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದ ಸಮಿತಿಯಲ್ಲಿ 6 ಸಚಿವರು, 3 ಪ್ರಾಧಿಕಾರ, 7 ಅಕಾಡೆಮಿಗಳು, ಕಸಾಪ ಅಧ್ಯಕ್ಷರು ಸೇರಿ 20 ಸದಸ್ಯರಿದ್ದು, ಈ ಸಮಿತಿ ಅಂತಿಮ 61 ಸಾಧಕರನ್ನು ಆಯ್ಕೆ ಮಾಡಲಿದೆ. ನ.1ರಂದು ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ಸಿಎಂ ಪ್ರದಾನ ಮಾಡಲಿದ್ದಾರೆ.

**ಹಿನ್ನಲೆ:**

- ಕಳೆದ ಮೂರು ವರ್ಷಗಳಿಂದ ವಿಮರ್ಶಕ ಡಾ.ಕೆ. ಮರುಳಸಿದ್ದಪ್ಪ ಅಧ್ಯಕ್ಷತೆಯಲ್ಲಿ ರಾಜ್ಯೋತ್ಸವ ಸಮಿತಿಗೆ ಆಯ್ಕೆಮಾಡಲಾಗುತ್ತಿತ್ತು. ಆದರೆ ಪ್ರತಿವರ್ಷಕ್ಕೊಮ್ಮೆ ಆಯ್ಕೆ ಸಮಿತಿಯನ್ನು ಬದಲಾಯಿಸುವಂತೆ ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಆದ್ದರಿಂದ ಹೊಸ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿದ್ದು, ಸಚಿವರನ್ನು ಹೊರತುಪಡಿಸಿ 13 ಸದಸ್ಯರ ಪೈಕಿ 6 ಸದಸ್ಯರು ಸಾಹಿತ್ಯ ಕ್ಷೇತ್ರಕ್ಕೆ ಸೇರಿದವರಾಗಿದ್ದಾರೆ.

## ಮತದಾರರ ನೋಂದಣಿಗೆ ಫೇಸ್ ಬುಕ್ ಜೊತೆ ಕೈಜೋಡಿಸಿದ ಚುನಾವಣಾ ಆಯೋಗ

ಯುವ ಮತದಾರರನ್ನು ಮತದಾನಕ್ಕೆ ನೋಂದಾಯಿಸುವ ಸಲುವಾಗಿ ಭಾರತ ಚುನಾವಣಾ ಆಯೋಗವು ಸಾಮಾಜಿಕ ತಾಣ ಫೇಸ್ ಬುಕ್ ನೊಂದಿಗೆ ಕೈಜೋಡಿಸಿದೆ. 2017 ರಲ್ಲಿ ಐದು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆ ನಡೆಯಲ್ಲಿದ್ದು, ಈ ಐದು ರಾಜ್ಯಗಳ ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಚುನಾವಣಾ ಆಯೋಗ ಫೇಸ್ ಬುಕ್ ಮೊರೆ ಹೋಗಿದೆ.

- ಉತ್ತರ ಪ್ರದೇಶ, ಪಂಜಾಬ್, ಗೋವಾ, ಮಣಿಪುರ ಮತ್ತು ಉತ್ತರಖಂಡ್ ನಲ್ಲಿ ವಿಧಾನ ಸಭಾ ಚುನಾವಣೆ 2017 ರಲ್ಲಿ ನಡೆಯಲಿದೆ. ಈ ವಿನೂತನ ಕಾರ್ಯಕ್ರಮದ ಮೂಲಕ ಯುವಕರಲ್ಲಿ ಮತದಾನದ ಹಕ್ಕನ್ನು ಚಲಾಯಿಸಿ ಪ್ರಜಾಪ್ರಭುತ್ವ ಸರ್ಕಾರದಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೆಪಿಸಲಾಗುವುದು.

- 18 ವರ್ಷ ತುಂಬಿದ ಮತ್ತು ಮೇಲ್ಪಟ್ಟ ಎಲ್ಲಾ ವಯಸ್ಕರನ್ನು ನ್ಯಾಷನಲ್ ವೋಟರ್ಸ್ ಸರ್ವೀಸ್ಸ್ ಪೋರ್ಟಲ್ ಗೆ ಫೇಸ್ ಬುಕ್ ಬಳಸಿ ಲಿಂಕ್ ಮಾಡಲಾಗುವುದು.
- ಈ ಐದು ರಾಜ್ಯಗಳಲ್ಲಿ ಫೇಸ್ ಬುಕ್ ಬಳಸುವವರಿಗೆ ಮತದಾನ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳುವಂತೆ ಸಂದೇಶವನ್ನು ರವಾನಿಸಲಾಗುವುದು.
- ಈ ಸಂದೇಶದಲ್ಲಿ "ರಿಜಿಸ್ಟರ್ ನೌ" ಲಿಂಕ್ ಮೇಲೆ ಕ್ಲಿಕ್ ಮಾಡಿದರೆ ಬಳಕೆದಾರರು ನೇರವಾಗಿ ನ್ಯಾಷನಲ್ ವೋಟರ್ಸ್ ಸರ್ವೀಸ್ಸ್ ಪೋರ್ಟಲ್ ಗೆ ತೆರೆದುಕೊಳ್ಳಲಿದೆ. ಅಲ್ಲಿ ಮತದಾರರು ಸುಲಭವಾಗಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.

**ಪಕ್ಷಗಳ ಚಿಹ್ನೆ ಪ್ರಚಾರಕ್ಕೆ ಸಾರ್ವಜನಿಕ ಹಣ ಬಳಕೆ ಮಾಡುವಂತಿಲ್ಲ: ಚುನಾವಣಾ ಆಯೋಗ**

ರಾಜಕೀಯ ಪಕ್ಷಗಳ ಮತ್ತು ಚುನಾವಣಾ ಆಯೋಗ ಪಕ್ಷಕ್ಕೆ ಮಂಜೂರು ಮಾಡಿದ ಪಕ್ಷದ ಚಿಹ್ನೆಯ ಪ್ರಚಾರಕ್ಕಾಗಿ ಸಾರ್ವಜನಿಕ ಹಣ, ಸ್ಥಳ ಅಥವಾ ಸರ್ಕಾರದ ಕಾರ್ಯತಂತ್ರಗಳನ್ನು ಯಾವುದೇ ರಾಜಕೀಯ ಪಕ್ಷಗಳು ಬಳಸಿಕೊಳ್ಳಬಾರದು ಎಂದು ಆಯೋಗ ನಿರ್ದೇಶನ ನೀಡಿದೆ. ಜುಲೈ 2016 ರಲ್ಲಿ ದೆಹಲಿ ಹೈಕೋರ್ಟ್ ನೀಡಿದ ಆದೇಶದ ಮೇರೆಗೆ ಚುನಾವಣಾ ಆಯೋಗ ಈ ನಿರ್ಧಾರವನ್ನು ಕೈಗೊಂಡಿದೆ.

**ಪ್ರಮುಖಾಂಶಗಳು:**

- ಯಾವುದೇ ರಾಜಕೀಯ ಪಕ್ಷಗಳ ಮ್ತುತು ಅವುಗಳ ಚುನಾವಣಾ ಚಿಹ್ನೆಗಳ ಪ್ರಚಾರಕ್ಕಾಗಿ ಸಾರ್ವಜನಿಕ ಸ್ಥಳ, ಹಣವನ್ನು ಬಳಸುವುದು ಉಚಿತ ಮತ್ತು ನ್ಯಾಯಯುತ ಚುನಾವಣೆ ಪರಿಕಲ್ಪನೆಗೆ ವಿರುದ್ಧವಾಗಿರುತ್ತದೆ.
- ಇದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಚುನಾವಣೆ ಗುರುತು(ಮೀಸಲಾತಿ ಮತ್ತು ಹಂಚುವಿಕೆ) ಆದೇಶ 1968ರ 16ಎಯಡಿ ಕಾನೂನು ಉಲ್ಲಂಘನೆಯಾಗುತ್ತದೆ.
- 1968ರ 16ಎ ರಡಿ ಯಾವುದೇ ರಾಜಕೀಯ ಪಕ್ಷ ಚುನಾವಣಾ ಆಯೋಗ ಹೊರಡಿಸಿದ ಮಾದರಿ ನೀತಿ ಸಂಹಿತಿಯನ್ನು ಪಾಲಿಸಲು ವಿಫಲವಾದರೆ ಅಂತಹ ಪಕ್ಷವನ್ನು ಅಮಾನತು ಮಾಡಬಹುದು ಅಥವಾ ಪಕ್ಷಕ್ಕೆ ನೀಡಿರುವ ಸ್ಥಾನಮಾನವನ್ನು ಹಿಂಪಡೆಯಬಹುದು.

**ಹಿನ್ನಲೆ**:

ಉತ್ತರ ಪ್ರದೇಶದಲ್ಲಿ ಮಾಯಾವತಿ ಸರ್ಕಾರದ ಅವಧಿಯಲ್ಲಿ ಬಹುಜನ ಸಮಾಜ ಪಕ್ಷದ ಚಿಹ್ನೆಯಾದ ಆನೆಯ ಮೂರ್ತಿಯನ್ನು ರಾಜ್ಯಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪಿಸಿದ್ದನ್ನು ಪ್ರಶ್ನಿಸಿ ಚುನಾವಣಾ ತಂಡವೊಂದು ಸಲ್ಲಿಸಿದ್ದ ಅರ್ಜಿಯನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ವಿಚಾರ ನಡೆಸಿದ ದೆಹಲಿ ಹೈಕೋರ್ಟ್ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಚಿಹ್ನೆಗಳ ಪ್ರಚಾರಕ್ಕಾಗಿ ಸಾರ್ವಜನಿಕ ಸ್ಥಳ ಮತ್ತು ಹಣವನ್ನು ಬಳಸಿಕೊಳ್ಳುವುದು ಉಚಿತ ಮತ್ತು ನ್ಯಾಯಯುತ ಚುನಾವಣೆ ಪರಿಕಲ್ಪನೆಗೆ ವಿರುದ್ಧವಾಗಿರುತ್ತದೆ ಎಂದು ತೀರ್ಪು ನೀಡಿ ಈ ಬಗ್ಗೆ ಕ್ರಮಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತ್ತು.

**2015ನೇ ಸಾಲಿನ ಕರ್ನಾಟಕ ಕ್ರೀಡಾ ರತ್ನ ಮತ್ತು ಏಕಲವ್ಯ ಪ್ರಶಸ್ತಿ ಪ್ರಕಟ**

**ಕರ್ನಾಟಕ ರಾಜ್ಯ ಸರ್ಕಾರ** 2015ನೇ ಸಾಲಿನ 'ಕ್ರೀಡಾ ರತ್ನ' ಪ್ರಶಸ್ತಿಗೆ ಭಾಜನರಾಗಿರುವ ಕ್ರಿಡಾಪಟುಗಳ ಪ್ರಕಟಿಸಿದೆ. ಈ ಬಾರಿ ರಾಜ್ಯದ 16 ಕ್ರೀಡಾ ಪಟುಗಳಿಗೆ 2015ನೇ ಸಾಲಿನ 'ಏಕಲವ್ಯ' ಪ್ರಶಸ್ತಿಯನ್ನು ನೀಡಲಾಗುತ್ತಿದೆ.

**ಏಕಲವ್ಯ ಪುರಸ್ಕೃತರು**

ದಾಮಿನಿ ಕೆ.ಗೌಡ (ಈಜು) - ಬೆಂಗಳೂರು, ವಿದ್ಯಾ ಪಿಳ್ಳೈ(ಬಿಲಿಯರ್ಡ್ಸ್) - ಬೆಂಗಳೂರು, ಪವನ್ ಶೆಟ್ಟಿ (ಬಾಡಿಬಿಲ್ಡಿಂಗ್)- ಬೆಂಗಳೂರು, ನಿತಿನ್ ತಿಮ್ಮಯ್ಯ (ಹಾಕಿ)- ಬೆಂಗಳೂರು, ರಾಜಗುರು ಎಸ್.(ಕಬಡ್ಡಿ- ಬೆಂಗಳೂರು, ಕೃಷ್ಣ ಎ.ನಾಯ್ಕೋಡಿ( ಸೈಕ್ಲಿಂಗ್)- ವಿಜಯಪುರ, ಅರವಿಂದ ಎ.(ಬಾಸ್ಕೆಟ್‌ಬಾಲ್)- ಬೆಂಗಳೂರು, ಅರ್ಪಿತಾ ಎಂ.(ಅಥ್ಲೆಟಿಕ್ಸ್- ಶಿವಮೊಗ್ಗ, ಮಹಮದ್ ರಫಿಕ್ ಹೋಳಿ (ಕುಸ್ತಿ)- ಧಾರವಾಡ, ಮೇಘನಾ ಎಂ. ಸಜ್ಜನರ್(ಶೂಟಿಂಗ್)- ಬೆಂಗಳೂರು, ಧೃತಿ ತಾತಾಚಾರ್ ವೇಣುಗೋಪಾಲ್ (ಟೆನಿಸ್) - ಮೈಸೂರು, ಅನುಪ್ ಡಿಕೋಸ್ಟಾ (ವಾಲಿಬಾಲ್)- ಉಡುಪಿ, ಜಿ.ಎಂ. ನಿಶ್ಚಿತ(ಬ್ಯಾಡ್ಮಿಂಟನ್)- ಬೆಂಗಳೂರು, ಶಾವದ್ ಜೆ.ಎಂ.(ಪ್ಯಾರಾಥ್ಲೆಟಿಕ್ಸ್)- ಬೆಂಗಳೂರು, ಉಮೇಶ್ ಆರ್.ಕಾಡೆ (ಪ್ಯಾರಾ ಈಜು)- ಬೆಳಗಾವಿ, ಕಂಚನ್ ಮುನ್ನೂರಕರ್(ವೇಟ್ ಲಿಫ್ಟಿಂಗ್)- ಬೆಳಗಾವಿ

**ಕ್ರೀಡಾರತ್ನ ಪುರಸ್ಕೃತರು**

ಡಿ.ಎನ್. ರುದ್ರಸ್ವಾಮಿ(ಯೋಗ)- ಬೆಂಗಳೂರು, ಪೂರ್ಣಿಮಾ ಪಿ.(ಥ್ರೋಬಾಲ್)- ದ.ಕ, ಅಮೋಘ್ ಯು. ಚಚಡಿ(ಆಟ್ಯಾ-ಪಾಟ್ಯಾ)- ಬೆಳಗಾವಿ, ರಂಜಿತ ಎಂ.ಪಿ.(ಬಾಲ್‌ಬಾಡ್ಮಿಂಟನ್)- ಹಾಸನ, ಪ್ರದೀಪ್ ಕೆ.ಸಿ. (ಖೋ ಖೋ), ಸುಮಿತ ಯು.ಎಂ. (ಕಬಡ್ಡಿ), ಡಾ. ಜೀವಂಧರ್ ಬಲ್ಲಾಳ್ (ಕಂಬಳ), ಆನಂದ್ ಇರ್ವತ್ತೂರು (ಕಂಬಳ), ಆನಂದ್ ಎಲ್. (ಕುಸ್ತಿ), ಬೋಶಪ್ಪ ವಿಠ್ಠಪ್ಪ ಗುಳಬಾಳ (ಗುಂಡು ಎತ್ತುವುದು).

**ಏಕಲವ್ಯ ಪ್ರಶಸ್ತಿ**:

ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿಯನ್ನು 1992ರಿಂದ ರಾಜ್ಯದ ಕ್ರೀಡಾಸಾಧಕರಿಗೆ ನೀಡಿ ಗೌರವಿಸಲಾಗುತ್ತಿದೆ. ಈ ಪ್ರಶಸ್ತಿ 2 ಲಕ್ಷ ರು. ನಗದು ಹಾಗೂ ಏಕಲವ್ಯನ ಕಂಚಿನ ಮೂರ್ತಿಯನ್ನು ಒಳಗೊಂಡಿದೆ.

**ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ**:

ಗ್ರಾಮೀಣ ಕ್ರೀಡೆ ಮತ್ತು ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು 2014-15ರಲ್ಲಿ ಹೊಸ ಯೋಜನೆಯಾಗಿ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಸ್ಥಾಪಿಸಲಾಗಿದೆ. ಪ್ರಶಸ್ತಿಯು ರೂ 1 ಲಕ್ಷ ನಗದು ಒಳಗೊಂಡಿದೆ.

**ಜೀವಮಾನ ಸಾಧನೆ ಪ್ರಶಸ್ತಿ**:

ಬೆಂಗಳೂರಿನ ಈಜು ತರಬೇತುದಾರ ಜಾನ್ ಕ್ರಿಸ್ಟೋಫರ್ ನಿರ್ಮಲ್ ಕುಮಾರ್ ಮತ್ತು ದಾವಣಗೆರೆಯ ಕುಸ್ತಿ ತರಬೇತುದಾರ ಶಿವಾನಂದ ಆರ್ ಅವರು ಜೀವಮಾನದ ಸಾಧನೆ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇದು 1.50 ಲಕ್ಷ ರು. ನಗದು ಹೊಂದಿದೆ.

**ಹೈದ್ರಾಬಾದ್-ಕರ್ನಾಟಕ ಉನ್ನತ ಶಿಕ್ಷಣ ಪ್ರಮಾಣ ಹೆಚ್ಚಿಸಲು ಸಮಿತಿ ರಚಿಸಿದ ರಾಜ್ಯ ಸರ್ಕಾರ**

ಹೈದ್ರಾಬಾದ್ ಕರ್ನಾಟಕದ 6 ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಪ್ರಮಾಣ ಹೆಚ್ಚಿಸಲು ರಾಜ್ಯ ಸರ್ಕಾರ ಸಮಿತಿಯನ್ನು ರಚಿಸಿದೆ. ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಎಸ್. ಸುಭಾಷ್ ಅವರು ಸಮಿತಿಯ ನೇತೃತ್ವವನ್ನು ವಹಿಸಿದ್ದಾರೆ.

**ಸಮಿತಿ ಏಕೆ:**

ಪಿಯು ನಂತರ ಪದವಿ ಕೋರ್ಸ್‌ಗಳಿಗೆ ಸೇರುವ ವಿದ್ಯಾರ್ಥಿಗಳ ಪ್ರಮಾಣ ದೇಶದಲ್ಲಿ ಶೇ 19ರಷ್ಟು ಇದ್ದರೆ, ರಾಜ್ಯದಲ್ಲಿ ಶೇ 26 ಇದೆ. ಆದರೆ, ಹೈದರಾಬಾದ್-ಕರ್ನಾಟಕದಲ್ಲಿ ರಾಷ್ಟ್ರದ ಸರಾಸರಿಗಿಂತಲೂ ಕಡಿಮೆ ಇದೆ. ಅಂದರೆ, ಕಲಬುರ್ಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವವರ ಪ್ರಮಾಣ ಒಟ್ಟಾರೆ ಶೇ 10ರಷ್ಟು ಮಾತ್ರ ಇದೆ. ಈ ಪ್ರಮಾಣ ಹೆಚ್ಚಿಸಲು ಇಲ್ಲಿನ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹ, ಉಪನ್ಯಾಸಕರಿಗೆ ತರಬೇತಿ, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಒದಗಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಸಮಿತಿ ಶಿಫಾರಸು ಮಾಡಲಿದೆ. ಹಿಂದೆಯೇ ಗುಲ್ಬರ್ಗಾ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ.ಬಿ.ಜಿ. ಮೂಲಿಮನಿ ಅವರ ಸಮಿತಿ

ಈಗಾಗಲೇ ಕೆಲವು ಶಿಫಾರಸುಗಳನ್ನು ಸಲ್ಲಿಸಿದೆ. ಈ ಶಿಫಾರಸುಗಳನ್ನು ಪರಿಶೀಲಿಸಿ ಪೂರ್ಣ ಪ್ರಮಾಣದ ವರದಿ ಸಲ್ಲಿಸಲು ಈಗ ಸುಭಾಷ್ ನೇತೃತ್ವದ ಸಮಿತಿ ರಚಿಸಲಾಗಿದೆ.

**ಸಮಿತಿಯ ಸದಸ್ಯರು:**

ಹೈದ್ರಾಬಾದ್-ಕರ್ನಾಟಕದ ಗುಲ್ಬರ್ಗಾ ವಿವಿ, ಕನ್ನಡ ವಿವಿ, ರಾಯಚೂರು ಕೃಷಿ, ತೋಟಗಾರಿಕೆ ವಿವಿ, ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿವಿ. ಕುಲಪತಿಗಳು ಮತ್ತು ವಿಶೇಷಾಧಿಕಾರಿಗಳು ಸಮಿತಿಯ ಇತರೆ ಸದಸ್ಯರು.

**ಪ್ರೊ.ಬಿ.ಜಿ. ಮೂಲಿಮನಿ ಸಮಿತಿ ಶಿಫಾರಸಿನ ಕೆಲ ಅಂಶಗಳು**

- ಸರ್ಕಾರಿ ಶಾಲಾ-ಕಾಲೇಜುಗಳಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವುದು.
- ಉತ್ತಮ ಶಿಕ್ಷಣ ನೀಡುವ ಖಾಸಗಿ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು ಮತ್ತು 371 (ಜೆ) ಮೀಸಲಾತಿ ಅನ್ವಯ ಪ್ರವೇಶಾವಕಾಶ ಕಲ್ಪಿಸುವುದು.
- ಉನ್ನತ ಶಿಕ್ಷಣಕ್ಕೆ ಬರುವ ಬಡತನ ರೇಖೆಗಿಂತ ಕೆಳಗೆ ಇರುವ ವಿದ್ಯಾರ್ಥಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡುವುದು
- ಪಿಯು, ಪದವಿ, ವಿಶ್ವವಿದ್ಯಾಲಯಗಳಲ್ಲಿ ಕೌನ್ಸೆಲಿಂಗ್ ಕೇಂದ್ರಗಳನ್ನು ಆರಂಭಿಸಿ ಉದ್ಯೋಗಾಧಾರಿತ ಕೋರ್ಸ್‌ಗಳ ಬಗ್ಗೆ ಮಾಹಿತಿ ಕೊಡುವುದು.
- ಆತಿಥ್ಯ, ಈವೆಂಟ್ ಮ್ಯಾನೇಜ್‌ಮೆಂಟ್, ಅನಿಮೇಷನ್ ಸೇರಿದಂತೆ ಉದ್ಯೋಗ ಸೃಷ್ಟಿಸಿರುವ ಹೊಸ ಕೋರ್ಸ್‌ಗಳನ್ನು ಹೆಚ್ಚೆಚ್ಚು ಆರಂಭಿಸುವುದು.
- ಕೈಗಾರಿಕೆಗಳು ಮತ್ತು ಕಾಲೇಜುಗಳ ಮಧ್ಯೆ ಸಹಭಾಗಿತ್ವ ಸಾಧಿಸುವುದು.
- ಎಸ್ಸೆಸ್ಸೆಲ್ಸಿ/ಪಿಯುಸಿ ಉತ್ತೀರ್ಣ ಮತ್ತು ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿಗೆ ವ್ಯವಸ್ಥೆ ಮಾಡುವುದು.

**ಪೌಷ್ಟಿಕಾಂಶಯುಕ್ತ ಆಹಾರ ನೀಡಲು ಅಕ್ಷರ ಪ್ರತಿಷ್ಠಾನ ಹಾಗೂ ಅಕ್ಷಯ ಪಾತ್ರ ಸಂಸ್ಥೆಗಳ ಜೊತೆ ರಾಜ್ಯ ಸರ್ಕಾರ ಒಪ್ಪಂದ**

ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಹೆಚ್ಚಳ ಹಾಗೂ ಪೌಷ್ಟಿಕಾಂಶಯುಕ್ತ ಆಹಾರ ನೀಡುವ ಸಲುವಾಗಿ ಅಕ್ಷರ ಪ್ರತಿಷ್ಠಾನ ಹಾಗೂ ಅಕ್ಷಯ ಪಾತ್ರ ಸಂಸ್ಥೆಗಳ ಜೊತೆ ರಾಜ್ಯ ಸರ್ಕಾರ ಒಪ್ಪಂದಕ್ಕೆ ಸಹಿಹಾಕಿದೆ. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ತನ್ವೀರ್ ಸೇಠ್ ಈ ವಿಷಯವನ್ನು ತಿಳಿಸಿದ್ದಾರೆ.

**ಪ್ರಮುಖಾಂಶಗಳು:**

- ಗಣಿತ, ಇಂಗ್ಲಿಷ್ ಹಾಗೂ ವಿಜ್ಞಾನ ವಿಷಯಗಳನ್ನು ಪರಿಣಾಮಕಾರಿಯಾಗಿ ಬೋಸುವ ಸಲುವಾಗಿ ಅಕ್ಷರ ಪ್ರತಿಷ್ಠಾನದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಪ್ರತಿ ಶಾಲೆಗೆ ಗಣಿತ ಕಿಟ್ ಪೂರೈಕೆ ಹಾಗೂ ಕಿಟ್ ಬಳಕೆ ಕುರಿತು ಶಿಕ್ಷಕರಿಗೆ ತರಬೇತಿ ನೀಡಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.
- ಮೊದಲ ಹಂತವಾಗಿ ಹೈದರಾಬಾದ್ ಕರ್ನಾಟಕ ಭಾಗದ ಬೀದರ್, ಕಲಬುರಗಿ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ಯಾದಗಿರಿಯಲ್ಲಿರುವ 7515 ಶಾಲೆಗಳಲ್ಲಿ 3ಲಕ್ಷ ಮಕ್ಕಳಿಗೆ ಅನುಷ್ಠಾನಗೊಳಿಸಲಾಗುತ್ತಿದೆ.
- ಎರಡನೆ ಹಂತವಾಗಿ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಚಿತ್ರದುರ್ಗ, ಗದಗ ಹಾಗೂ ಧಾರವಾಡದ 4149 ಶಾಲೆಗಳ 1.29ಲಕ್ಷ ಮಕ್ಕಳಿಗೆ ಮೂರು ವರ್ಷದ ಅವಧಿಗೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

- ಅಕ್ಷಯ ಪಾತ್ರ ಪ್ರತಿಷ್ಠಾನದೊಂದಿಗೆ ಮಧ್ಯಾಹ್ನದ ಉಪಾಹಾರ ಯೋಜನೆಯಲ್ಲಿ ಸಾರವರ್ಧಿತ ಅಕ್ಕಿ ಬಳಕೆ ಮಾಡುವ ಹೊಸ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಪ್ರಾರಂಭಿಕ ಹಂತವಾಗಿ ಬೆಂಗಳೂರು, ಹುಬ್ಬಳ್ಳಿ ಹಾಗೂ ಧಾರವಾಡಗಳಲ್ಲಿ 4.5ಲಕ್ಷ ವಿದ್ಯಾರ್ಥಿಗಳು ಈ ಯೋಜನೆಯ ಉಪಯೋಗ ಲಭಿಸಲಿದೆ.

**ಆಂಧ್ರಪ್ರದೇಶದ ನೀರು ಹಂಚಿಕೊಳ್ಳಿ: ಕೃಷ್ಣಾ ನ್ಯಾಯಾಧಿಕರಣ ಮಹತ್ವದ ತೀರ್ಪು**

ಕೃಷ್ಣಾ_ನ್ಯಾಯಾಧಿಕರಣದ ತೀರ್ಪು ಹೊರಬಿದಿದ್ದು, ಆಂಧ್ರಪ್ರದೇಶದ ನೀರನ್ನೇ ಹಂಚಿಕೊಳ್ಳುವಂತೆ ತೆಲಂಗಣಕ್ಕೆ ನ್ಯಾಯಮಂಡಳಿ ತೀರ್ಪು ನೀಡಿದೆ. ಈ ತೀರ್ಪಿನಿಂದ ತೆಲಂಗಣಕ್ಕೆ ಹಿನ್ನಡೆ ಉಂಟಾಗಿದೆ.

**ತೀರ್ಪಿನ ಪ್ರಮುಖಾಂಶಗಳು**:

- ತೆಲಂಗಾಣ ರಾಜ್ಯ ಆಂಧ್ರ ಪ್ರದೇಶದೊಂದಿಗೆ ನೀರು ಹಂಚಿಕೆ ಮಾಡಿಕೊಳ್ಳಬೇಕು ಎಂದು ಆದೇಶಿಸಿದೆ. 2013ರಲ್ಲಿ ನೀಡಿದ್ದ ಕೃಷ್ಣಾ ನದಿ ಐ ತೀರ್ಪನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ. ಹೀಗಾಗಿ ಆಂಧ್ರ ಪ್ರದೇಶ ರಾಜ್ಯಕ್ಕೆ ಹಂಚಿಕೆ ಮಾಡಲಾಗಿರುವ ನೀರಲ್ಲೇ ತೆಲಂಗಾಣ ರಾಜ್ಯ ಕೂಡ ಹಂಚಿಕೆ ಮಾಡಿಕೊಳ್ಳಬೇಕು ಎಂದು ಆದೇಶಿಸಿದೆ.
- ನ್ಯಾಯಾಧಿಕರಣದ ತೀರ್ಪಿನಿಂದಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ನೀರಾಳವಾಗಿದ್ದು, ಮಹಾರಾಷ್ಟ್ರ ಮತ್ತು ಕರ್ನಾಟಕ ಪಾಲಿನ ನೀರಿನ ಹಂಚಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ನ್ಯಾಯಾಧಿಕರಣ ಹೇಳಿದೆ.

**ಹಿನ್ನಲೆ**:

2010ರಲ್ಲಿ ಕೃಷ್ಣಾ ನದಿ ನೀರು ಹಂಚಿಕೆ ಅಂತಿಮ ತೀರ್ಪು ಬಂದ ಬಳಿಕ ಆಂಧ್ರಪ್ರದೇಶ ಇನ್ನಷ್ಟು ನೀರು ಬೇಕು ಎಂದು ನ್ಯಾಯಾಧಿಕರಣದಲ್ಲಿ ಮರು ಅರ್ಜಿಯನ್ನು ಸಲ್ಲಿಸಿತ್ತು. 2013ರಲ್ಲಿ ಕರ್ನಾಟಕದ ಪಾಲಿನ 911 ಟಿಎಂಸಿ ನೀರಿನಲ್ಲಿ 4 ಟಿಎಂಸಿ ನೀರನ್ನು ಆಂಧ್ರಪ್ರದೇಶಕ್ಕೆ ಬಿಡುವಂತೆ ನ್ಯಾಯಾಧಿಕರಣ ಆದೇಶ ನೀಡಿತ್ತು. ಅದರಂತೆ ಮಹಾರಾಷ್ಟಕ್ಕೆ 666 ಟಿಎಂಸಿ, ಕರ್ನಾಟಕಕ್ಕೆ 907 ಟಿಎಂಸಿ ಹಾಗೂ ಆಂಧ್ರಪ್ರದೇಶಕ್ಕೆ 1005 ಟಿಎಂಸಿ ನೀರು ಹಂಚಿಕೆಯಾಗಬೇಕೆಂದು ಆದೇಶಿಸಲಾಗಿತ್ತು.ಈ ನಡುವೆ ಪ್ರತ್ಯೇಕ ತೆಲಂಗಾಣ ರಾಜ್ಯರಚನೆಯಾದ ಬಳಿಕ ತೆಲಂಗಾಣ ಸರ್ಕಾರ ಮತ್ತೆ ನದಿ ನೀರು ಹಂಚಿಕೆ ಮಾಡಬೇಕು ಎಂದು ವಾದಿಸುತ್ತಿತ್ತು. ಈ ಹಿಂದೆ ಘೋಷಣೆಯಾಗಿದ್ದ ಮೂರು ರಾಜ್ಯಗಳ ಬದಲಿಗೆ ನೂತನ ತೆಲಂಗಾಣ ರಾಜ್ಯ ಸೇರಿದಂತೆ ಒಟ್ಟು ನಾಲ್ಕು ರಾಜ್ಯಗಳ ನಡುವೆ ಕೃಷ್ಣಾ ನದಿ ನೀರು ಮರುಹಂಚಿಕೆ ಮಾಡಬೇಕು ಎಂದು ತೆಲಂಗಾಣ ಅರ್ಜಿ ಸಲ್ಲಿಸಿತ್ತು.ಆದರೆ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದವು. ಯೋಜನಾವಾರು ನೀರು ಹಂಚಿಕೆ ಮಾಡುವಂತೆ ತೆಲಂಗಾಣ ರಾಜ್ಯ ಸಲ್ಲಿಸಿದ್ದ ಅರ್ಜಿಯ ಇತ್ಯರ್ಥ ಪಡಿಸಿದ ಕೃಷ್ಣಾ ನ್ಯಾಯಾಧಿಕರಣದ ಅಧ್ಯಕ್ಷ ನ್ಯಾ.ಬ್ರಿಜೇಶ್ ಕುಮಾರ್ ಅವರು, ತೆಲಂಗಾಣಕ್ಕಾಗಿ ಐ ತೀರ್ಪನ್ನು ಮರು ಪರಿಶೀಲಿಸುವ ಅಗತ್ಯವಿಲ್ಲ. ಹೀಗಾಗಿ ಈ ಹಿಂದೆ ಆಂಧ್ರ ಪ್ರದೇಶಕ್ಕೆ ಹಂಚಿಕೆ ಮಾಡಲಾಗಿರುವ ನೀರಲ್ಲೇ ತೆಲಂಗಾಣಕ್ಕೂ ನೀರು ಬಿಡುಗಡೆ ಮಾಡಬೇಕು ಎಂದು ಹೇಳಿದೆ. ಅಂತೆಯೇ ಮುಂದಿನ ವಿಚಾರಣೆಯನ್ನು ಡಿಸೆಂಬರ್ 14ಕ್ಕೆ ಮುಂದೂಡಿದೆ.

www.karunaduexams.com

# ಕೇಂದ್ರ ಸರ್ಕಾರದ-ಯೋಜನೆಗಳು

**ಹೃದಯ್ (HRIDAY) ಯೋಜನೆಯಡಿ ರೂ 114 ಕೋಟಿ ಮೊತ್ತದ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ**

ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು ಹೃದಯ್ ಯೋಜನೆಯಡಿ ಐದು ರಾಜ್ಯಗಳ ಪಾರಂಪರಿಕ ತಾಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ರೂ 114 ಕೋಟಿ ಮೊತ್ತದ ಯೋಜನೆಗಳಿಗೆ ಒಪ್ಪಿಗೆ ನೀಡಿದೆ.

**ಯಾವ ಐದು ರಾಜ್ಯಗಳು**:

- ಉತ್ತರಪ್ರದೇಶ (ವಾರಣಾಸಿ), ಪಂಜಾಬ್ (ಅಮೃತ್ ಸರ್), ಗುಜರಾತ್ (ದ್ವಾರಕ), ಒಡಿಶಾ (ಪುರಿ) ಮತ್ತು ತೆಲಂಗಣ (ವಾರಂಗಲ್).

**ಹೃದಯ್ ಯೋಜನೆ:**

- ಹೃದಯ್ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ದೇಶದ ಶ್ರೀಮಂತ ಪಾರಂಪರಿಕ ತಾಣಗಳನ್ನು ಸಂರಕ್ಷಿಸುವುದು ಮತ್ತು ಪುನರ್ಜೀವನಗೊಳಿಸಲು ಜಾರಿಗೆ ತರಲಾಗಿದೆ.
- ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸಲಿದ್ದು, ಪ್ರವಾಸಿಗರನ್ನು ಆರ್ಕಷಿಸಲು ಪಾರಂಪರಿಕ ತಾಣಗಳಲ್ಲಿ ಮೂಲಭೂತಸೌಕರ್ಯವನ್ನು ಅಭಿವೃದ್ಧಿಪಡಿಸಿಲಾಗುವುದು.
- ಒಟ್ಟಾರೆಯಾಗಿ ಪಾರಂಪರಿಕ ತಾಣಗಳಲ್ಲಿ ನಗರ ಯೋಜನೆ, ಆರ್ಥಿಕ ಬೆಳವಣಿಗೆ ಮತ್ತು ಅವುಗಳನ್ನು ಸಂರಕ್ಷಿಸುವುದು ಯೋಜನೆಯ ಮುಖ್ಯ ಆಶಯ.
- ಇದರಡಿ ಜೀವನೋಪಾಯ, ಕೌಶಲ್ಯ, ಸ್ವಚ್ಚತೆ, ಸುರಕ್ಷತೆ, ಭದ್ರತೆ ಸೇರಿದಂತೆ ಸಂಯೋಜಿತ ರೀತಿಯಲ್ಲಿ ಪಾರಂಪರಿಕ ತಾಣಗಳನ್ನು ಸುಂದರಗೊಳಿಸಲಾಗುವುದು. ಇದರ ಜೊತೆಗೆ ಪ್ರವಾಸಿಗರಿಗೆ ಅನುಕೂಲವಾಗುವಂತೆ ಸುಧಾರಿತ ಸಂಪರ್ಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು.

**ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆಗೆ (World Sustainable Development Summit) ಪ್ರಣಭ್ ಮುಖರ್ಜಿ ಚಾಲನೆ**

ಮೊದಲನೆ ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆಗೆ ರಾಷ್ಟ್ರಪತಿ ಪ್ರಣಭ್ ಮುಖರ್ಜಿರವರು ನವದೆಹಲಿಯ ವಿಜ್ಞಾನ ಭವನದಲ್ಲಿ ಚಾಲನೆ ನೀಡಿದರು. ದಿ ಎನರ್ಜಿ ಅಂಡ್ ರಿಸೋರ್ಸ್ ಇನ್ಸ್ಟಿಟ್ಯೂಟ್ (TERI) ಈ ಶೃಂಗಸಭೆಯನ್ನು ಆಯೋಜಿಸುತ್ತಿದೆ. **Beyond 2015: People, Planet and Progress ಇದು ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯ ಥೀಮ್.**

**ಪ್ರಮುಖಾಂಶಗಳು:**

- **ದೆಹಲಿ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯ ಬದಲಿಗೆ ಈ ಬಾರಿ ವಿಶ್ವ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯನ್ನು ಆಯೋಜಿಸಲಾಗುತ್ತಿದೆ. ದೆಹಲಿ ಸುಸ್ಥಿರ ಅಭಿವೃದ್ಧಿ ಶೃಂಗಸಭೆಯನ್ನು 2005ರಲ್ಲಿ ಮೊದಲ ಬಾರಿಗೆ ಹಮ್ಮಿಕೊಳ್ಳಲಾಗಿತ್ತು.**
- **ಜಗತ್ತಿನ ಪ್ರಮುಖ ರಾಜಕೀಯ ನಾಯಕರು, ನೊಬೆಲ್ ಪ್ರಶಸ್ತಿ ಪುರಸ್ಕೃತರು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಸುಸ್ಥಿರ ಅಭಿವೃದ್ಧಿ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ.**
- **ಜಾಗತಿಕ ಸಮುದಾಯಕ್ಕೆ ಅನುಕೂಲವಾಗುವಂತೆ ಪರಿಹಾರ ಒದಗಿಸಲು ಈ ಶೃಂಗಸಭೆ ವೇದಿಕೆಯಾಗಲಿದೆ.**

**ಭಾರತೀಯ ಪುರಾತತ್ವ ಇಲಾಖೆ ಸಂರಕ್ಷಿಸಿರುವ ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳನ್ನು ಪಾಲಿಥಿನ್ ಮುಕ್ತ**

ಭಾರತೀಯ ಪುರಾತತ್ವ ಇಲಾಖೆಯಡಿ ಸಂರಕ್ಷಿಸಲಾಗಿರುವ ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳನ್ನು ಪಾಲಿಥಿನ್ ಮುಕ್ತವೆಂದು ಘೋಷಿಸಲಾಗಿದೆ. ಈ ಸಂಬಂಧ ಕೇಂದ್ರ ಸಂಸ್ಕೃತಿ ಸಚಿವಾಲಯ ಎಲ್ಲಾ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ

ಸೂಚನೆ ನೀಡಿದ್ದು, ಐತಿಹಾಸಿಕ ಸ್ಮಾರಕಗಳ ಸುತ್ತ 300 ಮೀಟರ್ ವ್ಯಾಪ್ತಿಯನ್ನು ಪಾಲಿಥಿನ್ ಯಿಂದ ಮುಕ್ತವಾಗಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

- ೯೦೦ ವರ್ಷ ಇತಿಹಾಸ ಹೊಂದಿರುವ ವಿಶ್ವ ಪರಂಪರಿಕ ತಾಣವಾದ ಗುಜರಾತಿನ "ರಾಣಿ-ಕಿ-ವಾವ್" ಅನ್ನು ದೇಶದ 25 ಆದರ್ಶ ಸ್ಮಾರಕಗಳ ಪೈಕಿ ಅತಿ ಸ್ವಚ್ಚ ಸಾಂಪ್ರದಾಯಿಕ ಸ್ಥಳ (**Cleanest Iconic Place**)ವೆಂದು ಕೇಂದ್ರ ಸಂಸ್ಕೃತಿ ಸಚಿವಾಲಯ ಘೋಷಿಸಿದೆ. ಭಾರತ ನೈರ್ಮಲ್ಯ ಸಮ್ಮೇಳನ (ಇಂಡೋಸಾನ್)ದಲ್ಲಿ ಪ್ರಶಸ್ತಿಯನ್ನು ನೀಡಲಾಯಿತು.
- ಭಾರತೀಯ ಪುರಾತತ್ವ ಇಲಾಖೆಯು ಆದರ್ಶ ಸ್ಮಾರಕಗಳ ಪಟ್ಟಿಯನ್ನು ಅನೇಕ ಮಾನದಂಡಗಳನ್ನು ಅಳವಡಿಸಿಕೊಂಡು ತಯಾರಿಸಿದೆ. ಶೌಚಾಲಯ ವ್ಯವಸ್ಥೆ, ಪಾಲಿಥಿನ್ ಮುಕ್ತ ಪ್ರದೇಶ, ಹಸಿರು ಲಾನ್, ವಿಕಲಾಂಗ ಸ್ನೇಹಿ, ಕುಡಿಯುವ ನೀರು ಮತ್ತು ಕಸದ ಬುಟ್ಟಿ ವ್ಯವಸ್ಥೆ ಪರಿಗಣಿಸಿ ಅಗ್ರ 25 ಆದರ್ಶ ಸ್ಮಾರಕಗಳ ಪಟ್ಟಿಯನ್ನು ತಯಾರಿಸಲಾಗಿದೆ.

**<u>ಹೆಚ್‌ಐವಿ ಮತ್ತು ಏಡ್ಸ್ (ತಡೆ ಮತ್ತು ನಿಯಂತ್ರಣ) ಮಸೂದೆ, 2014 ತಿದ್ದುಪಡಿ ತರಲು ಕೇಂದ್ರ ಸಂಪುಟ ಒಪ್ಪಿಗೆ</u>**

ಹೆಚ್‌ಐವಿ/ಏಡ್ಸ್ ಮಸೂದೆ-2014ರ ಪ್ರಮುಖ ತಿದ್ದುಪಡಿಗಳಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಮಸೂದೆಯು ಎಚ್‌ಐವಿ-ಏಡ್ಸ್ ಪೀಡಿತರ ವಿರುದ್ಧ ತಾರತಮ್ಯದ ದೂರುಗಳ ತನಿಖೆಗೆ ಕಾನೂನು ಉತ್ತರದಾಯಿತ್ವ ಹಾಗೂ ಔಪಚಾರಿಕ ವ್ಯವಸ್ಥೆಯನ್ನು ಒದಗಿಸುತ್ತದೆ ಹಾಗೂ ಚಿಕಿತ್ಸೆಯನ್ನು ರೋಗಿಯ ಕಾನೂನು ಬದ್ಧ ಹಕ್ಕನ್ನಾಗಿಸುತ್ತದೆ.

**ಮಸೂದೆಯ ಪ್ರಮುಖಾಂಶಗಳು:**

- ಹೆಚ್‌ಐವಿ/ಏಡ್ಸ್ ಪ್ರಸರಣವನ್ನು ತಡೆಯುವುದು ಮತ್ತು ನಿಯಂತ್ರಿಸುವುದು ಮಸೂದೆಯ ಉದ್ದೇಶವಾಗಿದೆ. ಎಚ್‌ಐವಿ-ಏಡ್ಸ್ ಪೀಡಿತರ ವಿರುದ್ಧ ತಾರತಮ್ಯವನ್ನು ಹೋಗಲಾಡಿಸುವುದು ಸಹ ಒಳಗೊಂಡಿದೆ.
- ಎಚ್‌ಐವಿ ಪೀಡಿತರು ಮತ್ತು ಕುಟುಂಬಿಕರಿಗೆ ಉದ್ಯೋಗ, ಶಿಕ್ಷಣ, ಆರೋಗ್ಯ, ವಿಮೆ, ಆಸ್ತಿ, ಬಾಡಿಗೆ ಮನೆ ಇತ್ಯಾದಿಗಳನ್ನು ನಿರಾಕರಿಸಬಾರದು ಅಥವಾ ತಾರತಮ್ಯ ಮಾಡಬಾರದು.
- ರೋಗಿಯ ಅನುಮತಿ ಅಥವಾ ನ್ಯಾಯಾಲಯದ ಆದೇಶದ ಹೊರತಾಗಿ ಆತನ ಕಾಯಿಲೆಯ ಸ್ಥಿತಿಗತಿ ಬಹಿರಂಗ ಪಡಿಸಬಾರದು.
- ಉದ್ಯೋಗದ ಸ್ಥಳ, ಶಿಕ್ಷಣ ಸಂಸ್ಥೆ, ಆರೋಗ್ಯ ಸೌಲಭ್ಯ, ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಎಚ್‌ಐವಿ ಪೀಡಿತರನ್ನು ಅನುಚಿತವಾಗಿ ನಡೆಸಿಕೊಳ್ಳಬಾರದು.
- ಔಷಧೋಪಚಾರ ಪಡೆಯುವುದು ರೋಗಿಯ ಕಾನೂನುಬದ್ಧ ಹಕ್ಕು.
- 12 ವರ್ಷದ ಮೇಲಿನ 18ರೊಳಗಿನ ವ್ಯಕ್ತಿಯೊಬ್ಬ ಪಕ್ವ ತಿಳುವಳಿಕೆ ಹಾಗೂ ಕುಟುಂಬ ನಿರ್ವಹಣೆ ಸಾಮರ್ಥ್ಯ ಪಡೆದಿದ್ದರೆ, ಆತ ತನ್ನ ಎಚ್‌ಐವಿ ಪೀಡಿತ ಕುಟುಂಬದ ಪಾಲಕನಾಗಬಲ್ಲನು.
- ಎಚ್‌ಐವಿ ಪೀಡಿತನಿಗೆ ತನ್ನ ಕುಟುಂಬದವರೊಂದಿಗೆ ಮನೆಯಲ್ಲಿ ವಾಸಿಸುವ ಹಾಗೂ ಮನೆಯ ಸೌಕರ್ಯ ಅನುಭವಿಸುವ ಹಕ್ಕಿದೆ.
- ಒಟ್ಟಾರೆಯಾಗಿ ಎಚ್‌ಐವಿ ಪೀಡಿತರನ್ನು ಸಾಮಾನ್ಯ ವ್ಯಕ್ತಿ ಗಳಂತೆಯೇ ನಡೆಸಿಕೊಳ್ಳಬೇಕು.

www.karunadu

**ನಾನಜಿ ದೇಶಮುಖ್ ಜನ್ಮ ಶತಮಾನೋತ್ಸವ ಆಚರಿಸಲು ಕೇಂದ್ರ ಸರ್ಕಾರ ನಿರ್ಧಾರ**

ಕೇಂದ್ರ ಸರ್ಕಾರ ಅಕ್ಟೋಬರ್ 11, 2016 ರಿಂದ ಅಕ್ಟೋಬರ್ 11, 2017 ರವರೆಗೆ ಸಾಮಾಜಿಕ ಕಾರ್ಯಕರ್ತ ಮತ್ತು ಮಾಜಿ ಆರೆಸ್ಸೆಸ್ ನಾಯಕ ನಾನಜಿ ದೇಶಮುಖ್ ಅವರ ಜನ್ಮಶತಮಾನೋತ್ಸವವನ್ನು ಆಚರಿಸಲು ನಿರ್ಧರಿಸಿದೆ. ಕೇಂದ್ರ ಸಂಸ್ಕೃತ ಸಚಿವ ಮಹೇಶ್ ಶರ್ಮಾ ಅವರು ಈ ವಿಷಯವನ್ನು ಖಚಿತಪಡಿಸಿದ್ದಾರೆ.

**ನಾನಜಿ ದೇಶಮುಖ್**:

- ನಾನಜಿ ದೇಶಮುಖ್ ಅವರು ಸಾಮಾಜಿಕ ಕಾರ್ಯಕರ್ತರಾಗಿ ಶಿಕ್ಷಣ, ಆರೋಗ್ಯ ಮತ್ತು ಗ್ರಾಮೀಣ ಸ್ವಾಲಂಭನೆ ಕ್ಷೇತ್ರದಲ್ಲಿ ಪ್ರಮುಖವಾಗಿ ತೊಡಗಿಸಿಕೊಂಡಿದ್ದರು.
- ಭಾರತೀಯ ಜನ ಸಂಘ ಮತ್ತು ರೆಸ್ಸೆಸ್ ನಾಯಕರಾಗಿ ಸಹ ಸೇವೆ ಸಲ್ಲಿಸಿದ್ದರು.
- ಅಕ್ಟೋಬರ್ 11, 1916 ರಲ್ಲಿ ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯಲ್ಲಿ ಜನಿಸಿದರು. ಚಾಂದಿಕದಾಸ್ ಅಮೃತರಾವ್ ದೇಶಮುಖ್ ಇವರ ಮೂಲ ಹೆಸರು.
- ದೇಶಮುಖ್ ರವರು ಲೋಕಮಾನ್ಯ ತಿಲಕ್ ಮತ್ತು ತಿಲಕರ ರಾಷ್ಟ್ರೀಯತವಾದದಿಂದ ಪ್ರೇರೇಪಣೆಗೊಂಡಿದ್ದರು. ಅಲ್ಲದೇ ಆರೆಸ್ಸೆಸ್ ಸಂಸ್ಥಾಪಕ ಸರ್ಸಂಗಚಾಲಕರಾಗಿದ್ದ ಡಾ.ಕೇಶವ್ ಬಲಿರಾಮ್ ಹೆಗ್ಡೆವಾರ್ ರವರೊಂದಿಗೆ ಒಡನಾಟವನ್ನು ಹೊಂದಿದ್ದರು.
- ವಿನೋದ ಭಾವೆ ಅವರ ಭೂದಾನ ಚಳುವಳಿ ಹಾಗೂ ಜೆ ಪಿ ನಾರಾಯಣ್ ರವರ ಸಂಪೂರ್ಣ ಕ್ರಾಂತಿ ಚಳುವಳಿಯನ್ನು ಬೆಂಬಲಿಸಿ ಸಕ್ರಿಯವಾಗಿ ಭಾಗವಹಿಸಿದ್ದರು.
- ಜನತಾ ಪಕ್ಷದ ಪ್ರಮುಖ ರೂವಾರಿಯು ಆಗಿದ್ದ ದೇಶಮುಖ್ ರವರು 1977 ರಲ್ಲಿ ಉತ್ತರಪ್ರದೇಶದ ಬಲರಾಮ್ಪುರ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು.
- ಭಾರತದ ಮೊದಲ ಗ್ರಾಮೀಣ ವಿಶ್ವವಿದ್ಯಾಲಯವಾದ ಚಿತ್ರಕೂಟ ಗ್ರಾಮೋದಯ ವಿಶ್ವವಿದ್ಯಾಲಯವನ್ನು ಚಿತ್ರಕೂಟದಲ್ಲಿ ಸ್ಥಾಪಿಸಿದರು ಹಾಗೂ ಈ ವಿವಿಯ ಪ್ರಥಮ ಕುಲಪತಿಯಾಗಿಯು ಸೇವೆ ಸಲ್ಲಿಸಿದ್ದರು.
- ಗ್ರಾಮೀಣ ಭಾಗದಲ್ಲಿ ಬಡತನ ತೊಳೆಯಲು ಶ್ರಮಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ರಾಷ್ಟ್ರಕ್ಕೆ ಇವರು ನೀಡಿದ್ದ ಕೊಡುಗೆಯನ್ನು ಗಮನಿಸಿ 1999 ರಲ್ಲಿ ಇವರನ್ನು ರಾಜ್ಯಸಭೆಗೆ ನೇಮಕ ಮಾಡಲಾಗಿತ್ತು.
- 1999 ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ಇವರಿಗೆ ನೀಡಲಾಗಿದೆ.

**ಪಾಣಿಪತ್ ತೈಲ ಸಂಸ್ಕರಣಗಾರ ಸಾಮರ್ಥ್ಯ ಹೆಚ್ಚಿಸಲು ರೂ 15000 ಕೋಟಿ ಹೂಡಲಿರುವ ಕೇಂದ್ರ ಸರ್ಕಾರ**

ಹರಿಯಾಣದ ಪಾಣಿಪತ್ ತೈಲ ಸಂಸ್ಕರಣಗಾರ ಸಾಮರ್ಥ್ಯವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಇದಕ್ಕಾಗಿ ರೂ 15000 ಕೋಟಿ ಹೂಡಿಕೆಗೆ ಸಮ್ಮತಿಸಿದೆ. ಪ್ರಸ್ತುತ ಈ ಸಂಸ್ಕರಣಗಾರ 15 ಮಿಲಿಯನ್ ಟನ್ ಸಾಮರ್ಥ್ಯ ಹೊಂದಿದ್ದು, 25 ಮಿಲಿಯನ್ ಟನ್ಗೆ ಏರಿಕೆಯಾಗಲಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ರಾಜ್ಯ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಪಾಣಿಪತ್ ನಲ್ಲಿ ನಡೆದ ಸಭೆಯಲ್ಲಿ ವಿಷಯವನ್ನು ಬಹಿರಂಗಪಡಿಸಿದ್ದಾರೆ.

**ಪ್ರಮುಖಾಂಶಗಳು**:

- ಸಂಸ್ಕರಣಗಾರದ ವಿಸ್ತರಣೆಯಿಂದ ಭವಿಷ್ಯದ ಬೇಡಿಕೆಯಂತೆ ಇಂಧನದ ಗುಣಮಟ್ಟವನ್ನು BS IV-BS VI ಗೆ ಹೆಚ್ಚಿಸಲು ಸಹಾಯವಾಗಲಿದೆ.
- ಇಂಧನ ಗುಣಮಟ್ಟವನ್ನು ಹೆಚ್ಚಿಸುವುದಲ್ಲದೇ, ಅನೇಕ ಜನರಿಗೆ ಉದ್ಯೋಗ ಅವಕಾಶ ಸೃಷ್ಟಿಯಾಗಲಿದೆ.

- ಇದರ ಜೊತೆಗೆ "ಇಂಡಿಯನ್ ಆಯಿಲ್ ಕಾರ್ಪೋರೇಷನ್ (IOC)" ಕೃಷಿ ತ್ಯಾಜ್ಯ ಬಳಸಿ ಬಯೋಎಥೆನಾಲ್ ಉತ್ಪಾದನ ಘಟಕವನ್ನು ಪಾಣಿಪತ್ ನಲ್ಲಿ ಸ್ಥಾಪಿಸಲಿದೆ. ಇದರಿಂದ ಕೃಷಿ ವಲಯಕ್ಕೂ ಅನುಕೂಲವಾಗಲಿದೆ.

**ಬಯೋಎಥೆನಾಲ್ ಎಂದರೇನು?**

- ಬಯೋಎಥೆನಾಲ್ ಎಂದರೆ ಕೃಷಿ ತ್ಯಾಜ್ಯ ಮತ್ತು ಪೂರಕ ವಸ್ತುಗಳಲ್ಲಿರುವ ಕಾರ್ಬೋಹೈಡ್ರೇಟಗಳನ್ನು ಹುದುಗವ ಕ್ರಿಯೆಗೆ ಒಳಪಡಿಸಿ ಪಡೆದ ಅಲ್ಕೋಹಾಲ್.
- ಬಯೋಎಥೆನಾಲ್ ಅನ್ನು ಡಿಸೇಲ್ ಅಥವಾ ಪೆಟ್ರೋಲ್ ನೊಂದಿಗೆ ಬಳಸಿ ಸಾರಿಗೆ ಇಂಧನವಾಗಿ ಬಳಸಬಹುದಾಗಿದೆ. ಬಯೋಎಥೆನಾಲ್ ಬಳಕೆಯಿಂದ ಇಂಧನ ಹೊರಸೂಸುವಿಕೆ ತಗ್ಗುವುದಲ್ಲದೇ, ತೈಲ ಆಮದಿನ ಮೇಲೆ ಅವಲಂಬನೆ ಆಗುವುದು ತಪ್ಪಲಿದೆ.

## ಬೇಳೆಕಾಳುಗಳ ವಿತರಣೆಗೆ ಅಂಚೆ ಕಚೇರಿಗಳನ್ನು ಬಳಸಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧಾರ

ದೇಶವ್ಯಾಪ್ತಿ ಇರುವ ಅಂಚೆಕಚೇರಿಗಳ ವ್ಯಾಪಕ ಜಾಲದ ಮೂಲಕ ಬೇಳೆಕಾಳುಗಳನ್ನು ಸಬ್ಸಿಡಿ ದರಗಳಲ್ಲಿ ಮಾರಾಟ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಗ್ರಾಹಕ ವ್ಯವಹಾರ ಕಾರ್ಯದರ್ಶಿ ಹೇಮ ಪಾಂಡೆ ಅವರ ಅಧ್ಯಕ್ಷತೆಯಲ್ಲಿ ಇಲ್ಲಿ ನಡೆದ ಅಂತರ್ ಸಚಿವಾಲಯ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

- ಅಗತ್ಯ ಪದಾರ್ಥಗಳ ಲಭ್ಯತೆ ಅದರಲ್ಲೂ ಬೇಳೆಕಾಳುಗಳ ಲಭ್ಯತೆ ಮತ್ತು ಬೆಲೆ ಬಗ್ಗೆ ಸಮಿತಿಯಲ್ಲಿ ಪರಿಶೀಲಿಸಲಾಯಿತು.
- ಸಕ್ಕರೆ, ಬೇಳೆಕಾಳು ಮತ್ತು ಇತರೆ ಅಗತ್ಯ ಪದಾರ್ಥಗಳ ಬೆಲೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
- ಹಬ್ಬದ ದಿನಗಳಲ್ಲಿ ಹೆಚ್ಚು ಬೇಳೆಕಾಳುಗಳನ್ನು ದಾಸ್ತಾನುಗಳಿಂದ ಬಿಡುಗಡೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಅಂಚೆ ಕಚೇರಿ ಮೂಲಕ ಏಕೆ?:**

- ಹಬ್ಬದ ದಿನಗಳಲ್ಲಿ ತೊಗರಿ, ಉದ್ದು ಮತ್ತು ಕಡಲೆ ಬೇಳೆಗಳ ಕೊರತೆಯನ್ನು ನೀಗಿಸುವುದು.
- ಸರ್ಕಾರದ ಮಾರಾಟ ಮಳಿಗೆಗಳು ಇಲ್ಲದ ರಾಜ್ಯಗಳಲ್ಲಿ ಬೇಳೆಕಾಳುಗಳನ್ನು ಪೂರೈಸಿಸುವುದು ಮುಖ್ಯವಾಗಿ ಉದ್ದು ಮತ್ತು ಕಡಲೆ ಪೂರೈಕೆ.
- ಕೇಂದ್ರ ಸರ್ಕಾರದ ಕಾಪು ದಾಸ್ತಾನಿನಲ್ಲಿನ ಬೇಳೆಕಾಳುಗಳನ್ನು ಅಂಚೆ ಕಚೇರಿಗಳ ಮೂಲಕ ರಿಯಾಯ್ತಿ ದರದಲ್ಲಿ ಮಾರಾಟ ಮಾಡುವುದರಿಂದ ಅವುಗಳ ಲಭ್ಯತೆ ಸುಲಭವಾಗಲಿದೆ.
- ದೇಶದಲ್ಲಿ ಸುಮಾರು 1.59 ಲಕ್ಷ ಅಂಚೆ ಕಚೇರಿಗಳಿದ್ದು, ಇವುಗಳ ಪೈಕಿ 1.39 ಅಂಚೆ ಕಚೇರಿಗಳು ಗ್ರಾಮೀಣ ಭಾಗದಲ್ಲಿವೆ. ಇವುಗಳನ್ನು ಬೇಳೆಕಾಳು ವಿತರಣೆಗೆ ಬಳಸಿಕೊಂಡು ಸುಲಭವಾಗಿ ಗ್ರಾಹಕರಿಗೆ ಬೇಳೆಕಾಳುಗಳನ್ನು ತಲುಪಿಸಬಹುದಾಗಿದೆ.

## ಸರಸ್ವತಿ ನದಿ ಅಸ್ತಿತ್ವದಲ್ಲಿತ್ತು: ಕೆ ಎಸ್ ವಾಲ್ದಿಯ ಸಮಿತಿ

ಇದುವರೆಗೂ ಪುರಾಣಗಳಲ್ಲಿ ಉಲ್ಲೇಖಿತವಾಗಿದ್ದ ಸರಸ್ವತಿ ನದಿ ನಿಜವಾಗಲೂ ಅಸ್ತಿತ್ವದಲ್ಲಿತ್ತು ಎಂದು ಕೆ ಎಸ್ ವಾಲ್ದೀಯ ನೇತೃತ್ವದ ಸಮಿತಿ ತನ್ನ ವರದಿಯನ್ನು ಕೇಂದ್ರ ಜಲಸಂಪನ್ಮೂಲ ಸಚಿವಾಲಯಕ್ಕೆ ಸಲ್ಲಿಸಿದೆ. ಭೂಗೋಳಶಾಸ್ತ್ರಜ್ಞರು, ಪುರಾತತ್ತ್ವಜ್ಞರು ಮತ್ತು ಹೈಡ್ರಾಲಾಜಿಸ್ಟ್ ಗಳನ್ನು ಒಳಗೊಂಡಿದ ಸಮಿತಿಯು ಸರಸ್ವತಿ ನದಿ ಮೂಲವನ್ನು ಪತ್ತೆಹಚ್ಚಿರುವುದಾಗಿ ತಿಳಿಸಿದ್ದಾರೆ. ಸರಸ್ವತಿ ನದಿಯನ್ನು ಕಾಲ್ಪನಿಕ ನದಿಯೆಂದೇ ಪರಿಗಣಿಸಲಾಗಿತ್ತು, ಪ್ರಾಚೀನ ಹಿಂದೂ ಪುರಾಣಗಳಲ್ಲಿ, ಋಗ್ವೇದ, ಮಹಾಭಾರತ ಮತ್ತು ರಾಮಾಯಣದಲ್ಲಿ ಈ ನದಿಯ ಬಗ್ಗೆ ಪ್ರಸ್ತಾಪಿಸಲಾಗಿದೆ.



www.karunaduexams.com

**ಸಮಿತಿಯ ಪ್ರಮುಖಾಂಶಗಳು:**

- ಸರಸ್ವತಿ ನದಿಯು ಹಿಮಾಲಯದಲ್ಲಿ ಮೂಲ ಹೊಂದಿದೆ. 4000 ಕಿ.ಮೀ ಉದ್ದವಿದ್ದು, ಭಾರತ ಮತ್ತು ಪಾಕಿಸ್ತಾನದಲ್ಲಿ ಹರಿಯುವ ಮೂಲಕ "ರನ್ ಆಫ್ ಖಚ್ "ಕೊಲ್ಲಿಯಲ್ಲಿ ಅರಬ್ಬಿ ಸಮುದ್ರ ಸೇರುತ್ತಿತ್ತು ಎಂಬ ತೀರ್ಮಾನಕ್ಕೆ ಬರಲಾಗಿದೆ'.
- ನದಿಯ ಸುಮಾರು 2/3ನೇ ಭಾಗ ಅಂದರೆ 3,000 ಕಿ.ಮೀ ಭಾರತದಲ್ಲಿ ಹರಿಯುತ್ತಿತ್ತು, ಉಳಿದ ಭಾಗ ಪಾಕಿಸ್ತಾನದಲ್ಲಿ ಹರಿಯುತ್ತಿತ್ತು ಎಂದು ಸಮಿತಿ ಅಭಿಪ್ರಾಯಪಟ್ಟಿದೆ.
- ನದಿ ಪೂರ್ವ ಮತ್ತು ಪಶ್ಚಿಮ ಎಂದು ಎರಡು ಕವಲು ಹೊಂದಿತ್ತು. ಹಿಮಾಲಯದಲ್ಲಿ ಹುಟ್ಟುತ್ತಿದ್ದ ಸಟ್ಲೆಜ್ ನದಿ ಪ್ರಸ್ತುತ ಘಗ್ಗರ್-ಪಟಿಯಾಲಿವಾಲಿ ಕಾಲುವೆ ಮಾರ್ಗದಲ್ಲಿ ಹರಿಯುತ್ತಿತ್ತು. ಇದು ಪುರಾತನ ಕಾಲದ ಸರಸ್ವತಿ ನದಿಯ ಪಶ್ಚಿಮ ಕವಲಾಗಿತ್ತು. ಸರಸ್ವತಿ ನದಿಯ ಪೂರ್ವ ಕವಲು ಮಾರ್ಕಂಡ ಹಾಗೂ ಸರ್ಸುತಿ (ಸರಸ್ವತಿಯ ಅಪಭ್ರಂಶ) ನದಿಯಾಗಿತ್ತು ಎಂದು ಏಳು ಸದಸ್ಯರನ್ನು ಹೊಂದಿರುವ ಸಮಿತಿ ಹೇಳಿದೆ.
- ಈ ಎರಡು ಕವಲುಗಳು ಪಾಟಿಯಾಲದಿಂದ 25 ಕಿ.ಮೀ ದೂರದಲ್ಲಿರುವ "ಶಾತ್ರನ" ಎಂಬಲ್ಲಿ ಸಂಗಮವಾಗುತ್ತಿದ್ದವು. ಇಲ್ಲಿಂದ ರನ್ ಆಫ್ ಕಚ್ ದಾಟಿ ಪಶ್ಚಿಮ ಸಮುದ್ರವನ್ನು ಸೇರುತ್ತಿತ್ತು.

ಸರಸ್ವತಿ ನದಿ ಅಸ್ತಿತ್ವ ಕುರಿತು ಸಮಿತಿ ಆರು ತಿಂಗಳ ಕಾಲ ಸಂಶೋಧನೆ ನಡೆಸಿದೆ. ನದಿ ತನ್ನ ಪಥ ಬದಲಿಸಿದ ವಿಶಿಷ್ಟ ಕುರುಹು ಪತ್ತೆಯಾಗಿದ್ದು, ಇದು ಈಗ ಇರುವ ಘಗ್ಗರ್, ಸರ್ಸುತಿ , ಹಕ್ರಾ ಹಾಗೂ ನಾರಾ ನದಿಗಳ ಮಾರ್ಗಕ್ಕೆ ಸಂಬಂಧಿಸಿದ್ದು ಎಂದು ವಾಲ್ದಿಯಾ ಅವರು ವಿವರಿಸಿದ್ದಾರೆ. ಹರಪ್ಪ ನಾಗರಿಕತೆ ಇದ್ದ ಕಾಲದಲ್ಲಿ ಈ ವಿಶಿಷ್ಟ ಮಾರ್ಗದ ಸುತ್ತಮುತ್ತ ಅಂದಾಜು 1700 ದೊಡ್ಡ ಸಣ್ಣ ಹಾಗೂ ದೊಡ್ಡ ಗ್ರಾಮ, ಪಟ್ಟಣಗಳಿದ್ದವು. 100ಕ್ಕೂ ಹೆಚ್ಚು ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದ ಕೆಲವು ಪಟ್ಟಣಗಳು ಸುಮಾರು 5500 ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದವು. ನೀರಿಲ್ಲದೆ ಈ ಪಟ್ಟಣಗಳು ಅಸ್ತಿತ್ವ ಹೊಂದಲು ಸಾಧ್ಯವಿತ್ತೆ? ಇಲ್ಲ. ಅಂದರೆ ಇಲ್ಲಿ ಹರಿಯುತ್ತಿದ್ದ ನದಿ ಗ್ರಾಮ, ಪಟ್ಟಣಗಳಿಗೆ ನೀರು ಒದಗಿಸುತ್ತಿತ್ತು. ಆ ನದಿ ಯಾವುದಾಗಿತ್ತು? ಅದರ ಹೆಸರೇನು? ಎಂಬುದನ್ನು ಪತ್ತೆ ಮಾಡಲು ನಾವು ಸಂಶೋಧನೆ ನಡೆಸಿದೆವು ಎಂದು ವಾಲ್ದಿಯಾ ಹೇಳಿದ್ದಾರೆ.

**ಸರಕು ಮತ್ತು ಸೇವಾ ತೆರಿಗೆ ನಾಲ್ಕು ಸ್ಲ್ಯಾಬ್ ತೆರಿಗೆಗೆ ಕೇಂದ್ರ ಸರ್ಕಾರ ಒಲವು**

ಹೊಸದಾಗಿ ಜಾರಿಗೆ ಬರುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್ಟಿ)ಯಲ್ಲಿ ನಾಲ್ಕು ಸ್ಲ್ಯಾಬ್‌ಗಳನ್ನು ರೂಪಿಸಲು ಕೇಂದ್ರ ಸರಕಾರ ಚಿಂತನೆ ನಡೆಸಿದೆ. ಅಂದರೆ ತೆರಿಗೆಯು ಶೇ 0% ರಿಂದ ಶೇ 26% ವರೆಗೆ ಇರಲಿದೆ. ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರ ನೇತೃತ್ವದಲ್ಲಿ ನಡೆದ ಜಿಎಸ್ಟಿ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಿದೆ.

**ಸಭೆಯಲ್ಲಿ ಕೈಗೊಂಡ ಪ್ರಮುಖ ತೀರ್ಮಾನಗಳು:**

- ಮುಂದಿನ ಹಣಕಾಸು ವರ್ಷದಿಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ಬರುವುದರಿಂದ ರಾಜ್ಯ ಸರ್ಕಾರಗಳಿಗೆ ಆಗುವ ನಷ್ಟ ಭರ್ತಿ ಮಾಡಿಕೊಡುವ ಬಗ್ಗೆ ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ಒಮ್ಮತಕ್ಕೆ ಬರಲಾಗಿದೆ.
- ರಾಜ್ಯಗಳ ವರಮಾನ ಲೆಕ್ಕಾಚಾರ ಹಾಕುವಾಗ 5 ವರ್ಷಗಳ ಅವಧಿಯಲ್ಲಿ ವರಮಾನ ಶೇ 14ರ ದರದಲ್ಲಿ ಏರಲಿದೆ ಎನ್ನುವ ಅಂದಾಜು ಮಾಡಲಾಗಿದೆ.
- ರಾಜ್ಯವೊಂದರ ನಷ್ಟದ ಪ್ರಮಾಣ ನಿಗದಿಪಡಿಸಲು 2015-16ನೆ ವರ್ಷವನ್ನು ಮೂಲ ವರ್ಷವನ್ನಾಗಿ ಪರಿಗಣಿಸಲು ನಿರ್ಧರಿಸಲಾಗಿದೆ.
- ಕಡಿಮೆ ಆದಾಯಗಳಿಸುವ ರಾಜ್ಯಗಳಿಗೆ ಆಗುವ ನಷ್ಟವನ್ನು ಕೇಂದ್ರ ಸರ್ಕಾರವೇ ಭರಿಸಲಿದೆ. ಇದಕ್ಕಾಗಿ ವಿಲಾಸಿ ಸರಕುಗಳ ಮೇಲೆ ವಿಧಿಸಲಾಗುವ ಅಧಿಕ ಸೆಸ್ ಗಳಿಂದ ಬರುವ ಮೊತ್ತದಿಂದ ನಿಧಿಯೊಂದನ್ನು ಸ್ಥಾಪಿಸಿ ಅದರಿಂದ ಭರಿಸಲಾಗುವುದು.



www.karunaduexams.com

- ಆಹಾರ ಪದಾರ್ಥಗಳಿಗೆ ವಿನಾಯ್ತಿ ನೀಡುವ ಮತ್ತು ಹಣದುಬ್ಬರಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಸಾಮಾನ್ಯ ಬಳಕೆಯ ಶೇ 50ರಷ್ಟು ಸರಕುಗಳಿಗೆ ತೆರಿಗೆ ವಿನಾಯ್ತಿ ನೀಡುವ ತೀರ್ಮಾನಕ್ಕೂ ಬರಲಾಗಿದೆ.

**ಉದ್ದೇಶಿತ ನಾಲ್ಕು ಸ್ಲ್ಯಾಬ್ ಗಳು:**

- ಸರಕು ಮತ್ತು ಸೇವಾ ತೆರಿಗೆಯನ್ನು ಶೇಕಡ 6, 12, 18 ಹಾಗೂ 26ರ ನಾಲ್ಕು ಸ್ತರಗಳನ್ನು ರೂಪಿಸಲು ಹಾಗೂ ಚಿನ್ನದ ಮೇಲೆ ಶೇಕಡ 4ರ ಲೆವಿ ವಿಧಿಸಲು ಜಿಎಸ್ಟಿ ಮಂಡಳಿ ಸಭೆಯಲ್ಲಿ ಕೇಂದ್ರ ಹಣಕಾಸು ಸಚಿವಾಲಯ ಪ್ರಸ್ತಾಪ ಮುಂದಿಟ್ಟಿದೆ.
- ಆಹಾರ, ಆರೋಗ್ಯ, ಶಿಕ್ಷಣ ಮತ್ತಿತ್ತರ ಸಾಮಾನ್ಯ ಬಳಕೆ ಕ್ಷೇತ್ರದಲ್ಲಿ ಜಿಎಸ್ಟಿ ಶೇ 0% ಇರಲಿದೆ. ವಿಲಾಸಿ ಸರಕು ಮತ್ತು ತಂಬಾಕು ಉತ್ಪನ್ನಗಳಿಗೆ ಶೇ 26% ದರ ವಿಧಿಸುವ ಪ್ರಸ್ತಾವನೆ ಮಾಡಲಾಗಿದೆ.

**<u>ರಾಷ್ಟ್ರೀಯ ಎಸ್.ಸಿ/ಎಸ್.ಟಿ ಹಬ್ ಮತ್ತು ಝೀರೊ ಡಿಫೆಕ್ಟ್, ಝೀರೊ ಎಫೆಕ್ಟ್ ಯೋಜನೆಗೆ ಪ್ರಧಾನಿ ಮೋದಿ ಚಾಲನೆ</u>**

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮವನ್ನು ಬೆಂಬಲಿಸಲು ಪರಿಶಿಷ್ಠ ಪಂಗಡ ಹಾಗೂ ಪರಿಶಿಷ್ಠ ಜಾತಿ ಉದ್ಯಮಿಗಳಿಗೆ ನೆರವು ನೀಡುವ ಉದ್ದೇಶದಿಂದ ಪ್ರಾರಂಭಿಸಲಾಗಿರುವ ರಾಷ್ಟ್ರೀಯ ಎಸ್ ಸಿ/ ಎಸ್ ಟಿ ಹಬ್ ಮತ್ತು ಝೀರೊ ಡಿಫೆಕ್ಟ್, ಝೀರೊ ಎಫೆಕ್ಟ್ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಲೂಧಿಯಾನ, ಪಂಜಾಬ್ ನಲ್ಲಿ ಚಾಲನೆ ನೀಡಿದರು. ಅಲ್ಲದೇ 500 ಮಹಿಳೆಯರಿಗೆ ಚರಕವನ್ನು ವಿತರಿಸಲಾಯಿತು.

**ರಾಷ್ಟ್ರೀಯ ಎಸ್ ಸಿ/ ಎಸ್ ಟಿ ಹಬ್:**

- ಎಸ್.ಸಿ/ಎಸ್.ಟಿ ಉದ್ಯಮಿಗಳಿಗೆ ವೃತ್ತಿಪರ ಬೆಂಬಲವನ್ನು ನೀಡುವುದು ಈ ಯೋಜನೆಯ ಮುಖ್ಯ ಗುರಿ.
- ರಾಷ್ಟ್ರೀಯ ಎಸ್ ಸಿ/ ಎಸ್ ಟಿ ಹಬ್, ಎಸ್ ಸಿ/ ಎಸ್ ಟಿ ಸಮುದಾಯಕ್ಕೆ ನೆರವಾಗುವ ನಿಟ್ಟಿನಲ್ಲಿ ಮಾರುಕಟ್ಟೆ ಪ್ರವೇಶ ಬಲಪಡಿಸುವ, ಆರ್ಥಿಕ ನೆರವಿನ ಯೋಜನೆಗಳು, ಸಮುದಾಯದ ಸಾಮರ್ಥ್ಯ ಹೆಚ್ಚಿಸುವುದಕ್ಕೆ ಉಪಯೋಗವಾಗಲಿದೆ.

**2012ರ ಖರೀದಿ ನೀತಿ:** 2012ರ ಖರೀದಿ ನೀತಿಯ ಪ್ರಕಾರ, ಕೇಂದ್ರದ ಸಚಿವಾಲಯಗಳು, ಇಲಾಖೆಗಳು ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದ ಉದ್ಯಮಗಳು ಒಟ್ಟು ಖರೀದಿಯಲ್ಲಿ ಶೇ 4ರಷ್ಟನ್ನು ಎಸ್‌ಸಿ/ಎಸ್‌ಟಿ ಉದ್ಯಮಿಗಳ ಮಾಲೀಕತ್ವದ ಉದ್ಯಮಗಳಿಂದ ಖರೀದಿಸಬೇಕು.

**ಝೀರೊ ಡಿಫೆಕ್ಟ್, ಝೀರೊ ಎಫೆಕ್ಟ್:** ಸಣ್ಣ ಉದ್ಯಮಗಳು ಅವಕಾಶವನ್ನು ಬಳಸಿಕೊಂಡು ಯಾವುದೇ ಲೋಪಗಳಿಲ್ಲದ (ಝೀರೊ ಡಿಫೆಕ್ಟ್) ವಸ್ತುಗಳನ್ನು ಪರಿಸರದ ಮೇಲೆ ಯಾವುದೇ ಪ್ರತಿಕೂಲ ಪರಿಣಾಮವಾಗದ ರೀತಿಯಲ್ಲಿ(ಝೀರೊ ಎಫೆಕ್ಟ್) ತಯಾರಿಸುವುದು ಈ ಯೋಜನೆಯ ಗುರಿ. ದೇಶದ ಆರ್ಥಿಕತೆಗೆ ಸಣ್ಣ ಉದ್ಯಮಗಳು ಅಪಾರ ಕೊಡುಗೆ ನೀಡುತ್ತಿದ್ದು, ಜಾಗತಿಕ ಮಟ್ಟದ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಈ ಯೋಜನೆ ಸಹಾಯವಾಗಲಿದೆ. ಝೀರೊ ಡಿಫೆಕ್ಟ್, ಝೀರೊ ಎಫೆಕ್ಟ್ ಘೋಷಣೆಯನ್ನು ಪ್ರಧಾನಿ ಮೋದಿ ಅವರು ಆಗಸ್ಟ್ 2014 ರಂದು ಸ್ವತಂತ್ರ ದಿನಾಚರಣೆ ಭಾಷಣದಲ್ಲಿ ಮೊದಲ ಬಾರಿಗೆ ಹೇಳಿದ್ದರು.

**<u>ಗುಜರಾತ್ ನ ಒಖ-ಕನಲುಸ್, ಪೋರ್ಬಂದರ್-ವಾನ್ಸ್ ಜಲಿಯ ರೈಲ್ವೆ ವಿಭಾಗಗಳು ಹಸಿರು ರೈಲು ಕಾರಿಡಾರ್</u>**

ಗುಜರಾತ್ನ ಒಖ-ಕನಲುಸ್, ಪೋರ್ಬಂದರ್-ವಾನ್ಸ್ ಜಲಿಯ ರೈಲ್ವೆ ವಿಭಾಗಗಳನ್ನು ಹಸಿರು ರೈಲು ಕಾರಿಡಾರ್ ಎಂದು ಕೇಂದ್ರ ರೈಲ್ವೆ ಸಚಿವಾಲಯ ಘೋಷಿಸಿದೆ. ಈ ಮಾರ್ಗ 175 ಕಿ.ಮೀ ಉದ್ದವಿದ್ದು, ಇದರ ಮೂಲಕ ಹಾದು ಹೋಗುವ ಎಲ್ಲಾ ರೈಲುಗಳಿಗೆ ಜೈವಿಕ ಶೌಚಾಲಯ (ಬಯೋ ಟಾಯ್ಲೆಟ್) ಅನ್ನು ಅಳವಡಿಸಲಾಗಿದೆ. ಈ ಮಾರ್ಗದ ಮೂಲಕ ಸಂಚರಿಸುವ 29 ರೈಲುಗಳ 700

www.karunaduexams.com

ಬೋಗಿಗಳಿಗೆ ಜೈವಿಕ ಶೌಚಾಲಯ ಅಳವಡಿಸಿದ್ದು, ರೈಲು ಪಥಗಳ ಮೇಲೆ ಮಲ-ಮೂತ್ರ ನೇರವಾಗಿ ವಿಸರ್ಜನೆಯಾಗದೇ ತಡೆಯಲಾಗಿದೆ.

**ಹಸಿರು ರೈಲು ಕಾರಿಡಾರ್:**

- ಹಸಿರು ರೈಲು ಕಾರಿಡಾರ್ ಗಳು ರೈಲು ಮಾರ್ಗದ ಭಾಗವಾಗಿದ್ದು, ಈ ಪಥಗಳಲ್ಲಿ ರೈಲಿನಿಂದ ನೇರವಾಗಿ ಮಾನವ ತ್ಯಾಜ್ಯ ಬಿಡುಗಡೆಗೊಳಿಸಲಾಗುವುದಿಲ್ಲ. ಬದಲಿಗೆ ಈ ಮಾರ್ಗದಲ್ಲಿ ಚಲಿಸುವ ರೈಲುಗಳಲ್ಲಿ ಜೈವಿಕ ಶೌಚಾಲಯಗಳನ್ನು ಅಳವಡಿಸಲಾಗಿರುತ್ತದೆ.
- ಆದ್ದರಿಂದ ಮಾನವ ತ್ಯಾಜ್ಯ ನೇರವಾಗಿ ರೈಲು ಪಥಗಳ ಮೇಲೆ ಬೀಳದೆ ಸ್ವಚ್ಚತೆ ಮತ್ತು ನೈರ್ಮಲ್ಯತೆ ಕಾಪಾಡಬಹುದಾಗಿದೆ.
- ತಮಿಳುನಾಡಿನ 114 ಕಿ.ಮೀ ಉದ್ದದ ರಾಮೇಶ್ವರಂ-ಮನಮಧುರೈ ರೈಲು ಮಾರ್ಗ ದೇಶದ ಮೊದಲ ಹಸಿರು ರೈಲು ಕಾರಿಡಾರ್.

**ಹಿನ್ನಲೆ:**

- ಸ್ವಚ್ಚ ಭಾರತ ಅಭಿಯಾನದ ಅಂಗವಾಗಿ ರೈಲು ನಿಲ್ದಾಣ ಮತ್ತು ರೈಲು ಹಾದಿಗಳಲ್ಲಿ ಸ್ವಚ್ಚತೆ ಹಾಗೂ ನೈರ್ಮಲ್ಯತೆ ತೋರುವ ಸಲುವಾಗಿ ರೈಲು ಸಚಿವಾಲಯವು 2020-21ರ ವೇಳೆಗೆ ಎಲ್ಲಾ ರೈಲುಗಳಲ್ಲಿ ಜೈವಿಕ ಶೌಚಾಲಯವನ್ನು ಅಳವಡಿಸಲು ಚಿಂತಿಸಿದೆ.

**ಜೈವಿಕ ಶೌಚಾಲಯ**:

- ಜೈವಿಕ ಶೌಚಾಲಯ ಪರಿಸರ ಸ್ನೇಹಿ ಶೌಚಾಲಯವಾಗಿದ್ದು, ಪ್ರಯಾಣಿಕ ರೈಲುಗಳ ಶೌಚಾಲಯದ ಕೆಳಭಾಗದಲ್ಲಿ ಇದನ್ನು ಅಳವಡಿಸಲಾಗುವುದು.
- ಈ ಶೌಚಾಲಯಗಳನ್ನು ಮಾನವ ತ್ಯಾಜ್ಯವು ಬಯೋಡೈಜಸ್ಟರ್ ನಲ್ಲಿ ಸಂಗ್ರಹಣೆಗೊಂಡು, ಜೈವಿಕ ವಿಘಟನೆ ಮಾಡಬಲ್ಲ ಬ್ಯಾಕ್ಟೀರಿಯಾಗಳಿಂದ ಘನ ತ್ಯಾಜ್ಯವನ್ನು ಅನಿಲ ಮತ್ತು ಜಲರೂಪಕ್ಕೆ ಪರಿವರ್ತಿಸಲಾಗುವುದು. ಇದರಿಂದ ರೈಲು ನಿಲ್ದಾಣಗಳಲ್ಲಿ ದುರ್ಗಂಧ ತಡೆಯುವುದಲ್ಲದೇ, ಸ್ವಚ್ಚತೆ ಮತ್ತು ಸುರಕ್ಷತೆ ಕಾಪಾಡಬಹುದಾಗಿದೆ.
- ಜೈವಿಕ ಶೌಚಾಲಯವನ್ನು ಭಾರತೀಯ ರೈಲ್ವೆ ಮತ್ತು DRDO ಜಂಟಿಯಾಗಿ ವಿನ್ಯಾಸಗೊಳಿಸಿವೆ.

## ಸ್ಮಾರ್ಟ್ ರೈಲು ನಿಲ್ದಾಣ ಅಭಿವೃದ್ಧಿ ರೈಲ್ವೆ ಸಚಿವಾಲಯ ಒಪ್ಪಂದ

ದೇಶದಲ್ಲಿ ಸ್ಮಾರ್ಟ್ ರೈಲು ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಕೇಂದ್ರ ರೈಲ್ವೆ ಸಚಿವಾಲಯ ಮತ್ತು ಕೇಂದ್ರ ನಗರಾಭಿವೃದ್ಧಿ ಸಚಿವಾಲಯ ಒಪ್ಪಂದಕ್ಕೆ ಸಹಿಹಾಕಿವೆ. ಈ ಒಪ್ಪಂದ ಐದು ವರ್ಷಗಳ ವರೆಗೆ ಇರಲಿದ್ದು, ಎರಡು ಸಚಿವಾಲಯಗಳ ಸಮ್ಮತಿ ಮೇರೆಗೆ ವಿಸ್ತರಿಸಬಹುದಾಗಿದೆ.

**ಒಪ್ಪಂದದ ಪ್ರಮುಖಂಶಗಳು**:

- ಒಪ್ಪಂದದಡಿ ರೈಲು ನಿಲ್ದಾಣ ಮತ್ತು ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ಮಾರ್ಟ್ ನಗರ ಯೋಜನೆಯಡಿ ಅಭಿವೃದ್ಧಿಪಡಿಸಲಾಗುವುದು.
- ದೇಶದ 500 ರೈಲು ನಿಲ್ದಾಣಗಳನ್ನು ಉತ್ತಮ ಪ್ರಯಾಣಿಕರ ಸೌಕರ್ಯ, ಸಮಗ್ರ ಸಾರಿಗೆ ಕೇಂದ್ರ ಮತ್ತು ಸುಲಭ ಬಳಕೆ ನಿಲ್ದಾಣಗಳಾಗಿ ಪರಿವರ್ತಿಸಲಾಗುವುದು.

www.karunaduexams.com

- ಪ್ರಾರಂಭಿಕವಾಗಿ 100 ರೈಲು ನಿಲ್ದಾಣಗಳು ಮತ್ತು ಅವುಗಳ ಸುತ್ತಲಿನ 300-800 ಎಕರೆ ಪ್ರದೇಶಗಳನ್ನು ಸ್ಮಾರ್ಟ್ ನಗರ ಹಾಗೂ ಅಮೃತ್ ಯೋಜನೆಯಡಿ ಪುನರ್ ಅಭಿವೃದ್ಧಿಪಡಿಸಲಾಗುವುದು. ಆನಂತರ ಒಪ್ಪಂದವನ್ನು 500 ನಿಲ್ದಾಣಗಳಿಗೆ ವಿಸ್ತರಿಸಲಾಗುವುದು.
- ಜರ್ಮನಿ, ಫ್ರಾನ್ಸ್, ದಕ್ಷಿಣ ಕೊರಿಯಾ, ಯುಕೆ ಮತ್ತು ಬೆಲ್ಜಿಯಂ ರಾಷ್ಟ್ರಗಳ ಸ್ಮಾರ್ಟ್ ರೈಲು ನಿಲ್ದಾಣ ಅಭಿವೃದ್ಧಿಗೆ ಆಸಕ್ತಿ ತೋರಿವೆ.

**ಪ್ರೊಟೀನ್ ಭರಿತ ಭತ್ತದ ತಳಿ ಅಭಿವೃದ್ಧಿಪಡಿಸಿದ ಐಜಿಕೆವಿ, ಚತ್ತೀಸಗರ್**

ಚತ್ತೀಸಗರ್ ಮೂಲದ ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧಕರು ಪ್ರೊಟೀನ್ ಭರಿತ ಭತ್ತದ ತಳಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಹೊಸದಾಗಿ ಸಂಶೋಧಿಸಿರುವ ಭತ್ತದ ತಳಿಯಲ್ಲಿ ಪ್ರಸಿದ್ದ ಭತ್ತ ತಳಿಗಿಂತ ಶೇ 10% ಹೆಚ್ಚು ಪ್ರೊಟೀನ್ ಮತ್ತು 30 ಪಿಪಿಎಂ ಅಧಿಕ್ ಜಿಂಕ್ ಇರುವುದಾಗಿ ಸಂಶೋಧಕರು ಹೇಳಿದ್ದಾರೆ.

- ಐಜಿಕೆವಿಯ ಪ್ಲಾಂಟ್ ಮಾಲಿಕ್ಯುಲರ್ ಬಯಾಲಜಿ ಮತ್ತು ಬಯೋಟೆಕ್ನಾಲಜಿ ವಿಭಾಗದ ಸಂಶೋಧಕರು ಈ ಭತ್ತದ ತಳಿಯನ್ನು ಅಭಿವೃದ್ಧಿಪಡಿಸಿದ್ದಾರೆ.
- ಸುಮಾರು ಏಳು ವರ್ಷಗಳ ಸುದೀರ್ಘ ಸಂಶೋಧನೆ ನಂತರ ಅಧಿಕ ಪ್ರೊಟೀನ್ ಮತ್ತು ಜಿಂಕ್ ಇರುವ ಭತ್ತದ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ.
- ಈ ಸಂಶೋಧನೆಯು ಚತ್ತೀಸಗರದ ಬುಡಕಟ್ಟು ಜನಾಂಗದಲ್ಲಿ ಪ್ರೊಟೀನ್ ಕೊರತೆಯಿಂದ ಬಳಲುತ್ತಿರುವ ಅಪೌಷ್ಠಿಕ ಮಕ್ಕಳಿಗೆ ವರದಾನವಾಗಲಿದೆ.
- ಈ ಮುಂಚೆ ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾಲಯ, ರಾಯ್ಪುರ ಸಂಶೋಧಕರು ಜಿಂಕ್ (ಸತು) ವರ್ಧಿತ ಭತ್ತದ ತಳಿಯಾದ "ಚತ್ತೀಸ್ ಗರ್ ಜಿಂಕ್ ರೈಸ್-1" ಅನ್ನು ಅಭಿವೃದ್ಧಿಪಡಿಸಿದ್ದರು. ಇದು ದೇಶದ ಮೊದಲ ಸತು ವರ್ಧಿತ ತಳಿ.

**ಸತುವಿನ ಮಹತ್ವ:**

- ಜಿಂಕ್ ಅಥವಾ ಸತು ಮಾನವ ದೇಹಕ್ಕೆ ಅತ್ಯಂತ ಪ್ರಮುಖವಾಗಿ ಬೇಕಾಗಿದ್ದು, ಸುಮಾರು 300 ಕ್ಕೂ ಹೆಚ್ಚು ಕಿಣ್ವಗಳು ತಮ್ಮ ಕ್ರಿಯೆಯನ್ನು ಸರಾಗವಾಗಿ ನಿರ್ವಹಿಸಲು ಸತುವಿನ ಮೇಲೆ ಅವಲಂಭಿತವಾಗಿವೆ.
- ದೇಹದ ಪ್ರತಿರಕ್ಷಕ ವ್ಯವಸ್ಥೆಗೆ ಜಿಂಕ್ ಅತ್ಯಗತ್ಯ. ಸಣ್ಣ ಮಟ್ಟದಲ್ಲಿ ಸತುವಿನ ಅವಶ್ಯಕತೆ ದೇಹಕ್ಕಿದೆ ಆದರೆ ಸಾಮಾನ್ಯ ಮಟ್ಟಕ್ಕಿಂತ ಕೆಳಗೆ ಕುಸಿದರೆ ಕುಂಠಿತ ಬೆಳವಣಿಗೆ, ಅತಿಸಾರ, ಕಣ್ಣು ಮತ್ತು ಚರ್ಮದ ಗಾಯಗಳು ಹಾಗೂ ಹಸಿವಾಗದಿರುವ ತೊಂದರೆಗೆ ಕಾರಣವಾಗುತ್ತದೆ.

**ಪ್ರಾದೇಶಿಕ ಸಂಪರ್ಕ ಯೋಜನೆ "ಉಡಾನ್"ಗೆ ಕೇಂದ್ರ ಸರ್ಕಾರ ಚಾಲನೆ**

ಸಣ್ಣಪುಟ್ಟ ನಗರಗಳಿಗೆ ವಿಮಾನಯಾನ ಸಂಪರ್ಕ ಕಲ್ಪಿಸಲು ಹಾಗೂ ಜನಸಾಮಾನ್ಯರಿಗೆ ವಿಮಾನ ಸಂಚಾರ ಭಾಗ್ಯ ಒದಗಿಸಲು ಉಡಾನ್ (ಉಡೇ ದೇಶ್ ಕಾ ಆಮ್ ನಾಗರಿಕ್) ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಕೇಂದ್ರ ನಾಗರಿಕ ವಿಮಾನಯಾನ ಸಚಿವ ಅಶೋಕ್ ಗಣಪತಿ ರಾಜು ಅವರು ನವದೆಹಲಿಯಲ್ಲಿ ಈ ಯೋಜನೆಗೆ ಚಾಲನೆ ನೀಡಿದರು. ಜನವರಿ 2017ರಿಂದ ಈ ಯೋಜನೆ ಅಧಿಕೃತವಾಗಿ ಜಾರಿಗೆ ಬರಲಿದ್ದು, 10 ವರ್ಷಗಳ ಅವಧಿಗೆ ಜಾರಿಯಲ್ಲಿ ಇರಲಿದೆ.

**ಉಡಾನ್ ಯೋಜನೆಯ ಪ್ರಮುಖಾಂಶಗಳು**:

- ಉಡಾನ್ (ಉಡೇ ದೇಶ್ ಕಾ ಆಮ್ ನಾಗರಿಕ್- ಜನಸಾಮಾನ್ಯರ ವಿಮಾನ ಹಾರಾಟಕ್ಕೆ ನೆರವು) ಯೋಜನೆಯಡಿ ಕೇಂದ್ರ ಸರ್ಕಾರ, ಬಳಕೆಯಾಗದ ಅಥವಾ ಕಡಿಮೆ ಬಳಕೆಯಾಗುತ್ತಿರುವ ವಿಮಾನ ನಿಲ್ದಾಣಗಳನ್ನು ಗುರುತಿಸಲಿದೆ.



www.karunaduexams.com

- ವಿಶ್ವದಲ್ಲೇ ಮೊದಲು ಎನ್ನಲಾದ ಈ ಯೋಜನೆಯಡಿ ಪ್ರಾದೇಶಿಕ ವಿಮಾನಯಾನ ಸಂಪರ್ಕ ಅಭಿವೃದ್ಧಿಪಡಿಸುವುದು ಹಾಗೂ ಬೆಳವಣಿಗೆ ಖಚಿತಪಡಿಸಿಕೊಳ್ಳಲಾಗುವುದು. 2022ರ ವೇಳೆಗೆ ಟಿಕೆಟ್ ಪರಿಮಾಣವನ್ನು ಪ್ರಸ್ತುತ ಇರುವ 80 ಮಿಲಿಯನ್ ನಿಂದ 300 ಮಿಲಿಯನ್ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ.
- ಈ ಯೋಜನೆಯಲ್ಲಿ ಸಣ್ಣ ನಗರಗಳ ಮಧ್ಯೆ 9 ರಿಂದ 40 ಸೀಟುಗಳಿರುವ ಪುಟ್ಟ ವಿಮಾನಗಳು ಹಾರಾಟ ನಡೆಸಲಿವೆ. ಈ ಸೀಟುಗಳಲ್ಲಿ ಅರ್ಧದಷ್ಟು ಸೀಟುಗಳಿಗೆ ಮಾತ್ರ ಪ್ರಯಾಣ ದರ ಗರಿಷ್ಠ ರು. 2.500 ಆಗಲಿದೆ. ಇನ್ನುಳಿದ ಸೀಟುಗಳಿಗೆ ನಿಗದಿತ ಪ್ರಯಾಣ ದರ ನೀಡಬೇಕಾಗುತ್ತದೆ.
- ಗರಿಷ್ಠ 2500 ರೂ. ದರ ನಿಗದಿಯಿಂದ ವಿಮಾನ ಕಂಪನಿಗಳ ಆದಾಯ ಖೋತಾ ಆದರೆ ವ್ಯತ್ಯಾಸದ ಮೊತ್ತವನ್ನು ಸರ್ಕಾರ ಭರಿಸಲಿದೆ.
- ಇದಕ್ಕಾಗಿ ವಿಮಾನ ಪ್ರಯಾಣಿಕರ ಮೇಲೆ ಶೇ.2ರಷ್ಟು ಸೆಸ್ ವಿಧಿಸುವ ಅಥವಾ ಪ್ರಮುಖ ನಿಲ್ದಾಣಗಳಲ್ಲಿ ಇಳಿಯುವ ವಿಮಾನಗಳಿಂದ ಪ್ರತಿ ಬಾರಿಗೆ 8 ಸಾವಿರ ರೂ. ಸಂಗ್ರಹಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಇದು ಅಂತಿಮವಾಗಿಲ್ಲ.
- ಇದೇ ವೇಳೆ, ಹೆಲಿಕಾಪ್ಟರ್‌ಗಳಿಗೂ ಯೋಜನೆ ಆರಂಭಿಸಲಾಗಿದ್ದು, ಮೊದಲ ಅರ್ಧ ತಾಸಿನ ಯಾನಕ್ಕೆ 2500 ರೂ. ಹಾಗೂ 1 ತಾಸಿನ ನಂತರದ ಯಾನಕ್ಕೆ ಗರಿಷ್ಠ 5000 ರೂ. ನಿಗದಿಪಡಿಸಲಾಗಿದೆ.

**ಯೋಜನೆ ಗುರಿ ಸಾಧನೆ ಹೇಗೆ?**

- ಈ ಯೋಜನೆ ಜಾರಿ ಸಲುವಾಗಿ ದೇಶದ ಪ್ರಮುಖ ಮಾರ್ಗಗಳಲ್ಲಿ ಪ್ರಯಾಣಿಸುವ ವಿಮಾನ ಪ್ರಯಾಣಿಕರಿಗೆ ಅಲ್ಪ ಪ್ರಮಾಣದ ಲೆವಿ ಹೇರಲು ಸರ್ಕಾರ ನಿರ್ಧರಿಸಿದೆ. ಹೀಗಾಗಿ ದೇಶೀಯ ಮಾರ್ಗಗಳಲ್ಲಿ ಪ್ರಯಾಣಿಸುವವರು ವಿಮಾನ ಪ್ರಯಾಣಕ್ಕೆ ಒಂದಿಷ್ಟು ಹೆಚ್ಚು ಮೊತ್ತವನ್ನು ಪಾವತಿಸಬೇಕಾಗುತ್ತದೆ. ಎಷ್ಟು ಲೆವಿ ಹೇರಬೇಕು ಎಂಬುದು ತೀರ್ಮಾನವಾಗಿಲ್ಲ. ಆದರೆ ಲೆವಿ ಸಾಧ್ಯವಾದಷ್ಟೂ ಕಡಿಮೆ ಪ್ರಮಾಣದಲ್ಲಿರುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಹಕ್ಕಿ ಜ್ವರ ನಿಯಂತ್ರಣಕ್ಕೆ ಮುನಿಯಲ್ಲಪ್ಪ ಸಮಿತಿ ರಚಿಸಿದ ಕೇಂದ್ರ ಸರ್ಕಾರ**

ದೇಶದ ಹಲವೆಡೆ ಹಕ್ಕಿ ಜ್ವರ ಪತ್ತೆಯಾಗಿರುವುದರಿಂದ ಪರಿಸ್ಥಿತಿ ನಿಭಾಯಿಸಲು ಕೇಂದ್ರ ಕೃಷಿ ಸಚಿವಾಲಯ ಉನ್ನತಮಟ್ಟದ ಸಮಿತಿ ರಚಿಸಿದೆ. ಪಶುಸಂಗೋಪನೆ, ಡೈರಿ ಮತ್ತು ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಮುನಿಯಲ್ಲಪ್ಪರವರು ಸಮಿತಿಯ ಅಧ್ಯಕ್ಷತೆಯನ್ನು ವಹಿಸಿದ್ದಾರೆ.

- ಕೇಂದ್ರ ಆರೋಗ್ಯ ಸಚಿವಾಲಯ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಕೃಷಿ ಸಂಶೋಧನೆ ಮತ್ತು ವಿಸ್ತರಣೆ ಇಲಾಖೆ ಹಾಗೂ ದೆಹಲಿ ಸರ್ಕಾರದ ಪ್ರತಿನಿಧಿಗಳು ಸಮಿತಿಯ ಇತರೆ ಸದಸ್ಯರಾಗಿದ್ದಾರೆ.
- ಹಕ್ಕಿ ಜ್ವರ ನಿಯಂತ್ರಿಸುವುದಲ್ಲದೇ, ರಾಜ್ಯ ಸರ್ಕಾರಗಳಿಗೆ ಹಕ್ಕಿ ಜ್ವರ ಹರಡದಂತೆ ನೋಡಿಕೊಳ್ಳಲು ಸಮಿತಿ ನೆರವಾಗಲಿದೆ.

**ಹಿನ್ನಲೆ**:

ದೆಹಲಿಯ ನ್ಯಾಷನಲ್ ಜಿಯೋಲಾಜಿಕಲ್ ಪಾರ್ಕ್, ಕೇರಳ ಮತ್ತು ಮಧ್ಯಪ್ರದೇಶದ ಗ್ವಾಲಿಯರ್ ನಲ್ಲಿ ಹಕ್ಕಿ ಜ್ವರ (H5N1) ವರದಿಯಾದ ಹಿನ್ನಲೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ .

**ಹಕ್ಕಿ ಜ್ವರ**: ವೈಜ್ಞಾನಿಕವಾಗಿ ಹಕ್ಕಿ ಜ್ವರವನ್ನು ಹಕ್ಕಿ ಇನ್‌ಫ್ಲೂಯೆನ್‌ಜ ಅಥವಾ ಬರ್ಡ್ ಫ್ಲೂ ಎನ್ನುತ್ತಾರೆ. ಈ ಸೋಂಕಿಗೆ ಮುಖ್ಯ ಕಾರಣ ಎಚ್5ಎನ್1ಎಂಬ ಹೆಸರಿನ ವೈರಸ್. ಇದೊಂದು ತೀವ್ರ ಸಾಂಕ್ರಾಮಿಕ ಪಿಡುಗು.



www.karunaduexams.com

- ಅನೇಕ ಹಕ್ಕಿ ಜ್ವರ ವೈರಸ್ ವಿಧಗಳು ಮಾನವನಲ್ಲಿ ಸೋಂಕು ಉಂಟುಮಾಡುವುದಿಲ್ಲ. ಸರಿಯಾಗಿ ಬೇಯಿಸಿದ ಆಹಾರ ಸೇವಿಸುವ ಮೂಲಕ ಈ ರೋಗ ಹರಡುತ್ತದೆ ಎನ್ನುವುದಕ್ಕೆ ಸರಿಯಾದ ಪುರಾವೆಗಳು ಲಭ್ಯವಾಗಿಲ್ಲ. ಆದರೆ H5N1 ಮತ್ತು H7N9 ವೈರಣುಗಳು ಮಾನವರಲ್ಲಿ ತೀವ್ರ ಸೋಂಕನ್ನು ಹರಡಲು ಕಾರಣವಾಗಿವೆ. ಸೋಂಕಿತ ಹಕ್ಕಿ/ಕೋಳಿಗಳ ನೇರವಾಗಿ ಅಥವಾ ಪರೋಕ್ಷವಾಗಿ ಸಂಪರ್ಕಕ್ಕೆ ಬಂದಾಗ ಈ ಕಾಯಿಲೆ ಮಾನವನಲ್ಲಿ ಕಾಣಿಸಿಕೊಳ್ಳುತ್ತದೆ.

**ಹಕ್ಕಿ ಜ್ವರದ ಲಕ್ಷಣಗಳು:**

- ಹಕ್ಕಿ ಜ್ವರದ ಸೋಂಕಿಗೆ ಒಳಗಾಗುವ ವ್ಯಕ್ತಿಗಳಲ್ಲಿ 2-3 ದಿನದಲ್ಲಿ ರೋಗ ಲಕ್ಷಣಗಳು ಪ್ರಕಟವಾಗುತ್ತವೆ. ಅತಿಯಾದ ಜ್ವರ, ಕೆಮ್ಮು, ತಲೆನೋವು, ಉಸಿರಾಡಲು ತೊಂದರೆಯಾಗುವುದು ಕಾಯಿಲೆಯ ಲಕ್ಷಣಗಳು. ಎಕ್ಸ್‌ರೇ ಪರೀಕ್ಷೆಯಿಂದ ಎದೆಯಲ್ಲಿ ಉಂಟಾಗಿರುವ ಬದಲಾವಣೆಗಳು ಎದ್ದು ಕಾಣುತ್ತವೆ. ಹಕ್ಕಿ ಜ್ವರದಿಂದ ಸಾವುಂಟಾಗುವುದು ಉಸಿರಾಟ ನಿಲ್ಲುವುದರಿಂದ. ರೋಗಿಯ ಮೂಗು ಮತ್ತು ಗಂಟಲಿನ ದ್ರವವನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಿ ರೋಗ ಅಂಟಿರುವುದನ್ನು ದೃಢಪಡಿಸಿಕೊಳ್ಳಬಹುದು.

www.karunanduexams.com

# ವಿಜ್ಞಾನ-ತಂತ್ರಜ್ಞಾನ

**ಜಿಸ್ಯಾಟ್-18 ಸಂವಹನ ಉಪಗ್ರಹ ಉಡಾವಣೆ ಯಶಸ್ವಿ**

ಭಾರತದ ಅತ್ಯಾಧುನಿಕ ಸುಧಾರಿತ ಸಂವಹನ ಉಪಗ್ರಹ ಜಿಸ್ಯಾಟ್-18ನ್ನು ಫ್ರೆಂಚ್ ಗಯಾನಾದ ಕೊವುರುನಲ್ಲಿರುವ ಉಡಾವಣಾ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ. ಏರಿಯಾನ್-5 ವಿಎ-231 ರಾಕೆಟ್ ಬಳಸಿ ಈ ಉಪಗ್ರಹವನ್ನು ಕಕ್ಷೆಗೆ ಯಶಸ್ವಿಯಾಗಿ ರವಾನಿಸಲಾಯಿತು. ಭೂಸ್ಥಾಯಿ ವರ್ಗಾವಣೆ ಕಕ್ಷೆಗೆ ಜಿಸ್ಯಾಟ್-18 ಅನ್ನು ಸೇರಿಸಲಾಗಿದೆ. ಯುರೋಪ್ ಬಾಹ್ಯಕಾಶ ಸಂಸ್ಥೆಯಿಂದ ಇಸ್ರೋ ಯಶಸ್ವಿಯಾಗಿ ಉಡಾಯಿಸಿದ 20ನೇ ಉಪಗ್ರಹವಾಗಿದೆ.

**ಜಿಸ್ಯಾಟ್-18 ಪ್ರಮುಖಾಂಶ:**

- ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಸ್ವದೇಶಿ ತಂತ್ರಜ್ಞಾನ ಬಳಸಿ ನಿರ್ಮಿಸಲಾಗಿರುವ ಉಪಗ್ರಹ ಇದಾಗಿದೆ. ಇದರ ತೂಕ 3,404 ಕೆ.ಜಿ. ಈ ಉಪಗ್ರಹ 15 ವರ್ಷಗಳ ಕಾಲ ಸೇವೆ ಸಲ್ಲಿಸಲಿದೆ.
- ಜಿಸ್ಯಾಟ್ ಉಪಗ್ರಹ 48 ಸಂವಹನ ಟ್ರಾನ್ಸ್ಪಂಡರ್ ಗಳನ್ನು ಒಳಗೊಂಡಿದೆ.
- ಈ ಟ್ರಾನ್ಸ್ಪಂಡರ್ ಗಳು ಜಿಸ್ಯಾಟ್ ಸಿ-ಬ್ಯಾಂಡ್, ಕೆ.ಯು. ಬ್ಯಾಂಡ್‌ಗಳಲ್ಲಿ ಸೇವೆ ಒದಗಿಸಲಿದೆ.
- ಜಿಸ್ಯಾಟ್-18 ಉಪಗ್ರಹವು ದೂರದರ್ಶನ, ದೂರಸಂಪರ್ಕ ಸೇರಿದಂತೆ ಡಿಜಿಟಲ್ ಉಪಗ್ರಹ ಸೇವೆಯನ್ನು ನೀಡಲಿದೆ.
- ಇಸ್ರೋ ನಿರ್ಮಿಸಿರುವ ಜಿಸ್ಯಾಟ್-18 ಉಪಗ್ರಹ ಅತ್ಯಾದುನಿಕ ಸಂವಹನ ಉಪಗ್ರಹವಾಗಿದ್ದು, ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ 14 ಸಂವಹನ ಉಪಗ್ರಹಗಳೊಂದಿಗೆ ಸೇವೆ ಸಲ್ಲಿಸಲಿದೆ.

**ಹಿಮಾಂಶು: ದೇಶದ ಅತಿ ಎತ್ತರದ ಹಿಮನದಿ ಸಂಶೋಧನಾ ಕೇಂದ್ರ ಆರಂಭ**

ಹಿಮಾಲಯದಲ್ಲಿ ಸ್ಥಾಪಿಸಲಾಗಿರುವ ದೇಶದ ಅತಿ ಎತ್ತರದ ಹಿಮನದಿ ಸಂಶೋಧನಾ ಕೇಂದ್ರ ಹಿಮಾಂಶು (Himamshu) ತನ್ನ ಕೆಲಸವನ್ನು ಆರಂಭಿಸಿತು. 13,500 ಮೀಟರ್ ಎತ್ತರವಿರುವ ಹಿಮಾಚಲ ಪ್ರದೇಶದ ಸ್ಪಿತಿಯಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಸಂಶೋಧಕರಿಗೆ ಹಿಮನದಿ ಚಲನೆ ಮತ್ತು ಹಿಮ ಹೊದಿಕೆ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸಲು ಈ ಕೇಂದ್ರ ಸಹಕಾರಿಯಾಗಲಿದೆ.

**ಪ್ರಮುಖಾಂಶಗಳು**:

- ಹಿಮನದಿ ಮತ್ತು ಅವುಗಳ ಕೊಡುಗೆ ಬಗ್ಗೆ ವೈಜ್ಞಾನಿಕವಾಗಿ ಸಂಶೋಧನೆ ನಡೆಸಲು ಮಹತ್ವದ ಕೊಡುಗೆಯನ್ನು ಈ ಸಂಶೋಧನಾ ಕೇಂದ್ರ ನೀಡಲಿದೆ.
- ಈ ಸಂಶೋಧನಾ ಕೇಂದ್ರವನ್ನು ನ್ಯಾಷನಲ್ ಸೆಂಟರ್ ಫಾರ್ ಅಂಟಾರ್ಟಿಕ್ ಅಂಡ್ ಓಷನ್ ರೀಸರ್ಚ್ (ಎನ್‌ಸಿಎಓಆರ್) ಸ್ಪಿತಿ ಕಣಿವೆಯಲ್ಲಿ ಸ್ಥಾಪಿಸಿದೆ. ಸ್ಪಿತಿ ಕಣಿವೆ ದೇಶದ ಅತ್ಯಂತ ನಿರ್ಜನ ಪ್ರದೇಶಗಳಲ್ಲಿ ಒಂದಾಗಿದೆ.
- ಹಿಮನದಿ ಕರಗುವಿಕೆ ಮತ್ತು ಹವಾಮಾನ ಬದಲಾವಣೆಗೆ ಇರುವ ಸಂಬಂಧವನ್ನು ಅಧ್ಯಯನ ನಡೆಸಲು ಉಪಕರಣಗಳನ್ನು ಈ ಕೇಂದ್ರದಲ್ಲಿ ಅಳವಡಿಸಲಾಗಿದೆ.
- ಸ್ವಯಂಚಾಲಿತ ಹವಾಮಾನ ಕೇಂದ್ರಗಳು, ಗ್ರೌಂಡ್ ಪೆನೆಟ್ರೇಟಿಂಗ್ ರಾಡಾರ್‌ಗಳು, ಜಿಯೊಡೆಟಿಕ್ ಜಿಪಿಎಸ್ ವ್ಯವಸ್ಥೆ ಹಾಗೂ ಇತರ ಅತ್ಯಾಧುನಿಕ ಸೌಲಭ್ಯಗಳನ್ನು ಈ ಸಂಶೋಧನಾ ಕೇಂದ್ರ ಒಳಗೊಂಡಿದೆ.

**ಈ ಕೇಂದ್ರದ ಮಹತ್ವ:**

- ಹಿಮಾಲಯ ಭಾಗವು ಧ್ರುವ ಪ್ರದೇಶಗಳನ್ನು ಹೊರತುಪಡಿಸಿದರೆ ಅತಿ ಹೆಚ್ಚು ಹಿಮದಟ್ಟಣೆಯನ್ನು ಹೊಂದಿರುವ ಪ್ರದೇಶವಾಗಿದೆ. ಅದಕ್ಕಾಗಿ ಈ ಭಾಗವನ್ನು "ಏಷ್ಯಾದ ವಾಟರ್ ಟವರ್" ಎಂದು ಕರೆಯಲಾಗುತ್ತದೆ.

www.karunadu

- ಹತ್ತು ಪ್ರಮುಖ ನದಿಗಳಿಗೆ ಈ ಭಾಗ ಮೂಲ ಸ್ಥಳವಾಗಿದೆ. ಈ ನದಿಗಳು ಭಾರತ, ಪಾಕಿಸ್ತಾನ ಮತ್ತು ಬಾಂಗ್ಲದೇಶದ ಸುಮಾರು 70 ಕೋಟಿ ಜನರಿಗೆ ಕುಡಿಯುವ ನೀರು, ನೀರಾವರಿ ವ್ಯವಸ್ಥೆ ಮತ್ತು ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಿವೆ.
- ಆದ್ದರಿಂದ ಈ ಹಿಮನದಿಗಳ ಬಗ್ಗೆ ಅಧ್ಯಯನ ಮಾಡುವುದು ಅತ್ಯಂತ ಪ್ರಮುಖವಾಗಿದೆ.

**ಜೈಪುರದಲ್ಲಿ 4ನೇ ಬ್ರಿಕ್ಸ್ ವಿಜ್ಞಾನ, ತಂತ್ರಜ್ಞಾನ ಮತ್ತು ಅನುಶೋಧನಾ ಅಧಿಕಾರಿಗಳ ಸಭೆ**

ಬ್ರಿಕ್ಸ್ ರಾಷ್ಟ್ರಗಳ 4ನೇ ವಿಜ್ಞಾನ, ತಂತ್ರಜ್ಞಾನ ಮತ್ತು ಅನುಶೋಧನಾ ಕುರಿತಾದ ಅಧಿಕಾರಿಗಳ ಸಭೆ ರಾಜಸ್ತಾನದ ಜೈಪುರದಲ್ಲಿ ನಡೆಯಿತು. ವಿಜ್ಞಾನ, ತಂತ್ರಜ್ಞಾನ ಮತ್ತು ಅನುಶೋಧನಾ ಕ್ಷೇತ್ರಗಳಲ್ಲಿ ಬ್ರಿಕ್ಸ್ ರಾಷ್ಟ್ರಗಳ ನಡುವೆ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಈ ಸಭೆಯನ್ನು ಆಯೋಜಿಸಲಾಗಿತ್ತು.

- ಭವಿಷ್ಯದಲ್ಲಿ ತಂತ್ರಜ್ಞಾನದ ಪ್ರಗತಿ ಮತ್ತು ಸಹಕಾರದ ಬಗ್ಗೆ ಚರ್ಚಿಸಲು ಹಾಗೂ ಆದ್ಯತೆಗಳನ್ನು ನಿಗದಿಪಡಿಸುವ ಬಗ್ಗೆ ಇದರಲ್ಲಿ ಚರ್ಚಿಸಲಾಯಿತು.
- ವಿಜ್ಞಾನ, ತಂತ್ರಜ್ಞಾನ ಹಾಗೂ ಅನುಶೋಧನಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಎಲ್ಲ ದೇಶಗಳು ಜಂಟಿ ಕ್ರಿಯಾಯೋಜನೆಯನ್ನು ತಯಾರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.
- ಭಾರತ ಪ್ರಸ್ತಾಪಿಸಿರುವ ಬ್ರಿಕ್ಸ್ ವಿಜ್ಞಾನ ಮತ್ತು ತಂತ್ರಜ್ಞಾನ ಉದ್ದಿಮೆ ಮತ್ತು ಪಾಲುಗಾರಿಕೆ ಕಾರ್ಯಕ್ರಮದ ಮೂಲಕ ಯುವ ವಿಜ್ಞಾನಿಗಳ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಪ್ರಸ್ತಾವನೆಗೆ ಸಭೆಯಲ್ಲಿ ಸಮ್ಮತಿ ನೀಡಲಾಯಿತು.

**ಅಕ್ರಮ ಗಣಿಗಾರಿಕೆ ತಡೆಯಲು ಉಪಗ್ರಹ ಆಧಾರಿತ “ಮೈನಿಂಗ್ ಸರ್ವೇಲನ್ಸ್ ಸಿಸ್ಟಮ್” ಜಾರಿ**

ಉಪಗ್ರಹ ತಂತ್ರಜ್ಞಾನ ಬಳಸಿಕೊಂಡು ಅಕ್ರಮ ಗಣಿಗಾರಿಕೆ ತಡೆಯು ಸಲುವಾಗಿ ಮೈನಿಂಗ್ ಸರ್ವೇಲನ್ಸ್ ಸಿಸ್ಟಮ್ (Mining Surveillance System) ಅನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಮೈನಿಂಗ್ ಸರ್ವೇಲನ್ಸ್ ಸಿಸ್ಟಮ್ ಒಂದು ಉಪಗ್ರಹ ಕಣ್ಗಾವಲು ವ್ಯವಸ್ಥೆಯಾಗಿದ್ದು, ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನ ಬಳಸಿ ಅಕ್ರಮ ಗಣಿಗಾರಿಕೆ ಮೇಲೆ ನಿಗಾ ಇಡುವ ಮೂಲಕ ತಮೂಲಕ ಅಕ್ರಮ ಗಣಿಗಾರಿಕೆ ತಡೆಗೆ ಸಹಕಾರಿಯಾಗಲಿದೆ.

**ಮೈನಿಂಗ್ ಸರ್ವೇಲನ್ಸ್ ಸಿಸ್ಟಮ್:**

- ಮೈನಿಂಗ್ ಸರ್ವೇಲನ್ಸ್ ಸಿಸ್ಟಮ್ ಅನ್ನು ಭಾರತೀಯ ಗಣಿಗಾರಿಕೆ ದಳವು (ಇಂಡಿಯನ್ ಬ್ಯೂರೋ ಆಫ್ ಮೈನ್ಸ್) ಭಾಸ್ಕರಚಾರ್ಯ ಇನ್ಸ್ಟಿಟೂಟ್ ಫಾರ್ ಸ್ಪೇಸ್ ಅಪ್ಲಿಕೇಷನ್ ಅಂಡ್ ಜಿಯೋ-ಇನ್ ಫಾರಮೆಟಿಕ್ಸ್ ಜೊತೆಗೂಡಿ ಅಭಿವೃದ್ದಿಪಡಿಸಿದೆ.
- ವಿಶ್ವದಲ್ಲೇ ಮೊದಲ ಬಾರಿಗೆ ಇಂತಹ ವ್ಯವಸ್ಥೆಯನ್ನು ಅಭಿವೃದ್ದಿಪಡಿಸಲಾಗಿದ್ದು, ಡಿಜಿಟಲ್ ಇಂಡಿಯಾ ಕಾರ್ಯಕ್ರಮದಡಿ ಅಭಿವೃದ್ದಿಪಡಿಸಲಾಗಿದೆ.

**ಈ ವ್ಯವಸ್ಥೆ ಅವಶ್ಯಕತೆ ಯಾಕೆ?**

- ದೇಶದಲ್ಲಿ ಸುಮಾರು 3843 ಖನಿಜ ಪ್ರದೇಶಗಳನ್ನು ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ. ಇವುಗಳ ಪೈಕಿ 1710 ಪ್ರದೇಶಗಳಲ್ಲಿ ಮಾತ್ರ ಗಣಿಗಾರಿಕೆ ನಡೆಯುತ್ತಿದ್ದು, ಉಳಿದವುಗಳು ಸ್ಥಗಿತಗೊಂಡಿವೆ. ಪ್ರಸ್ತುತ ಈ ಗಣಿಗಾರಿಕೆಗಳ ಮೇಲೆ ನಿಗಾ ಇಡಲು ಯಾವುದೇ ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಜಾರಿಯಲಿಲ್ಲ. ಸ್ಥಳೀಯವಾಗಿ ನೀಡಲಾಗುವ ದೂರುಗಳ

ಅನ್ವಯ ಅಕ್ರಮ ಗಣಿಗಾರಿಕೆ ಮೇಲೆ ನಿಗಾ ಇಡಲಾಗುತ್ತಿದೆ. ಆದ್ದರಿಂದ ಉಪಗ್ರಹ ಆಧಾರಿತ ಈ ವ್ಯವಸ್ಥೆ ಬಹು ಮುಖ್ಯವಾಗಿದೆ.

**ಕಾರ್ಯನಿರ್ವಹಣೆ ಹೇಗೆ?**

- ಸ್ವಯಂಚಾಲಿತ ದೂರ ಸಂವೇದಿ ಜಾಲದ ನೆರವಿನೊಂದಿಗೆ ಅಕ್ರಮ ಗಣಿಗಾರಿಕೆಯನ್ನು ಪತ್ತೆ ಹಚ್ಚುವ ಈ ವ್ಯವಸ್ಥೆಯು, ಗಣಿಗಾರಿಕೆಗೆ ಅನುಮತಿ ನೀಡಿರುವ ಪ್ರದೇಶದಲ್ಲಿ ಹಾಗೂ ಆ ಪ್ರದೇಶ ಹೊರತುಪಡಿಸಿಯೂ ಒತ್ತುವರಿ ಮೂಲಕ ನಡೆಸಲಾಗುವ ಅಕ್ರಮ ಗಣಿ ಚಟುವಟಿಕೆ ಮೇಲೂ ನಿಗಾ ಇರಿಸಲಿದೆ. ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ವ್ಯಾಪಕ ಅಕ್ರಮ ಗಣಿಗಾರಿಕೆಯಂತಹ ಚಟುವಟಿಕೆ ಮರುಕಳಿಸದಂತೆ ಈ ವ್ಯವಸ್ಥೆ ತಡೆಯಲಿದೆ.
- ಈ ವಿನೂತನ ತಂತ್ರಜ್ಞಾನದಿಂದ ಗಣಿ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರ ಸಂಪೂರ್ಣ ವಿವರವನ್ನೂ ಆನ್‌ಲೈನ್ ಮೂಲಕವೇ ಪಡೆಯಲು, ಕಾರ್ಮಿಕರ ಸುರಕ್ಷತೆಗೂ ಅಗತ್ಯ ಕ್ರಮ ಕೈಗೊಳ್ಳುವಂತೆ ಗಣಿ ಗುತ್ತಿಗೆದಾರರಿಗೆ ಸೂಚಿಸಲು ಸಹಕಾರಿಯಾಗಲಿದೆ.
- ಗುತ್ತಿಗೆ ನೀಡಲಾದ ಪ್ರದೇಶ ಹಾಗೂ ಸುತ್ತಮುತ್ತಲಿನ 500 ಮೀಟರ್ ವ್ಯಾಪ್ತಿಯಲ್ಲಿ ಅಕ್ರಮ ಚಟುವಟಿಕೆಗಳು ಕಂಡುಬಂದಲ್ಲಿ ಐಬಿಎಂ ಅಧಿಕಾರಿಗಳು ಕ್ರಮಕ್ಕಾಗಿ ತಕ್ಷಣವೇ ಕಾರ್ಯ ಪ್ರವೃತ್ತರಾಗಲಿದ್ದಾರೆ.
- ಆಯಾ ರಾಜ್ಯಗಳ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳಿಗೂ ಈ ಅಕ್ರಮದ ಮಾಹಿತಿ ಕೂಡಲೇ ರವಾನೆಯಾಗಲಿದೆ.
- ಗಣಿಗಾರಿಕೆ ಇರುವ ಪ್ರದೇಶಗಳ ಡಿಜಿಟಲ್ ನಕ್ಷೆಯನ್ನು ಈಗಾಗಲೇ ಉಪಗ್ರಹ ಕಣ್ಗಾವಲು ವ್ಯವಸ್ಥೆ ಅಡಿ ಅಳವಡಿಸಲಾಗಿದ್ದು, ಸ್ಥಗಿತಗೊಂಡಿರುವ ಗಣಿ ಪ್ರದೇಶಗಳ ನಕ್ಷೆಯನ್ನೂ ಮುಂದಿನ ಮೂರು ತಿಂಗಳ ಅವಧಿಯಲ್ಲಿ ಹಂತಹಂತವಾಗಿ ಅಳವಡಿಸಲಾಗುವುದು.

**ಅಶೋಕ್ ಲೇಲ್ಯಾಂಡ್ ನಿಂದ ದೇಶದ ಮೊದಲ ವಿದ್ಯುತ್‌ಚಾಲಿತ ಬಸ್**

ಹಿಂದುಜಾ ಸಮೂಹದ ಅಶೋಕ್ ಲೇಲ್ಯಾಂಡ್, ಸಂಪೂರ್ಣವಾಗಿ ಸ್ವದೇಶಿ ತಂತ್ರಜ್ಞಾನದಲ್ಲಿ ತಯಾರಿಸಲಾಗಿರುವ ದೇಶದ ಮೊದಲ ವಿದ್ಯುತ್ ಚಾಲಿತ ಬಸ್ ನಿರ್ಮಿಸಿದೆ. ಈ ವಿದ್ಯುತ್ ಬಸ್ ಪರಿಸರ ಸ್ನೇಹಿಯಾಗಿದ್ದು, 0% ಹೊಗೆ ಹೂಗುಳುತ್ತದೆ. ಕೇಂದ್ರ ಸರ್ಕಾರ 2013 ರಲ್ಲಿ ಜಾರಿಗೆ ತಂದ 'ನ್ಯಾಷನಲ್ ಎಲೆಕ್ಟ್ರಿಕ್ ಮೊಬಿಲಿಟಿ ಮಿಷನ್' ಎಂಬ ಕಾರ್ಯಕ್ರಮದಡಿ ಅಭಿವೃದ್ಧಿಪಡಿಸಲಾಗಿದೆ. 2020ರ ವೇಳೆಗೆ ದೇಶದಲ್ಲಿರುವ ಒಟ್ಟು ವಾಹನಗಳಲ್ಲಿ ಕನಿಷ್ಠ ಶೇ 20ರಷ್ಟು ವಾಹನಗಳು ಹೈಬ್ರಿಡ್ ಇಲ್ಲವೇ ಎಲೆಕ್ಟ್ರಿಕ್ ವಾಹನಗಳಾಗಿರಬೇಕು ಎಂಬ ಉದ್ದೇಶ ಈ ಯೋಜನೆಯದು.

**ಪ್ರಮುಖಾಂಶಗಳು:**

- 35 ರಿಂದ 65 ಆಸನಗಳನ್ನು ಹೊಂದಿರುವ ವಿವಿಧ ಸಾಮರ್ಥ್ಯ ಬಸ್ ಗಳನ್ನು ಕಂಪನಿ ಪರಿಚಯಿಸಲಿದೆ. ಒಮ್ಮೆ ಚಾರ್ಜ್ ಮಾಡಿದರೆ 150 ಕಿ.ಮೀ ಚಲಿಸಬಲ್ಲದು.
- ವಿದ್ಯುತ್‌ಚಾಲಿತ ಬಸ್‌ನಲ್ಲಿ ಸುರಕ್ಷತೆಗೆ ಹೆಚ್ಚು ಒತ್ತು ನೀಡಲಾಗಿದೆ. ಬ್ಯಾಟರಿ ಚಾಲಿತ ಆಗಿರುವುದರಿಂದ ಸಂಭವನೀಯ ಅಗ್ನಿ ಅವಗಢ ತಡೆಯಲು ಹೆಚ್ಚು ಮುತುವರ್ಜಿ ತೋರಲಾಗಿದೆ. ಸಿಸಿಟಿವಿ ಕ್ಯಾಮೆರಾ, ವೈ ಫೈ ಸೌಲಭ್ಯ ಇದೆ.
- ಸರ್ಕಾರಿ ಸಾರಿಗೆ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಬಸ್ ಗಳನ್ನು ಹೆಚ್ಚಾಗಿ ಬಳಸುವ ಸಾಫ್ಟ್‌ವೇರ್ ಹಾಗೂ ಇತರೆ ಕಂಪೆನಿಗಳು ಈ ಬಸ್ ಅನ್ನು ಬಳಸಬಹುದಾಗಿದೆ.

www.karunaduexams.com

- ಇದರ ಜೊತೆಗೆ ರಾಜ್ಯ ಸರ್ಕಾರಿ ಸಾರಿಗೆ ಸಂಸ್ಥೆಗಳು ಈ ಬಸ್ ಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. ಇದರಿಂದ ಇಂಗಾಲ ಅಥವಾ ಹಸಿರು ಮನೆ ಅನಿಲ ಹೊರಸೂಸುವಿಕೆ ಗಣನೀಯವಾಗಿ ತಗ್ಗಲಿದೆ.

**'ನ್ಯಾಷನಲ್ ಎಲೆಕ್ಟ್ರಿಕ್ ಮೊಬಿಲಿಟಿ ಮಿಷನ್' 2020:**

- 'ನ್ಯಾಷನಲ್ ಎಲೆಕ್ಟ್ರಿಕ್ ಮೊಬಿಲಿಟಿ ಮಿಷನ್' ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿ ಕಾರ್ಯಕ್ರಮವಾಗಿದ್ದು, ಹೈಬ್ರಿಡ್ ಇಲ್ಲವೇ ಎಲೆಕ್ಟ್ರಿಕ್ ವಾಹನಗಳನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶ.
- 2020ರ ವೇಳೆಗೆ ಕನಿಷ್ಠ 6-7 ಮಿಲಿಯನ್ ಹೈಬ್ರಿಡ್ ಇಲ್ಲವೇ ಎಲೆಕ್ಟ್ರಿಕ್ ವಾಹನಗಳನ್ನು ಪರಿಚಯಿಸುವ ಗುರಿಯನ್ನು ಈ ಕಾರ್ಯಕ್ರಮದಡಿ ಹೊಂದಲಾಗಿದೆ.

**<u>ಅಣ್ವಸ್ತ್ರ ಜಲಾಂತರ್ಗಾಮಿ "ಐಎನ್ಎಸ್ ಅರಿಹಂತ್" ನೌಕಪಡೆಗೆ ಸೇರ್ಪಡೆ</u>**

ದೇಶೀಯವಾಗಿ ನಿರ್ಮಿಸಲಾದ ಮೊದಲ ಅಣ್ವಸ್ತ್ರ ಜಲಾಂತರ್ಗಾಮಿ 'ಐಎನ್ಎಸ್ ಅರಿಹಂತ್' ಅನ್ನು ನೌಕಪಡೆಗೆ ಸೇರ್ಪಡೆಗೊಳಿಸಲಾಗಿದೆ. ಆ ಮೂಲಕ ಭೂಮಿ, ಆಕಾಶ ಮತ್ತು ಸಮುದ್ರದಿಂದ ಅಣ್ವಸ್ತ್ರ ದಾಳಿ ನಡೆಸುವ ಸಾಮರ್ಥ್ಯವನ್ನು ಹೊಂದಿರುವ ವಿಶ್ವದ ನಾಲ್ಕನೇ ರಾಷ್ಟ್ರ ಭಾರತ ಎನಿಸಿದೆ. ರಷ್ಯಾ, ಅಮೆರಿಕ ಮತ್ತು ಚೀನಾ ಈ ಸಾಮರ್ಥ್ಯವನ್ನು ಹೊಂದಿರುವ ವಿಶ್ವದ ಇತರೆ ರಾಷ್ಟ್ರಗಳಾಗಿವೆ. ಆಗಸ್ಟ್ 25ರಂದು ವಿಶಾಖಪಟ್ಟಣದಲ್ಲಿ ಈ ಜಲಾಂತರ್ಗಾಮಿಯನ್ನು ನೌಕಾಪಡೆಗೆ ಸೇರ್ಪಡೆ ಮಾಡಲಾಗಿದೆ ಎಂದು ವರದಿಯಾಗಿದೆ. ಆದರೆ, ಈ ಜಲಾಂತರ್ಗಾಮಿಯನ್ನು ನೌಕಾಪಡೆಗೆ ಸೇರಿಸಿರುವ ಕುರಿತು ಯಾವುದೇ ಮಾಹಿತಿಯನ್ನು ಸರ್ಕಾರ ಬಹಿರಂಗಪಡಿಸಿರಲಿಲ್ಲ.

**"ಐಎನ್ಎಸ್ ಅರಿಹಂತ್" ಬಗ್ಗೆ:**

- ರಷ್ಯಾದ ಅಕುಲ-1 ಕ್ಲಾಸ್ ಜಲಾಂತರ್ಗಾಮಿ ಮಾದರಿಯಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ. ರಷ್ಯಾದ ಸಹಾಯದೊಂದಿಗೆ ಸುಧಾರಿತ ತಂತ್ರಜ್ಞಾನ ನೌಕೆ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ.
- ಇದರ ತೂಕ 6000 ಟನ್ ಗಳಿದ್ದು, 112 ಮೀಟರ್ ಉದ್ದವಿದೆ. 83 ಮೆಗಾ ವ್ಯಾಟ್ ಸಾಮರ್ಥ್ಯ ಲಘು ನೀರಿನ ಪರಮಾಣು ರಿಯಾಕ್ಟರ್ ಮೂಲಕ ಕಾರ್ಯನಿರ್ವಹಿಸುತ್ತದೆ.
- ಮಾಜಿ ರಾಷ್ಟ್ರಪತಿ ದಿವಂಗತ ಎಪಿಜೆ ಅಬ್ದುಲ್ ಕಲಾಂ ಅವರ ಹೆಸರು ಇರಿಸಲಾಗಿರುವ 'ಕೆ' ಸರಣಿಯ ಕ್ಷಿಪಣಿಗಳನ್ನು ಈ ಜಲಾಂತರ್ಗಾಮಿ ಹೊಂದಿದೆ.'ಕೆ-15' ಕ್ಷಿಪಣಿಗಳು 750 ಕಿಲೋ ಮೀಟರ್ ಮತ್ತು 'ಕೆ-4' ಕ್ಷಿಪಣಿಗಳು 3,500 ಕಿಲೋ ಮೀಟರ್ ದೂರವರೆಗೆ ಸಾಗಬಲ್ಲವು. 'ಕೆ-5' ಕ್ಷಿಪಣಿಗಳು ಇನ್ನೂ ಹೆಚ್ಚಿನ ಸಾಮರ್ಥ್ಯ ಹೊಂದಿವೆ. ಆದರೆ, ಈ ವಿವಿಧ ಮಾದರಿಯ ಕ್ಷಿಪಣಿಗಳನ್ನು ಅಳವಡಿಸಿರುವುದನ್ನು ನೌಕಾಪಡೆ ದೃಢಪಡಿಸಿಲ್ಲ.
- ಅಣು ಸಾಮರ್ಥ್ಯದ ಎರಡನೇ ಜಲಾಂತರ್ಗಾಮಿ 'ಐಎನ್ಎಸ್ ಅರಿಧಾನ್' ಇನ್ನೂ ನಿರ್ಮಾಣ ಹಂತದಲ್ಲಿದೆ. ಅಮೆರಿಕ, ಬ್ರಿಟನ್, ರಷ್ಯಾ, ಫ್ರಾನ್ಸ್ ಮತ್ತು ಚೀನಾ ಮಾತ್ರ ಅಣು ಸಾಮರ್ಥ್ಯದ ಜಲಾಂತರ್ಗಾಮಿಗಳನ್ನು ಹೊಂದಿವೆ.

www.karunaduexams.com

## ಮಾನವ ಸಹಿತಿ ಬಾಹ್ಯಕಾಶ ನೌಕೆಯನ್ನು ಯಶಸ್ವಿಯಾಗಿ ಉಡಾಯಿಸಿದ ಚೀನಾ

ಬಾಹ್ಯಕಾಶ ಕ್ಷೇತ್ರದಲ್ಲಿ ಚೀನಾ ದೇಶ ಮತ್ತೊಂದು ಮಹತ್ವದ ಸಾಧನೆ ಮಾಡಿದೆ. ಚೀನಾವು ಮಾನವ ಸಹಿತ ಬಾಹ್ಯಾಕಾಶ ನೌಕೆಯನ್ನು ಅಂತರಿಕ್ಷಕ್ಕೆ ಕಳುಹಿಸಿದೆ. ಇಬ್ಬರು ಗಗನಯಾತ್ರಿಗಳಾದ ಜಿಂಗ್ ಹೈಪೆಂಗ್ (50), ಚೆಂಗ್ ಡಾಂಗ್ (37) ಅವರನ್ನು ಒಳಗೊಂಡ 'ಶೆಂಝೌ-11' ಬಾಹ್ಯಾಕಾಶ ನೌಕೆಯನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ಉತ್ತರ ಚೀನಾದ ಜಿಯುಖ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಇದನ್ನು ಲಾಂಗ್ ಮಾರ್ಚ್-2ಎಫ್ ರಾಕೆಟ್ ಮೂಲಕ ಉಡಾವಣೆ ಮಾಡಲಾಯಿತು.

**ಪ್ರಮುಖಾಂಶಗಳು:**

- ಈ ಇಬ್ಬರೂ ಗಗನಯಾತ್ರಿಗಳು ಟಿಯಾಂಗಾಂಗ್-2 (Tiangong-2 (Heavenly Palace 2)) ಬಾಹ್ಯಾಕಾಶ ಪ್ರಯೋಗಾಲಯದಲ್ಲಿ 30 ದಿನ ಇರಲಿದ್ದಾರೆ. ಇಷ್ಟೊಂದು ದೀರ್ಘ ಅವಧಿಗೆ ದೇಶದ ಗಗನಯಾತ್ರಿಗಳು ಬಾಹ್ಯಾಕಾಶ ಪ್ರಯೋಗಾಲಯದಲ್ಲಿ ತಂಗಲಿರುವುದು ಇದೇ ಮೊದಲು.
- ಪ್ರಯೋಗಾಲಯದಲ್ಲಿ ಗಗನಯಾತ್ರಿಗಳು ಬಾಹ್ಯಾಕಾಶ ತಂತ್ರಜ್ಞಾನ, ವಿಜ್ಞಾನ ಮತ್ತು ಎಂಜಿನಿಯರಿಂಗ್ ಪ್ರಯೋಗಗಳನ್ನು ನಡೆಸಲಿದ್ದಾರೆ.
- ಇದೇ ಮೊದಲ ಬಾರಿಗೆ ಬಾಹ್ಯಕಾಶದಲ್ಲಿ ಅಲ್ಟ್ರಾಸೌಂಡ್ ಪರೀಕ್ಷೆಗಳನ್ನು ಕೈಗೊಳ್ಳಲಿದ್ದಾರೆ. ಅಲ್ಲದೇ ಬಾಹ್ಯಕಾಶದಲ್ಲಿ ಸಸ್ಯಗಳನ್ನು ಬೆಳೆಸುವ ಪ್ರಯೋಗವನ್ನು ಮಾಡಲಿದ್ದಾರೆ.
- "ಶೆಂಝೌ-11' ಚೀನಾದ ಆರನೇ ಮಾನವ ಸಹಿತ ಬಾಹ್ಯಕಾಶ ನೌಕೆ. ಈ ಮುಂಚೆ 2013 ರಲ್ಲಿ ಚೀನಾದ ಗಗನಯಾತ್ರಿಗಳು 15 ದಿನಗಳ ಕಾಲ ಬಾಹ್ಯಕಾಶದಲ್ಲಿ ತಂಗಿದ್ದರು.

ಗಗನಯಾತ್ರಿಗಳನ್ನು ಕಳುಹಿಸುವ ಸಲುವಾಗಿ ಬಾಹ್ಯಾಕಾಶ ಪ್ರಯೋಗಾಲಯ "ಟಿಯಾಂಗಾಂಗ್-2" ಚೀನಾ ಕಳೆದ ತಿಂಗಳು ಉಡಾವಣೆ ಮಾಡಿತ್ತು. ಸದ್ಯ ಅಮೆರಿಕ, ರಷ್ಯಾ ಮತ್ತು ಐರೋಪ್ಯ ಬಾಹ್ಯಾಕಾಶ ಸಂಸ್ಥೆಗಳು ಜಂಟಿಯಾಗಿ ಬಾಹ್ಯಾಕಾಶ ನಿಲ್ದಾಣ ಹೊಂದಿವೆ. ಇದಕ್ಕೆ ಪೈಪೋಟಿ ನೀಡುವುದು ಚೀನಾದ ಉದ್ದೇಶವಾಗಿದೆ. ಸದ್ಯ ಅಸ್ತಿತ್ವದಲ್ಲಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಕಾಲಾವಧಿ 2024ಕ್ಕೆ ಕೊನೆಗೊಳ್ಳಲಿದೆ. ಹೀಗಾಗಿ, ಚೀನಾದ ಪ್ರಯತ್ನ ಯಶಸ್ವಿಯಾದಲ್ಲಿ 2024ರ ನಂತರ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಹೊಂದಿರುವ ಏಕೈಕ ರಾಷ್ಟ್ರ ಎಬ ಹೆಗ್ಗಳಿಕೆ ಆ ರಾಷ್ಟ್ರದ್ದಾಗಲಿದೆ.

## ಕೇಂದ್ರ ಸರ್ಕಾರದಿಂದ ಬಯೋಟೆಕ್ ಕಿಸಾನ್ ಮತ್ತು ಜಾನುವಾರು ಜಿನೋಮಿಕ್ಸ್ ಯೋಜನೆ

ವಿಜ್ಞಾನ ತಂತ್ರಜ್ಞಾನ ಬಳಕೆ ಮಾಡಿಕೊಂಡು ಗ್ರಾಮೀಣ ಭಾಗದ ಆರ್ಥಿಕ ಮಟ್ಟ ಹೆಚ್ಚಿಸಲು ಕೇಂದ್ರ ಸರ್ಕಾರ ಬಯೋಟೆಕ್ ಕಿಸಾನ್ (Biotec-KISAN) ಮತ್ತು ಜಾನುವಾರು ಜಿನೋಮಿಕ್ಸ್ (Cattle Genomics) ಎಂಬ ಎರಡು ಯೋಜನೆಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ವಿಜ್ಞಾನಿಗಳು ಮತ್ತು ತಜ್ಞನರೊಂದಿಗೆ ರೈತರ ಜಾಲ ರೂಪಿಸುವುದು ಕಾರ್ಯಕ್ರಮದ ಪ್ರಮುಖ ಗುರಿ. ಆ ಮೂಲಕ ರೈತರಿಗೆ ಅದರಲ್ಲೂ ರೈತ ಮಹಿಳೆಯರಿಗೆ ಬಲ ತುಂಬುವ ಉದ್ದೇಶವನ್ನು ಹೊಂದಲಾಗಿದೆ.

**ಬಯೋಟೆಕ್ ಕಿಸಾನ್ (Krishi Innovation Science Application Network)**:

- ದೇಶದಾದ್ಯಂತ ರೈತರು, ವಿಜ್ಞಾನಿಗಳು ಮತ್ತು ವಿಜ್ಞಾನ ಕೇಂದ್ರಗಳೊಂದಿಗೆ ಸಂಪರ್ಕ ಹೊಂದಿರುವಂತೆ ಮಾಡಲು ಬಯೋಟೆಕ್ ಕಿಸಾನ್ ಜಾರಿಗೆ ತರಲಾಗಿದೆ. ಇದರಡಿ ಕೃಷಿ ಅಭ್ಯಾಸ ಮತ್ತು ತರಭೇತಿ ಪಡೆಯುವ ಪಡೆಯುವ ರೈತ ಮಹಿಳೆಯರಿಗೆ ಫೆಲೋಶಿಪ್ ನೀಡಲಾಗುವುದು.
- ಇದರಡಿ ವಿಜ್ಞಾನಿಗಳು ರೈತರೊಂದಿಗೆ ಹೆಚ್ಚು ಕಾಲ ಸಂಪರ್ಕದಲ್ಲಿ ಇರಲಿದ್ದು, ಮಣ್ಣು, ಬೀಜ, ನೀರು ಮತ್ತು ಮಾರುಕಟ್ಟೆ ಅಗತ್ಯ ಮಾಹಿತಿಯನ್ನು ನೀಡಲಿದ್ದಾರೆ.

- ಸಣ್ಣ ರೈತರ ಸಮಸ್ಯೆಗಳನ್ನು ಅರಿತುಕೊಂಡು ತ್ವರಿತವಾಗಿ ಸಲಹೆಗಳನ್ನು ನೀಡುವುದು ಈ ಯೋಜನೆಯ ಗುರಿಯಲ್ಲಿ ಒಂದಾಗಿದೆ.
- ಸ್ಥಳೀಯ ರೈತರ ಸಮಸ್ಯೆಗಳನ್ನು ಅರಿತುಕೊಂಡು ತಂತ್ರಜ್ಞಾನ ಬಳಸಿ ಸಲಹೆ ನೀಡುವ ಸಲುವಾಗಿ ಈ ಯೋಜನೆಯನ್ನು ದೇಶದ 15 ಕೃಷಿ ಹವಾಮಾನ ವಲಯಗಳಲ್ಲಿ ಹಂತ ಹಂತವಾಗಿ ಅಳವಡಿಸಲಾಗುವುದು.

**ಜಾನುವಾರು ಜಿನೋಮಿಕ್ಸ್ (Cattle Genomics) ಯೋಜನೆ:**

- ಹೆಚ್ಚು ಹಾಲು ನೀಡುವ, ರೋಗ ನಿರೋಧಕ ಹಾಗೂ ಉತ್ತಮವಾದ ಸ್ಥಳೀಯ ಜಾನುವಾರುಗಳ ಆಯ್ದ ತಳಿಗಳನ್ನು ಗುರುತಿಸಿ ಉತ್ತೇಜಿಸುವುದು ಈ ಯೋಜನೆಯ ಗುರಿ.
- ಈ ಯೋಜನೆಯಡಿ ಕೇಂದ್ರ ಸರ್ಕಾರ 40 ನೋಂದಾಯಿತ ಸ್ಥಳೀಯ ಜಾನುವಾರು ತಳಿಗಳ ವಂಶವಾಹಿ ಅನುಕ್ರಮವನ್ನು ಕ್ರೋಢಿಕರಿಸಲಿದೆ.

www.karunaduexams.com

# ಕ್ರೀಡೆ

**ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅಥ್ಲೀಟ್‌ಗಳ ಆಯೋಗದ ಸದಸ್ಯೆಯಾಗಿ ಸೈನಾ ನೆಹ್ವಲ್ ನೇಮಕ**

ಭಾರತದ ಖ್ಯಾತ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಲ್ ಅವರು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅಥ್ಲೀಟ್‌ಗಳ ಆಯೋಗದ ಸದಸ್ಯೆಯಾಗಿ ನೇಮಕವಾಗಿದ್ದಾರೆ. ಭಾರತೀಯ ಕ್ರೀಡಾಪಟು ಒಬ್ಬರಿಗೆ ಸಿಕ್ಕಿರುವ ವಿಶೇಷ ಗೌರವ ಇದಾಗಿದೆ. ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಅವರು ಸೈನಾಗೆ ಪತ್ರ ಬರೆದು ಈ ವಿಷಯವನ್ನು ತಿಳಿಸಿದ್ದಾರೆ. ಏಂಜೆಲಾ ರುಗೆಯಿರೊ ಅವರು ಆಯೋಗದ ಅಧ್ಯಕ್ಷರಾಗಿದ್ದು, ಒಂಬತ್ತು ಮಂದಿ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.  ಆಯೋಗದಲ್ಲಿ ಒಟ್ಟು ಹತ್ತು ಮಂದಿ ಸದಸ್ಯರಿದ್ದಾರೆ.

**ಸೈನಾ ನೆಹ್ವಲ್ ಬಗ್ಗೆ:**

- ಒಲಂಪಿಕ್ಸ್ ನ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು. ಸೈನಾ ಅವರು ಈ ಸಾಧನೆಯನ್ನು 2012 ಲಂಡನ್ ಒಲಂಪಿಕ್ಸ್ ನಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಮಾಡಿದರು.
- ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್ ಮತ್ತು ಇಂಡೋನೇಷಿಯಾ ಒಪನ್ ಗೆದ್ದ ಭಾರತದ ಮೊದಲ ಕ್ರೀಡಾಪಟು.
- ಕ್ರೀಡಾಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಇವರಿಗೆ 2009 ರಲ್ಲಿ ಅರ್ಜುನ ಪ್ರಶಸ್ತಿ, 2009-10 ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ, 2010 ರಲ್ಲಿ ಪದ್ಮ ಶ್ರೀ ಮತ್ತು 2016 ರಲ್ಲಿ ಪದ್ಮ ಭೂಷಣ ಪ್ರಶಸ್ತಿಯನ್ನು ನೀಡಲಾಗಿದೆ.

**ಅಂತಾರಾಷ್ಟ್ರೀಯ ಒಲಂಪಿಕ್ ಅಥ್ಲೆಟಿಕ್ ಗಳ ಆಯೋಗ ಸಮಿತಿ:**

- ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ (ಐಒಸಿ) ಅಥ್ಲೀಟ್‌ಗಳ ಆಯೋಗವನ್ನು 1981ರಲ್ಲಿ ಸ್ಥಾಪಿಸಲಾಗಿದ್ದು, ಒಲಂಪಿಕ್ ಚಾರ್ಟರ್ 21ರ ನಿಯಮದ ಪ್ರಕಾರ ಸ್ಥಾಪಿಸಲಾಗಿದೆ.
- ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿ ಮತ್ತು ಕ್ರೀಡಾಪಟುಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ.
- ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಸಭೆ ಸೇರುವ ಮೂಲಕ ಐಒಸಿಗೆ ಸಲಹೆ ನೀಡುವ ಕೆಲಸವನ್ನು ಈ ಆಯೋಗ ಮಾಡುತ್ತಿದೆ.

**ತಫಿಸ (TAFISA) ವಿಶ್ವ ಕ್ರೀಡಾಕೂಟದಲ್ಲಿ ಭಾರತಕ್ಕೆ ಒಂದು ಚಿನ್ನ ಸೇರಿದಂತೆ ನಾಲ್ಕು ಪದಕಗಳು**

ಭಾರತದ ಕುಸ್ತಿಪಟುಗಳು ಇಂಡೊನೇಷ್ಯಾದ ಜಕರ್ತಾರದಲ್ಲಿ  ಮುಕ್ತಾಯಗೊಂಡ 6ನೇ ತಫಿಸ ವಿಶ್ವ ಕ್ರೀಡಾಕೂಟದಲ್ಲಿ ಒಂದು ಚಿನ್ನ ಸೇರಿದಂತೆ ನಾಲ್ಕು ಪದಕಗಳನ್ನು ಗೆದ್ದುಕೊಂಡಿದ್ದಾರೆ. 60ಕೆ.ಜಿ ವಿಭಾಗದಲ್ಲಿ ದಾಲ್ಮಿಯ ಚಿನ್ನದ ಪದಕ ತಂದುಕೊಟ್ಟಿದ್ದಾರೆ. ಫೈನಲ್‌ನಲ್ಲಿ ಅವರು 4-1ರಲ್ಲಿ ಮೊಹಮ್ಮದ್ ಸಹಾನ್ ಎದುರು ಜಯ ದಾಖಲಿಸಿದರು.

**ಲುವ್ ಸಿಂಗ್**: ಲುವ್ ಸಿಂಗ್ ಅವರು 80ಕೆ.ಜಿ ವಿಭಾಗದಲ್ಲಿ ಬೆಳ್ಳಿ ಗೆದ್ದುಕೊಂಡರು. ಅಜರ್ಬೈಜನ್ ನ ಮೊಹಮ್ಮದ್ ಅಲಿ ಅವರಿಗೆ ಫೈನಲ್ ಪಂದ್ಯದಲ್ಲಿ ಶರಣಾಗುವ ಮೂಲಕ ಬೆಳ್ಳಿಗೆ ತೃಪ್ತಿಪಟ್ಟುಕೊಂಡರು.

**ನವೀನ್ ಕುಮಾರ್:** ನವೀನ್ ಕುಮಾರ್ ಅವರು ಕಂಚಿನ ಪದಕವನ್ನು ಪಡೆದುಕೊಂಡರು. 90ಕೆ.ಜಿ ವಿಭಾಗದಲ್ಲಿ ಲಿಥುನಿಯಾದ ಒಲೆಗ ಅವರನ್ನು 5-2 ರಿಂದ ಮಣಿಸಿ ಕಂಚನ್ನು ತಮ್ಮದಾಗಿಸಿಕೊಂಡರು.

**ಜೋಸಿಲ್**:  ಸೂಪರ್ ಹೆವಿವೇಟ್ ವಿಭಾಗದಲ್ಲಿ ಆಫ್ಘಾನಿಸ್ತಾನದ ಮುಸ್ತಾಪ ಸುಲ್ತಾನಿ ಅವರನ್ನು 3-1 ಅಂಕಗಳಿಂದ ಸೋಲಿಸಿ ಕಂಚಿಗೆ ಕೊರಳೊಡ್ಡಿದರು.

**2016 ಕಬಡ್ಡಿ ವಿಶ್ವ ಕಪ್: ಭಾರತಕ್ಕೆ ಒಲಿದ ಪ್ರಶಸ್ತಿ**



www.karunaduexams.com

ಭಾರತ 2016 ವಿಶ್ವಕಪ್ ಕಬಡ್ಡಿ ಅನ್ನು ಮುಡಿಗೇರಿಸಿಕೊಂಡಿತು. ಅಹಮದಬಾದ್ ಅರೆನಾ ಬೈ ಟ್ರಾನ್ಸ್ಟಂಡಿಯಾ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಇರಾನ್ ತಂಡವನ್ನು 38-29 ಅಂಕಗಳಿಂದ ಸೋಲಿಸಿ ಭಾರತ ಮತ್ತೊಮ್ಮೆ ತನ್ನ ಪಾರತಮ್ಯ ಮೆರೆಯಿತು. ಭಾರತಕ್ಕೆ ಇದು ಸತತ ಮೂರನೇ ವಿಶ್ವಕಪ್ ಆಗಿದೆ. ಈ ಹಿಂದೆ 2004 ಮತ್ತು 2007 ರಲ್ಲಿ ವಿಶ್ವಕಪ್ ಗೆದ್ದುಕೊಂಡಿತ್ತು.

**ಕಬಡ್ಡಿ ವಿಶ್ವಕಪ್:**

- ಕಬಡ್ಡಿ ವಿಶ್ವಕಪ್ ಅನ್ನು ಅಂತಾರಾಷ್ಟ್ರೀಯ ಕಬಡ್ಡಿ ಫೆಡರೇಷನ್ ಆಯೋಜಿಸುತ್ತಿದೆ.
- 2004, 2007 ಮತ್ತು 2016 ರಲ್ಲಿ ಕಬಡ್ಡಿ ವಿಶ್ವಕಪ್ ನಡೆಸಲಾಗಿದೆ.
- ಮೂರು ವಿಶ್ವಕಪ್ ನಲ್ಲಿ ಭಾರತ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಅಮೋಘ ಸಾಧನೆಯನ್ನು ಮಾಡಿದೆ.

**ಅರೆನಾ ಬೈ ಟ್ರಾನ್ಸ್ಟಂಡಿಯಾ:**

- ಅರೆನಾ ಬೈ ಟ್ರಾನ್ಸ್ಟಂಡಿಯಾ ಭಾರತದ ಮೊದಲ ಪರಿವರ್ತನಾ ಕ್ರೀಡಾಂಗಣ. ಜಾಗತಿಕ ಪೇಟೆಂಟ್ ತಂತ್ರಜ್ಞಾನವನ್ನು ಈ ಕ್ರೀಡಾಂಗಣದಲ್ಲಿ ಬಳಸಿಕೊಳ್ಳಲಾಗಿದ್ದು, ಒಂದು ಬಟನ್ ಒತ್ತುವ ಮೂಲಕ ಆರು ನಿಮಿಷಗಳಲ್ಲಿ ಹೊರಾಂಗಣ ಕ್ರೀಡಾಂಗಣ ಒಳಾಂಗಣ ಕ್ರೀಡಾಂಗಣವಾಗಿ ಪರಿವರ್ತನೆಗೊಳ್ಳಲಿದೆ.
- ಕ್ರಿಕೆಟ್ ಹೊರತುಪಡಿಸಿ 14 ಕ್ರೀಡೆಗಳನ್ನು ಈ ಕ್ರೀಡಾಂಗಣದಲ್ಲಿ ಆಯೋಜಿಸಬಹುದು. ಈ ಕ್ರೀಡಾಂಗಣ 20,000 ಆಸನಗಳನ್ನು ಹೊಂದಿದೆ.

**ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ (DRS) ಅಳವಡಿಸಿಕೊಳ್ಳಲು ಬಿಸಿಸಿಐ ಒಪ್ಪಿಗೆ**

ನವೆಂಬರ್ ತಿಂಗಳಲ್ಲಿ ನಡೆಯಲಿರುವ ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿಯಲ್ಲಿ ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ (ಯುಡಿಆರ್ಎಸ್) ಅಳವಡಿಸಿಕೊಳ್ಳಲು ಬಿಸಿಸಿಐ ಸಮ್ಮತಿಸಿದೆ. ಇದು ಪ್ರಾಯೋಗಿಕವಾಗಿ ಜಾರಿಯಾಗುತ್ತಿದ್ದು ಸಾಧಕ-ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಮುಂದಿನ ಕ್ರಮಕ್ಕೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಬಿಸಿಸಿಐ ತಿಳಿಸಿದೆ. ಡಿಆರ್ಎಸ್ ವ್ಯವಸ್ಥೆ ಅಳವಡಿಸಿಕೊಳ್ಳಲು ಬಿಸಿಸಿಐ, ಭಾರತ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಸೇರಿದಂತೆ ಇತರೆ ಸದಸ್ಯರು ವಿರೋಧ ವ್ಯಕ್ತಪಡಿಸಿದ್ದರು.

**ತಂತ್ರಜ್ಞಾನದಲ್ಲಿ ಬದಲಾವಣೆ:**

- ಮೆಸ್ಸಾಚುಸೆಟ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅನುಮೋದಿತ ಸುಧಾರಿತ ತಂತ್ರಜ್ಞಾನ ಆಧರಿತ ಯುಡಿಆರ್ಎಸ್ ವ್ಯವಸ್ಥೆಯನ್ನು ಮುಂಬರಲಿರುವ ಭಾರತ ಮತ್ತು ಇಂಗ್ಲೆಂಡ್ ನಡುವಣ ಸರಣಿಯಲ್ಲಿ ಜಾರಿಗೊಳಿಸಲಾಗುವುದು. ಈ ತಂತ್ರಜ್ಞಾನದಲ್ಲಿ ಬಾಲನ್ನು ನಿಖರವಾಗಿ ಗ್ರಹಿಸಲು ಅಲ್ಟ್ರಾಮೋಷನ್ ಕ್ಯಾಮೆರ ಹಾಗೂ ಅಲ್ಟ್ರಾಎಡ್ಜ್ ಧ್ವನಿ ಆಧಾರಿತ ತಂತ್ರಜ್ಞಾನವನ್ನು ಬಳಸಲಾಗಿದೆ.

**ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ:**

- ಡಿಆರ್ಎಸ್ ಒಂದು ತಂತ್ರಜ್ಞಾನ ಆಧರಿತ ವ್ಯವಸ್ಥೆಯಾಗಿದ್ದು, ಕ್ರಿಕೆಟ್ ಆಟದಲ್ಲಿ ಅಂಪೈರ್ ಗಳ ವಿವಾದತ್ಮಕ ತೀರ್ಪನ್ನು ಮರುಪರಿಶೀಲಿಸಲು ಬಳಸಲಾಗುತ್ತದೆ. 2008ರಲ್ಲಿ ಭಾರತ-ಶ್ರೀಲಂಕಾ ನಡುವೆ ನಡೆದ ಟೆಸ್ಟ್ ಪಂದ್ಯದಲ್ಲಿ ಮೊದಲ ಬಾರಿಗೆ ಈ ವ್ಯವಸ್ಥೆಯನ್ನು ಬಳಸಲಾಗಿತ್ತು.

www.karunaduexams.com

- ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ 2009ರಲ್ಲಿ ನ್ಯೂಜಿಲ್ಯಾಂಡ್ ಮತ್ತು ಪಾಕಿಸ್ತಾನ ನಡುವಿನ ಟೆಸ್ಟ್ ಪಂದ್ಯದಲ್ಲಿ ಈ ವ್ಯವಸ್ಥೆಯನ್ನು ಬಳಸಲು ಅಧಿಕೃತವಾಗಿ ಚಾಲನೆ ನೀಡಿತು.
- ಆರಂಭದ ದಿನಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಕಡ್ಡಾಯವೆಂದು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ಹೇಳಿತ್ತು. ಆದರೆ ವ್ಯವಸ್ಥೆಗೆ ತೀವ್ರ ವಿರೋಧ ವ್ಯಕ್ತವಾದ ಕಾರಣ ತನ್ನ ನಿಲುವನ್ನು ಸಡಿಲಗೊಳಿಸಿದ ಐಸಿಸಿ, ಎರಡು ತಂಡಗಳು ಒಪ್ಪಿದರೆ ಮಾತ್ರ ಅಳವಡಿಸಿಕೊಳ್ಳುವ ಅವಕಾಶ ಕಲ್ಪಿಸಿತು.

**ಡಿಆರ್ಎಸ್ ಕಾರ್ಯ ನಿರ್ವಹಣೆ ಹೇಗೆ:**

- ಈ ವ್ಯವಸ್ಥೆಯು ಹಲವಾರು ಆಫ್-ಫೀಲ್ಡ್ ತಂತ್ರಜ್ಞಾನವನ್ನು ಹೊಂದಿದೆ. ಈ ತಂತ್ರಜ್ಞಾನಗಳನ್ನು ಬಳಸಿ ಮೂರನೇ ಅಂಪೈರ್ ಫೀಲ್ಡ್ ನಲ್ಲಿರುವ ಅಂಪೈರ್ ಗಳಿಗೆ ತಾವು ನೀಡಿದ ತೀರ್ಪನ್ನು ಹಿಂಪಡೆಯಲು ಅಥವಾ ಎತ್ತಿಹಿಡಿಯಲು ಸೂಚಿಸುತ್ತಾರೆ.

**ಬಳಸಲಾಗುವ ಆಫ್-ಫೀಲ್ಡ್ ತಂತ್ರಜ್ಞಾನಗಳು:**

- ಟಿವಿ ಕ್ಯಾಮೆರಾ, ಹಾಟ್ ಸ್ಪಾಟ್, ಹಾಕ್-ಕಿ, ರಿಯಲ್ ಟೈಮ್ ಸ್ನಿಕೋಮೀಟರ್.

**<u>ಕೇರಳ ರಾಜ್ಯ ದೇಶದ ಮೂರನೇ ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯ</u>**

ಕೇರಳ ರಾಜ್ಯ ದೇಶದ ಮೂರನೇ ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯವೆಂಬ ಗೌರವಕ್ಕೆ ಪಾತ್ರವಾಗಿದೆ. ಸಿಕ್ಕಿಂ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳು ಈಗಾಗಲೇ ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯವೆಂದು ಘೋಷಿಸಲಾಗಿದ್ದು, ಈ ಸಾಲಿಗೆ ಕೇರಳ ಸೇರ್ಪಡೆಯಾಗಿದೆ.

- ಕೇರಳ ರಾಜ್ಯ ಸಂಸ್ಥಾಪನ ದಿನವಾದ ನವೆಂಬರ್ 1ರಂದು ಕುಡಿಯುವ ನೀರು ಮತ್ತು ನೈರ್ಮಲ್ಯ ಕಾಯದರ್ಶಿ ಪರಮೇಶ್ವರನ್ ಅಯ್ಯರ್ ಘೋಷಣೆ ಮಾಡಿದರು.
- ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಜ್ಯಗಳ ಪೈಕಿ ಈ ಸಾಧನೆ ಮಾಡಿದ ಮೊದಲ ರಾಜ್ಯ ಕೇರಳ.
- ಕೇರಳ ರಾಜ್ಯದ 14 ಜಿಲ್ಲೆ, 152 ಬ್ಲಾಕ್ ಮತ್ತು 940 ಗ್ರಾಮ ಪಂಚಾಯತಿಗಳನ್ನು ಬಯಲು ಶೌಚಮುಕ್ತವಾಗಿವೆ.
- ಗುಜರಾತ್, ಹರಿಯಾಣ ಮತ್ತು ಉತ್ತರಾಖಂಡ ರಾಜ್ಯಗಳೂ ಬಯಲು ಶೌಚ ಮುಕ್ತ ರಾಜ್ಯಗಳಾಗಿ ಸದ್ಯದಲ್ಲೇ ಘೋಷಣೆ ಮಾಡಲಾಗುತ್ತದೆ.

www.karunaduexams.com

# ವಿಶೇಷ ದಿನ

**ಅಕ್ಟೋಬರ್ 3: ವಿಶ್ವ ಆವಾಸ ದಿನ (World Habitat Day)**

ವಿಶ್ವ ಆವಾಸ ದಿನವನ್ನು ಪ್ರತಿ ವರ್ಷ ಅಕ್ಟೋಬರ್ ತಿಂಗಳ ಮೊದಲ ಸೋಮವಾರದಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಈ ವರ್ಷ ಅಕ್ಟೋಬರ್ 3 ರಂದು ವಿಶ್ವ ಆವಾಸ ದಿನವನ್ನು ಆಚರಿಸಲಾಯಿತು. ನಗರ ಪ್ರದೇಶಗಳು, ನಗರ ಮತ್ತು ಪಟ್ಟಣಗಳಲ್ಲಿ ಕೈಗೆಟುವ ವಸತಿ ಅಗತ್ಯದ ಬಗ್ಗೆ ಅರಿವು ಮೂಡಿಸುವುದು ವಿಶ್ವ ಆವಾಸ ದಿನದ ಉದ್ದೇಶ.

- "Housing at the Cetre" ಇದು ಈ ವರ್ಷದ ವಿಶ್ವ ಆವಾಸ ದಿನದ ಥೀಮ್

**ಹಿನ್ನಲೆ:**

- ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ 1986ರಲ್ಲಿ ನಿರ್ಣಯವನ್ನು ಕೈಗೊಳ್ಳುವ ಮೂಲಕ ಪ್ರತಿ ವರ್ಷ ಅಕ್ಟೋಬರ್ ಮೊದಲ ಸೋವಾವರವನ್ನು ವಿಶ್ವ ಆವಾಸ ದಿನವನ್ನಾಗಿ ಆಚರಿಸಲು ತೀರ್ಮಾನಿಸಲಾಯಿತು.
- ಮುಂದಿನ ಪೀಳಿಗೆಗೆ ನೆಲೆಯನ್ನು ಕಲ್ಪಿಸುವುದು ನಮ್ಮೆಲ್ಲರ ಹೊಣೆ ಎಂಬುದನ್ನು ವಿಶ್ವಕ್ಕೆ ಎಚ್ಚರಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**2017 ಗಣರಾಜ್ಯೋತ್ಸವದ ಅತಿಥಿಯಾಗಿ ಅಬುಧಾಬಿಯ ಯುವರಾಜ**

ಅಬುಧಾಬಿಯ ಯುವರಾಜ ಶೇಕ್ ಮೊಹಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಜನವರಿ 26, 2017 ರಂದು ನಡೆಯಲಿರುವ 68ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಭಾರತದ ಆಹ್ವಾನವನ್ನು ಅಬುಧಾನಿ ಯುವರಾಜ ಒಪ್ಪಿರುವುದಾಗಿ ವಿದೇಶಾಂಗ ಇಲಾಖೆ ವಕ್ತಾರ ವಿಕಾಸ್ ಸ್ವರೂಪ್ ರವರು ತಿಳಿಸಿದ್ದಾರೆ.

**ಹಿಂದಿನ ಅತಿಥಿಗಳು:**

- 2016: ಫ್ರಾಂಕೋಯಿಸ್ ಹೊಲಂಡೆ (ಫ್ರೆಂಚ್ ಅಧ್ಯಕ್ಷ)
- 2015: ಬರಾಕ್ ಒಬಮಾ (ಅಮೆರಿಕಾ ಅಧ್ಯಕ್ಷ)
- 2014: ಶಿಂಜೋ ಅಬೆ (ಜಪಾನ್ ಪ್ರಧಾನಿ)
- 2013: ಜಿಗ್ಮಿ ಖೇಸರ್ ನಮ್ಗೇಯಲ್ ವಾಂಗ್ ಚುಕ್ (ಭೂತಾನಿನ ರಾಜ)
- 2012: ಯಿಂಗ್ಲಕ್ ಶಿನವಾತ್ರ (ಥಾಯ್ಲೆಂಡ್ ಪ್ರಧಾನಿ)

ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಫ್ರಾನ್ಸ್ ಐದು ಬಾರಿ ಭಾಗವಹಿಸಿದೆ. ಭೂತಾನ ನಾಲ್ಕು ಬಾರಿ, ಮಾರಿಷಸ್ ಮತ್ತು ರಷ್ಯಾ ಮೂರು ಬಾರಿ ಭಾಗವಹಿಸಿವೆ.

**ಅಕ್ಟೋಬರ್ 11: ಅಂತಾರಾಷ್ಟ್ರೀಯ ಹೆಣ್ಣು ಮಗು ದಿನ**

ಅಂತಾರಾಷ್ಟ್ರೀಯ ಹೆಣ್ಣು ಮಗು ದಿನವನ್ನು ಪ್ರತಿ ವರ್ಷ ಅಕ್ಟೋಬರ್ 11 ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಹೆಣ್ಣು ಮಕ್ಕಳ ಹಕ್ಕುಗಳು ಮತ್ತು ಹೆಣ್ಣು ಮಕ್ಕಳು ಎದುರಿಸುತ್ತಿರುವ ಸವಾಲುಗಳನ್ನು ಗುರುತಿಸಲು ಈ ದಿನವನ್ನು ಆಚರಿಸಲಾಗುತ್ತಿದೆ.

**ಈ ದಿನದ ಮಹತ್ವ:**

www.karunaduexams.com

- ಜಾಗತಿಕ ಮಟ್ಟದಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ಲಿಂಗ ತಾರತಮ್ಯ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಹೆಣ್ಣು ಮಕ್ಕಳಿಗೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುವುದು.
- 2012 ರಲ್ಲಿ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಹೆಣ್ಣು ಮಗು ದಿನವನ್ನು ಆಚರಿಸಲಾಗಿತ್ತು. ಐದನೇ ಅಂತಾರಾಷ್ಟ್ರೀಯ ಹೆಣ್ಣು ಮಗು ದಿನವನ್ನು ಈ ವರ್ಷ ಆಚರಿಸಲಾಗುತ್ತಿದೆ.
- **ಈ ವರ್ಷದ ಥೀಮ್** "*Girls' Progress = Goals' Progress: What Counts for Girls*".

**ಹಿನ್ನಲೆ**:

- ಅಂತಾರಾಷ್ಟ್ರೀಯ ಹೆಣ್ಣು ಮಗು ದಿನವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2011 ರಲ್ಲಿ ಕೈಗೊಂಡ ನಿರ್ಣಯದ ಮೇರೆಗೆ 2012 ರಿಂದ ಆಚರಿಸಲಾಗುತ್ತಿದೆ.
- ಹೆಣ್ಣು ಮಕ್ಕಳ ಹಕ್ಕುಗಳು ಮತ್ತು ಹೆಣ್ಣು ಮಕ್ಕಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಅರಿವು ಮೂಡಿಸುವುದು ಈ ದಿನದ ಮಹತ್ವವಾಗಿದೆ. ಅಲ್ಲದೇ ಹೆಣ್ಣು ಮಕ್ಕಳಿಗೆ ಶೈಕ್ಷಣಿಕ ಹಕ್ಕು, ಆರೋಗ್ಯ ಸೇವೆ, ಕಾನೂನು ಹಕ್ಕು ಒದಗಿಸುವುದು ಮತ್ತು ಲಿಂಗ ತಾರತಮ್ಯ, ಬಾಲ್ಯ ವಿವಾಹ ಮತ್ತು ಹೆಣ್ಣು ಮಕ್ಕಳ ಮೇಲೆ ಶೋಷಣೆಯನ್ನು ನಿಲ್ಲಿಸಲು ವಿಶ್ವಕ್ಕೆ ಕರೆ ನೀಡುವುದು.

**ಅಕ್ಟೋಬರ್ 10: ವಿಶ್ವ ಮಾನಸಿಕ ಆರೋಗ್ಯ ದಿನ (World Mental Health Day)**

ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 10 ರಂದು ಆಚರಿಸಲಾಗುತ್ತದೆ. ಮಾನಸಿಕ ಆರೋಗ್ಯ ಸಮಸ್ಯೆಗಳು ಮತ್ತು ಮಾನಸಿಕ ಆರೋಗ್ಯ ಬೆಂಬಲಪಡಿಸಲು ವಿಶ್ವದಾದ್ಯಂತ ಅರಿವು ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**2016 ವಿಶ್ವ ಮಾನಸಿಕ ಆರೋಗ್ಯ ದಿನದ ಥೀಮ್**: *Psychological First Aid*

**ಹಿನ್ನಲೆ**:

- ವರ್ಲ್ಡ್ ಫಡರೇಶನ್ ಫಾರ್ ಮೆಂಟಲ್ ಹೆಲ್ತ್ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಆಚರಿಸುವ ಪ್ರಸ್ತಾವನೆಯನ್ನು ಮೊದಲು ತಂದಿತ್ತು. ತದನಂತರ ವಿಶ್ವ ಆರೋಗ್ಯ ಸಂಸ್ಥೆ ಈ ಪ್ರಸ್ತಾವನೆಯನ್ನು ಅನುಮೋದನೆ ನೀಡಿತು.
- 1992 ರಿಂದ ವಿಶ್ವ ಮಾನಸಿಕ ಆರೋಗ್ಯ ದಿನವನ್ನು ಆಚರಿಸಲಾಗುತ್ತಿದೆ.

**ಅಕ್ಟೋಬರ್ 9: ವಿಶ್ವ ಅಂಚೆ ದಿನ (World Post Day)**

ವಿಶ್ವ ಅಂಚೆ ದಿನವನ್ನು ಅಕ್ಟೋಬರ್ 9 ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಅಂಚೆ ಸೇವೆಯ ಮಹತ್ವ ಮತ್ತು ಜನರ ದೈನಂದಿನ ಜೀವನ ಮತ್ತು ವ್ಯವಹಾರಗಳಲ್ಲಿ ಅಂಚೆ ಸೇವೆಯ ಪಾತ್ರವನ್ನು ಸ್ಮರಿಸುವ ಸಲುವಾಗಿ ಅಂಚೆ ದಿನವನ್ನು ಆಚರಿಸಲಾಗುವುದು.

**2016 ವಿಶ್ವ ಅಂಚೆ ದಿನದ ಥೀಮ್**: I*nnovation, Integration and Inclusion".*

ಭಾರತೀಯ ಅಂಚೆ ಇಲಾಖೆಯು ದೇಶದಲ್ಲಿ ವಿಶ್ವ ಅಂಚೆ ಇಲಾಖೆಯನ್ನು ಆಚರಿಸುತ್ತದೆ. ಸುಮಾರು 150 ವರ್ಷಗಳಿಂದ ಅಂಚೆ ಇಲಾಖೆ ಸಂಪರ್ಕ ಸಮೂಹದ ಬೆನ್ನಲುಬು ಆಗಿದೆ. ಭಾರತೀಯ ಅಂಚೆಯು ವಿಶ್ವದ ಅತಿ ದೊಡ್ಡ ಅಂಚೆ ಸಮೂಹವಾಗಿದ್ದು, ಬ್ಯಾಂಕಿಂಗ್, ಹಣ ರವಾನೆ, ವಿಮೆ ಮತ್ತು ರಿಟೈಲ್ ಸೇವೆಗಳನ್ನು ನೀಡುತ್ತಿದೆ.

**ಹಿನ್ನಲೆ**:

- 1969 ರಲ್ಲಿ ಟೋಕಿಯೊ, ಜಪಾನ್ನಲ್ಲಿ ನಡೆದ ಯೂನಿವರ್ಸಲ್ ಪೋಸ್ಟಲ್ ಯುನಿಯನ್ ಕಾಂಗ್ರೆಸ್ ನಲ್ಲಿ ವಿಶ್ವ ಅಂಚೆ ದಿನವನ್ನು ಆಚರಿಸಲು ನಿರ್ಧರಿಸಲಾಯಿತು.

www.karunaduexams.com

- ಯೂನಿವರ್ಸಲ್ ಪೋಸ್ಟಲ್ ಯೂನಿಯನ್ ಸ್ಥಾಪನೆಯ ವಾರ್ಷಿಕೋತ್ಸವ ಸ್ಮರಣಾರ್ಥ ವಿಶ್ವ ಅಂಚೆ ದಿನವನ್ನು ಆಚರಿಸಲಾಗುವುದು. ಯೂನಿವರ್ಸಲ್ ಪೋಸ್ಟಲ್ ಯೂನಿಯನ್ ಅನ್ನು 1874ರಲ್ಲಿ ಸ್ವಿಸ್ ರಾಜಧಾನಿ ಬರ್ನ್ ನಲ್ಲಿ ಸ್ಥಾಪಿಸಲಾಯಿತು.

**ಅಕ್ಟೋಬರ್ 15: ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ**

ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವನ್ನು ಪ್ರತಿವರ್ಷ ಅಕ್ಟೋಬರ್ 15 ರಂದು ಆಚರಿಸಲಾಗುವುದು. ಗ್ರಾಮೀಣ ಮಹಿಳೆಯರ ಕೊಡುಗೆ ಮತ್ತು ಪಾತ್ರವನ್ನು ಗೌರವಿಸುವ ಸಲುವಾಗಿ ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವನ್ನು ಆಚರಿಸಲಾಗುವುದು.

**ದಿನದ ಮಹತ್ವ**:

ಗ್ರಾಮೀಣ ಮತ್ತು ಕೃಷಿ ಅಭಿವೃದ್ಧಿ, ಗ್ರಾಮೀಣ ಬಡತನ ನಿರ್ಮೂಲನೆ ಮತ್ತು ಆಹಾರ ಭದ್ರತೆ ಉತ್ತಮಪಡಿಸುವಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ ಮತ್ತು ಕೊಡುಗೆಯನ್ನು ಎತ್ತಿಹಿಡಿಯುವುದು.

**2016 ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನದ ಥೀಮ್:** Climate is changing. Food and agriculture must too".

**ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ ಏಕೆ:**

- ಗ್ರಾಮೀಣ ಮಹಿಳೆಯರು ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಕಾಲು ಭಾಗದಷ್ಟಿದ್ದು, ಇವರಲ್ಲಿ ಬಹುತೇಕ ಮಹಿಳೆಯರು ತಮ್ಮ ಜೀವನೋಪಾಯಕ್ಕಾಗಿ ಕೃಷಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅವಲಂಭಿತರಾಗಿದ್ದಾರೆ.
- ಅಭಿವೃದ್ದಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಗ್ರಾಮೀಣ ಮಹಿಳೆಯರು ಶೇ 43 ರಷ್ಟು ಕೃಷಿ ಕೂಲಿ ಕಾರ್ಮಿಕರಾಗಿದ್ದಾರೆ. ಆ ಮೂಲಕ ಆಹಾರ ಉತ್ಪಾದನೆಯಿಂದ ಆಹಾರ ಬೇಯಿಸುವ ತನಕ ಅಮೂಲ್ಯ ಕೊಡುಗೆಯನ್ನು ನೀಡುವ ಮೂಲಕ ಆಹಾರ ಭದ್ರತೆಗೆ ಗಣನೀಯ ಸೇವೆ ನೀಡುತ್ತಿದ್ದಾರೆ.
- ಆದ್ದರಿಂದ ಆಹಾರ ಭದ್ರತೆ ಮತ್ತು ಬಡತನ ನಿರ್ಮೂಲನೆಗೆ ಇವರು ನೀಡುತ್ತಿರುವ ಸೇವೆಯನ್ನು ಸ್ಮರಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**ಹಿನ್ನಲೆ:**

ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವನ್ನು ಆಚರಿಸುವ ಸಲುವಾಗಿ ಡಿಸೆಂಬರ್ 2007 ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಅದರಂತೆ 2008 ರಲ್ಲಿ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನವನ್ನು ಆಚರಿಸಲಾಗಿದ್ದು, ಅಂದಿನಿಂದ ಪ್ರತಿ ವರ್ಷ ಆಚರಿಸಲಾಗುತ್ತಿದೆ.

**ಅಕ್ಟೋಬರ್ 17: ಅಂತಾರಾಷ್ಟ್ರೀಯ ಬಡತನ ನಿರ್ಮೂಲನ ದಿನ**

ಅಂತಾರಾಷ್ಟ್ರೀಯ ಬಡತನ ನಿರ್ಮೂಲನ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 17 ರಂದು ಆಚರಿಸಲಾಗುವುದು. ಜಾಗತಿಕ ಮಟ್ಟದಲ್ಲಿ ಬಡತನವನ್ನು ನಿರ್ಮೂಲನೆ ಮಾಡುವ ಅಂಗವಾಗಿ ಈ ದಿನವನ್ನು ಆಚರಿಸಲಾಗುತ್ತದೆ.

- ಜಗತ್ತಿನಲ್ಲಿ ಬಡತನ ಮತ್ತು ದಾರಿದ್ರ್ಯವನ್ನು ಹೋಗಲಾಡಿಸುವುದು, ಅದರಲ್ಲೂ ಮುಂದುವರೆಯುತ್ತಿರುವ ದೇಶಗಳಲ್ಲಿ ಬಡತನವನ್ನು ತೊಡೆದುಹಾಕುವ ಸಲುವಾಗಿ ಅರಿವು ಮೂಡಿಸಲು ಅಂತಾರಾಷ್ಟ್ರೀಯ ಬಡತನ ನಿರ್ಮೂಲನ ದಿನವನ್ನು ಆಚರಿಸಲಾಗುವುದು.

**2016 ಥೀಮ್**: "Moving from humiliation and exclusion to participation: Ending poverty in all its forms".

**ಹಿನ್ನಲೆ:**

ಡಿಸೆಂಬರ್ 22, 1992 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಕೈಗೊಳ್ಳುವ ಮೂಲಕ ಅಂತಾರಾಷ್ಟ್ರೀಯ ಬಡತನ ನಿರ್ಮೂಲನ ದಿನದ ಆಚರಣೆಗೆ ಚಾಲನೆ ನೀಡಲಾಯಿತು. 1993 ರಲ್ಲಿ ಪ್ರಥಮ ಬಾರಿಗೆ ಆಚರಿಸಲಾಯಿತು.

**ಅಕ್ಟೋಬರ್ 16: ವಿಶ್ವ ಆಹಾರ ದಿನ**

ಪ್ರತೀ ವರ್ಷ ಅಕ್ಟೋಬರ್ 16ರಂದು ವಿಶ್ವ ಆಹಾರ ದಿನವನ್ನು ಆಚರಿಸಲಾಗುತ್ತದೆ. 1945 ರಲ್ಲಿ ವಿಶ್ವಸಂಸ್ಥೆಯು ಈ ದಿನವನ್ನು ಆಹಾರ ಮತ್ತು ಕೃಷಿ ಸಂಸ್ಥೆ ಸ್ಥಾಪನೆಯ ದಿನಾಂಕದ ಗೌರವಾರ್ಥವಾಗಿ ಆಹಾರ ದಿನವನ್ನಾಗಿ ಆಚರಿಸಲು ನಿರ್ಧರಿಸಿತು. ಈ ದಿನವನ್ನು ಜಗತ್ತಿನ ಜನರು ಹಸಿವಿನ ವಿರುದ್ಧ ಕೆಲಸ ಮಾಡಲು ಮತ್ತು ಅದರ ನಿರ್ಮೂಲನೆಗಾಗಿ ಕೆಲಸ ಮಾಡಲು ಒಗ್ಗೂಡುವ ಸಲುವಾಗಿ ಈ ದಿನವನ್ನು ಆಚರಣೆಗೆ ತಂದಿತು.

- 2016 ಥೀಮ್: “Climate is changing. Food and agriculture must too”

**ಹಿನ್ನಲೆ:**

- ಆಹಾರ ಮತ್ತು ಕೃಷಿ ಸಂಸ್ಥೆ (ಎಫ್ಎಒ) ಸದಸ್ಯ ರಾಷ್ಟ್ರಗಳು 20ನೇ ಸಾರ್ವಜನಿಕ ಸಮ್ಮೇಳನದಲ್ಲಿ ವಿಶ್ವ ಆಹಾರ ದಿನವನ್ನು ನವೆಂಬರ್ 1979 ರಲ್ಲಿ ಆರಂಭಿಸಿದವು. ಬಡತನ ಮತ್ತು ಹಸಿವಿನ ಹಿಂದಿರುವ ಕಾರಣಗಳ ಬಗ್ಗೆ ಅರಿವು ಮೂಡಿಸುವುದು ಈ ದಿನದ ಗುರಿ.

**ಎಫ್ಎಒ:**

- ಆಹಾರ ಮತ್ತು ಕೃಷಿ ಸಂಸ್ಥೆಯು ವಿಶ್ವಸಂಸ್ಥೆಯ ಒಂದು ಅಂಗ ಸಂಸ್ಥೆಯಾಗಿದ್ದು, ಜಾಗತಿಕ ಮಟ್ಟದಲ್ಲಿ ಹಸಿವನ್ನು ನೀಗಿಸಲು ಪ್ರಯತ್ನ ಪಡುತ್ತಿದೆ. ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿ ಇದರ ಮಾತೃಸಂಸ್ಥೆ ಆಗಿದೆ.
- ಅಭಿವೃದ್ದಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳೊಂದಿಗೆ ಒಪ್ಪಂದ ಮತ್ತು ಕಾರ್ಯನೀತಿಯನ್ನು ಚರ್ಚಿಸಲು ಸಮಾನವಾಗಿ ತಟಸ್ಥ ವೇದಿಕೆಯಾಗಿದೆ.
- ಸ್ಥಾಪನೆ: ಅಕ್ಟೋಬರ್ 16, 1945
- ಕೇಂದ್ರ ಕಚೇರಿ: ರೋಮ್, ಇಟಲಿ

**ಅಕ್ಟೋಬರ್ 24: ವಿಶ್ವಸಂಸ್ಥೆ ದಿನ (United Nations Day)**

ವಿಶ್ವಸಂಸ್ಥೆ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 24ರಂದು ಆಚರಿಸಲಾಗುತ್ತದೆ. ವಿಶ್ವಸಂಸ್ಥೆ ಚಾರ್ಟರ್ ಅಕ್ಟೋಬರ್ 24ರಂದು ಜಾರಿಗೆ ಬಂದ ಸ್ಮರಣಾರ್ಥ ಈ ದಿನವನ್ನು ಆಚರಿಸಲಾಗುವುದು. ಅಕ್ಟೋಬರ್ 24, 1945 ರಂದು ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಐದು ಖಾಯಂ ಸದಸ್ಯ ರಾಷ್ಟ್ರಗಳಾದ ಚೀನಾ, ಫ್ರಾನ್ಸ್, ಸೋವಿಯಟ್ ರಷ್ಯಾ ಒಕ್ಕೂಟ, ಯುಕೆ ಮತ್ತು ಅಮೆರಿಕ ರಾಷ್ಟ್ರಗಳು ಅನುಮೋದಿಸುವ ಮೂಲಕ ವಿಶ್ವಸಂಸ್ಥೆ ಚಾರ್ಟರ್ ಜಾರಿಗೆ ಬಂದಿತು.

**ವಿಶ್ವಸಂಸ್ಥೆ ಚಾರ್ಟರ್ ಮಹತ್ವ:**

- ವಿಶ್ವಸಂಸ್ಥೆ ಚಾರ್ಟರ್ ಅನುಮೋದಿಸಿದ ನಂತರ ವಿಶ್ವಸಂಸ್ಥೆ ಅಧಿಕೃತವಾಗಿ ಜಾರಿಗೆ ಬಂದಿದೆ. ಇದೊಂದು ಸಂವಿಧಾನಿಕ ಒಪ್ಪಂದವಾಗಿದ್ದು, ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಇದರ ವಿಧಿಗಳಿಗೆ ಬದ್ದವಾಗಿರಬೇಕು. ವಿಶ್ವಸಂಸ್ಥೆ ಚಾರ್ಟರ್ ನ 103ನೇ ವಿಧಿ ಪ್ರಕಾರ ವಿಶ್ವಸಂಸ್ಥೆ ಒಪ್ಪಂದ ಇತರೆ ಒಪ್ಪಂದಗಳಿಗಿಂತ ಉನ್ನತವಾದದ್ದು.

**2016 ಆಚರಣೆ:**

www.karunaduexams.com

- ಸ್ವಾತಂತ್ರ ಮೊದಲು (Freedom First) ಇದು ಈ ವರ್ಷದ ಆಚರಣೆಯ ಧ್ಯೇಯವಾಕ್ಯ. ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಜಗತ್ತಿನ ಜನತೆಗೆ ತಿಳಿಸುವುದು ಈ ವರ್ಷದ ಆಚರಣೆಯ ಮುಖ್ಯ ವಿಷಯವಾಗಿತ್ತು.

**ಹಿನ್ನಲೆ:**

- ಅಕ್ಟೋಬರ್ 24ರಂದು ವಿಶ್ವಸಂಸ್ಥೆ ದಿನವನ್ನು ಆಚರಿಸಲುವ ಸಲುವಾಗಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 1971ರಲ್ಲಿ ನಿರ್ಣಯ ಕೈಗೊಳ್ಳಲಾಯಿತು. ವಿಶ್ವಸಂಸ್ಥೆ ಸ್ಥಾಪನೆಯ ಉದ್ದೇಶ, ಗುರಿ ಮತ್ತು ಸಾಧನೆಯನ್ನು ವಿಶ್ವದ ಜನತೆಗೆ ತಿಳಿಸುವುದು ಈ ದಿನದ ಮಹತ್ವ.

## ಅಕ್ಟೋಬರ್ 24: ಇಂಡೋ-ಟಿಬೆಟ್ ಗಡಿ ಪೊಲೀಸ್ ಸಂಸ್ಥಾಪನ ದಿನ

ಇಂಡೋ-ಟಿಬೆಟ್ ಗಡಿ ಪೊಲೀಸ್ (ಐಟಿಬಿಪಿ) ತನ್ನ 55ನೇ ಸಂಸ್ಥಾಪನ ದಿನವನ್ನು ಅಕ್ಟೋಬರ್ 24, 2016 ರಂದು ಆಚರಿಸಿಕೊಂಡಿತು. ಲಡಾಕ್ನ ಕಾರಕೋರಂ ಪಾಸ್ ನಿಂದ ಅರುಣಾಚಲ ಪ್ರದೇಶದ ಜಚೆಪ್ ಲಾ ವರೆಗಿನ ಚೀನಾ-ಭಾರತ ನಡುವಿನ 3488 ಕಿ.ಮೀ ಗಡಿ ಭಾಗವನ್ನು ಕಾಯಲು ಐಟಿಬಿಪಿಯನ್ನು ನಿಯೋಜಿಸಲಾಗಿದೆ.

**ಇಂಡೋ-ಟಿಬೆಟ್ ಗಡಿ ಪೊಲೀಸ್ (ಐಟಿಬಿಪಿ) ಬಗ್ಗೆ:**

- ಇಂಡೋ-ಟಿಬೆಟ್ ಗಡಿ ಪೊಲೀಸ್ ಭಾರತ ಸರ್ಕಾರದ ಶಾಸನಬದ್ದ ಎಂಟು ಕೇಂದ್ರ ಸಶಸ್ತ್ರ ಪಡೆಗಳಲ್ಲಿ ಒಂದಾಗಿದೆ. ಚೀನಾ-ಭಾರತ ಯುದ್ದ ನಂತರ ಐಟಿಬಿಪಿಯನ್ನು 24 ಅಕ್ಟೋಬರ್ 1962 ರಲ್ಲಿ ಸಿಆರ್ಪಿಎಫ್ ಕಾಯಿದೆಯಡಿ ಸ್ಥಾಪಿಸಲಾಗಿದೆ.
- 1992 ರಲ್ಲಿ ಇಂಡೋ-ಟಿಬೆಟ್ ಗಡಿ ಪೊಲೀಸ್ ಕಾಯಿದೆಯನ್ನು ಜಾರಿಗೆ ತಂದು ಐಟಿಬಿಪಿ ಸಂಪೂರ್ಣ ಸ್ವಾಯುತ್ತತೆಯನ್ನು ನೀಡಲಾಗಿದೆ. ಪ್ರಸ್ತುತ ಐಟಿಬಿಪಿ ಕೇಂದ್ರ ಗೃಹ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ.
- ಸದ್ಯ 50,000ಕ್ಕೂ ಹೆಚ್ಚು ಸಿಬ್ಬಂದಿಯನ್ನು ಹೊಂದಿರುವ ಪ್ರಬಲ ಪಡೆ ಇದಾಗಿದೆ.
- ಐಟಿಬಿಪಿ ಪಡೆಯನ್ನು ವಿವಿಧ ಆಂತರಿಕ ಕಾರ್ಯಾಚರಣೆಗಳಾದ ನಾಗರಿಕ ವೈದ್ಯಕೀಯ ಕ್ಯಾಂಪ್, ವಿಪತ್ತು ನಿರ್ವಹಣೆ, ಪರಮಾಣು, ಜೈವಿಕ ಮತ್ತು ರಾಸಾಯನಿಕ ವಿಪತ್ತು ಹಾಗೂ ವಿಶ್ವಸಂಸ್ಥೆಯ ಶಾಂತಿ ಕಾರ್ಯಾಚರಣೆಯಲ್ಲು ಬಳಸಿಕೊಳ್ಳಲಾಗುತ್ತಿದೆ.

## ಅಕ್ಟೋಬರ್ 28: ರಾಷ್ಟ್ರೀಯ ಆರ್ಯುವೇದ ದಿನ

ಪ್ರಪ್ರಥಮ ರಾಷ್ಟ್ರೀಯ ಆರ್ಯುವೇದ ದಿನವನ್ನು ಅಕ್ಟೋಬರ್ 28 ರಂದು ಆಚರಿಸಲಾಯಿತು. ಧನ್ವಂತರಿ ಜಯಂತಿ ಪ್ರಯುಕ್ತ ಆರ್ಯುವೇದ ದಿನವನ್ನು ಆಚರಿಸಲಾಗುತ್ತಿದೆ. ಮಧುಮೇಹ ನಿಯಂತ್ರಿಸಲು ಮತ್ತು ತಡೆಯಲು ಆರ್ಯುವೇದ ಇದು ಈ ವರ್ಷದ ಧ್ಯೇಯವಾಕ್ಯ. ಆಯುರ್ವೇದ ಭಾರತದ ಅತ್ಯಂತ ಪ್ರಾಚೀನ ಹಾಗೂ ಮೂಲ ವೈದ್ಯಪದ್ಧತಿಯಾಗಿದೆ. ವೇದಗಳ ಕೊನೆಯ ವೇದ ಅಥರ್ವ ವೇದದಲ್ಲಿ ಇದರ ಬಗ್ಗೆ ಉಲ್ಲೇಖಿಸಲಾಗಿದೆ.

- ರಾಷ್ಟ್ರೀಯ ಆರ್ಯುವೇದ ದಿನದ ಆಚರಣೆ ಅಂಗವಾಗಿ ಕೇಂದ್ರ ಆಯುಷ್ ಸಚಿವಾಲಯ ಆರ್ಯುವೇದ ಮೂಲಕ ಮಧುಮೇಹ ತಡೆ ಮತ್ತು ನಿಯಂತ್ರಣದ ಬಗ್ಗೆ ಒಂದು ದಿನದ ಸೆಮಿನಾರ್ ಅನ್ನು ನವದೆಹಲಿಯಲ್ಲಿ ಆಯೋಜಿಸಿತ್ತು.

- ಅಲ್ಲದೇ ಮಿಷನ್ ಮಧುಮೇಹ ಕಾರ್ಯಕ್ರಮಕ್ಕೆ ಆಯುಷ್ ಸಚಿವಾಲಯ ಚಾಲನೆ ನೀಡಿತು. ಆರ್ಯುವೇದ ಮೂಲಕ ಮಧುಮೇಹವನ್ನು ನಿಯಂತ್ರಿಸಲು ದೇಶದಾದ್ಯಂತ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

**ಹಿನ್ನಲೆ:**

- ರಾಷ್ಟ್ರೀಯ ಆರ್ಯುವೇದ ದಿವಸವನ್ನು ದನ್ವಂತರಿ ಜಯಂತಿ ದಿನದಂದು ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿತ್ತು. ದನ್ವಂತರಿ ಜಯಂತಿಯನ್ನು ದೀಪಾವಳಿ ಹಬ್ಬದ ಎರಡು ದಿನ ಮುಂಚಿತವಾಗಿ ಆಚರಿಸಲಾಗುತ್ತದೆ. ದನ್ವಂತರಿಯನ್ನು ವಿಷ್ಣುವಿನ ರೂಪವೆಂದು ನಂಬಲಾಗಿದೆ. ಆರ್ಯುವೇದದ ಉಪಯೋಗವನ್ನು ಮೊದಲ ತಿಳಿಸಿಕೊಟ್ಟವರು.

**ಅಕ್ಟೋಬರ್ 31: ವಿಶ್ವ ನಗರಗಳ ದಿನ (World Cities Day)**

ವಿಶ್ವ ನಗರಗಳ ದಿನವನ್ನು ವಿಶ್ವದಾದ್ಯಂತ ಅಕ್ಟೋಬರ್ 31 ರಂದು ಆಚರಿಸಲಾಗುತ್ತದೆ. ಕ್ಷಿಪ್ರವಾಗಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಸಮಸ್ಯೆಗಳ ಹಿನ್ನಲೆಯಲ್ಲಿ ಯೋಜಿತ ಮತ್ತು ಸುಸ್ಥಿರವಾದ ನಗರ ಜೀವನವನ್ನು ರೂಪಿಸುವುದು ಈ ದಿನದ ಧ್ಯೇಯ. ಈ ದಿನದಂದು ವ್ಯಾಪಕವಾಗಿ ಬೆಳೆಯುತ್ತಿರುವ ನಗರೀಕರಣದಿಂದ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ಎದುರಿಸಲು ವಿಶ್ವದ ರಾಷ್ಟ್ರಗಳಿಗೆ ಕರೆ ನೀಡಲಾಗುವುದು.

**2016 ಥೀಮ್:** Inclusive Cities, Shared Documents

**ಹಿನ್ನಲೆ:**

- ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಕ್ಟೋಬರ್ 31 ರಂದು ವಿಶ್ವ ನಗರಗಳ ದಿನವನ್ನು ಆಚರಿಸಲು ಡಿಸೆಂಬರ್ 2013ರಲ್ಲಿ ನಿರ್ಣಯ ಕೈಗೊಂಡಿತು.
- ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ನಗರಗಳ ಕೊಡುಗೆಯ ಮಹತ್ವವನ್ನು ಸ್ಮರಿಸುವುದು ಆಚರಣೆಯ ಉದ್ದೇಶದಲ್ಲಿ ಒಂದಾಗಿದೆ.

**ಅಕ್ಟೋಬರ್ 31: ರಾಷ್ಟ್ರೀಯ ಏಕತಾ ದಿವಸ**

ರಾಷ್ಟ್ರೀ ಏಕತಾ ದಿವಸ (National Unity Day)ವನ್ನು ದೇಶದಾದ್ಯಂತ ಅಕ್ಟೋಬರ್ 31 ರಂದು ಆಚರಿಸಲಾಯಿತು. ಭಾರತದ ಮೊದಲ ಉಪ ಪ್ರಧಾನಿ ಸರ್ದಾರ್ ವಲ್ಲಭ್ ಭಾಯ್ ಪಟೇಲ್ ಅವರ ಜನ್ಮದಿನವನ್ನು ರಾಷ್ಟ್ರೀಯ ಏಕತಾ ದಿವಸವೆಂದು ಆಚರಿಸಲಾಗುತ್ತದೆ. ದೃಢವಾದ ಏಕತೆ, ಸಮಗ್ರತೆ ಮತ್ತು ದೇಶದ ಭದ್ರತೆಗೆ ನಿಜವಾದ ಮತ್ತು ಸಂಭವನೀಯ ಬೆದರಿಕೆಗಳನ್ನು ತಡೆಯುವ ಅಂತರ್ಗತ ಶಕ್ತಿ ತೋರುವ ಅವಕಾಶಕ್ಕೆ ಈ ದಿನ ವೇದಿಕೆ ಒದಗಿಸಲಿದೆ. ಈ ದಿನದ ಸಂಭ್ರವನ್ನು ಆಚರಿಸುವ ಸಲುವಾಗಿ ದೇಶದ ವಿವಿಧಡೆ ಅನೇಕ ಕಾರ್ಯಕ್ರಮಗಳನ್ನು ಆಚರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ನವದೆಹಲಿಯಲ್ಲಿ ರನ್ ಫಾರ್ ಯೂನಿಟಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

**2016 ಧ್ಯೇಯವಾಕ್ಯ**: ಇಂಟಿಗ್ರೇಷನ್ ಆಫ್ ಇಂಡಿಯಾ (Integration of India).

**ಸರ್ದಾರ್ ವಲ್ಲಭ್ ಭಾಯ್ ಪಟೇಲ್:**

- ಸರ್ದಾರ್ ವಲ್ಲಬ್ ಭಾಯ್ ಪಟೇಲ್ ಅವರು 31ನೇ ಅಕ್ಟೋಬರ್ 1875 ರಲ್ಲಿ ಗುಜರಾತ್ನ ಕರಂಸಾಡ್ ಹೆಸರಿನ ಹಳ್ಳಿಯಲ್ಲಿ ಜನಿಸಿದರು. ಇವರನ್ನು ಭಾರತದ ಉಕ್ಕಿನ ಮನುಷ್ಯ ಅಥವಾ ಬಿಸ್ಮಾರ್ಕ್ ಎಂದು ಕರೆಯಲಾಗುತ್ತಿದೆ.
- ವೃತ್ತಿಯಲ್ಲಿ ವಕೀಲರಾಗಿದ್ದ ಪಟೇಲ್ ಅವರು ನಂತರದ ದಿನಗಳಲ್ಲಿ ವೃತ್ತಿಯನ್ನು ತ್ಯಜಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಮಹಾತ್ಮ ಗಾಂಧಿ ನೇತೃತ್ವದ ಇಂಡಿಯನ್ ನ್ಯಾಷನಲ್ ಮೂವ್ ವೆಂಟ್ ಗೆ ಸೇರ್ಪಡೆಯಾದರು.

www.karunaduexams.com

- ಪಟೇಲ್ ಅವರು ಭಾರತ ಸ್ವಾತಂತ್ರ ಹೋರಾಟದಲ್ಲಿ ಅಪಾರ ಕೊಡುಗೆ ನೀಡಿದ್ದರು. ಖೇಡಾ, ಬರ್ಸಾಡ್ ಮತ್ತು ಬರ್ದೋಲಿ ಸತ್ಯಾಗ್ರಹಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.
- ಸ್ವಾತಂತ್ರ ಭಾರತದ ನಂತರ 500 ಸಂಸ್ಥಾನಗಳನ್ನು ಒಗ್ಗೂಡಿಸುವ ಮೂಲಕ ಭಾರತ ಏಕೀಕರಣಕ್ಕೆ ಪಟೇಲ್ ಅವರು ಅಪಾರ ಶ್ರಮವಹಿಸಿದ್ದರು. ಆಧುನಿಕ ಅಖಿಲ ಭಾರತ ಸೇವೆ ಸ್ಥಾಪನೆಯಲ್ಲಿ ಪಟೇಲ್ ಅವರ ಸೇವೆ ಅವಿಸ್ಮರಣೀಯ.

www.karunaduexams.com

# ಇತರೆ

**ಇಸ್ರೇಲ್ ಮಾಜಿ ಅಧ್ಯಕ್ಷ ಮತ್ತು ನೊಬೆಲ್ ಪುರಸ್ಕೃತ ಶಿಮಾನ್ ಪೆರೆಸ್ ನಿಧನ**

ಇಸ್ರೇಲ್ ಮಾಜಿ ಅಧ್ಯಕ್ಷ ಶಿಮಾನ್ ಪೆರೆಸ್ ಅವರು ಇಸ್ರೇಲ್ನ ರಮತ್ ಗನ್ ನಲ್ಲಿ ನಿಧನರಾದರು. ಅವರಿಗೆ 93 ವರ್ಷ ವಯಸ್ಸಾಗಿತ್ತು. ಪೆರೆಸ್ ಅವರು ಇಸ್ರೇಲ್ ನ ಹಿರಿಯ ಮುತ್ಸದ್ದಿ ಮತ್ತು ಇಸ್ರೇಲ್ ಸ್ಥಾಪಕರ ಪೈಕಿ ಉಳಿದಿರುವ ಕೆಲವರಲ್ಲಿ ಒಬ್ಬರಾಗಿದ್ದರು.

- ಪೆರೆಸ್ ಅವರು ಆಗಸ್ಟ್ 16, 1923 ರಲ್ಲಿ ಪೋಲೆಂಡ್ ನ ಸಣ್ಣ ಹಳ್ಳಿಯಲ್ಲಿ ಜನಿಸಿದ್ದರು.
- 1948 ರಲ್ಲಿ ಇಸ್ರೇಲ್ ಸ್ಥಾಪನೆಯಾದಗಿಂದಲೂ ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲಿ ಪೆರೆಸ್ ಪ್ರಮುಖ ಪಾತ್ರವಹಿಸಿದ್ದರು.
- ಇಸ್ರೇಲ್ ನಲ್ಲಿ ಅಸಾಧಾರಣ ಮಿಲಿಟರಿ ನಿರ್ಮಾಣ ಹಾಗೂ ಅಣ್ವಸ್ತ್ರ ಅಭಿವೃದ್ದಿಯಲ್ಲಿ ಪೆರೆಸ್ ಅವರ ಶ್ರಮ ಪ್ರಮುಖವೆನಿಸಿತ್ತು.
- ಪೆರೆಸ್ ಅವರು ಇಸ್ರೇಲ್ ಪ್ರಧಾನಿಯಾಗಿ ಎರಡು ಭಾರಿ ನೇಮಕಗೊಂಡಿದ್ದರು. ಅಲ್ಲದೇ ರಕ್ಷಣಾ ಸಚಿವರಾಗಿ, ಹಣಕಾಸು ಸಚಿವರಾಗಿ ಮತ್ತು ಸಾರಿಗೆ ಸಚಿವರಾಗಿ ಸಹ ಸೇವೆ ಸಲ್ಲಿಸಿದ್ದರು. ಪೆರೆಸ್ ಅವರು 2007ರಿಂದ 2014ರವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.
- 1994ರಲ್ಲಿ ಓಸ್ಲೋ ಒಪ್ಪಂದ ಹಾಗೂ ಸ್ವತಂತ್ರ್ಯ ಪ್ಯಾಲೆಸ್ತೀನ್ ಸಂಧಾನದಲ್ಲಿ ಮಹತ್ತರ ಪಾತ್ರವಹಿಸಿದ್ದರು.
- ಇದಕ್ಕಾಗಿ 1994 ರಲ್ಲಿ ನೊಬೆಲ್ ಪ್ರಶಸ್ತಿಗೆ ಪೆರೆಸ್ ಭಾಜನರಾಗಿದ್ದರು. ಪೆರೆಸ್ ರೊಂದಿಗೆ ಪ್ರಧಾನಿ ಯಿಟ್ಜಾಕ್ ರಬಿನ್ ಹಾಗೂ ಪ್ಯಾಲೆಸ್ತೀನಿ ನಾಯಕ ಯಾಸರ್ ಅರಾಫತ್ ಕೂಡ ಜಂಟಿ ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾಗಿದ್ದರು.

**ಪ್ರಸಿದ್ದ ಬಾಂಗ್ಲ ಲೇಖಕ ಸೈಯದ್ ಶಾಂಸುಲ್ ಹಕ್ (Syed Shamsul Haq) ವಿಧಿವಶ**

ಬಾಂಗ್ಲದೇಶದ ಪ್ರಮುಖ ಲೇಖಕರುಗಳಲ್ಲಿ ಒಬ್ಬರಾಗಿದ್ದ ಸೈಯದ್ ಶಾಂಸುಲ್ ಹಕ್ ಬಾಂಗ್ಲದ ಡಾಕಾದಲ್ಲಿ ನಿಧನರಾದರು. ಹಕ್ ಅವರು ಶ್ವಾಸಕೋಶದ ಕ್ಯಾನ್ಸರ್ ನಿಂದ ಬಳಲುತ್ತಿದ್ದರು. ಕಾದಂಬರಿ, ಕಾವ್ಯ, ಪ್ರಬಂಧಗಳು ಮತ್ತು ನಾಟಕಗಳ ಮೇಲೆ ಸಮಾನ ಪಾಂಡಿತ್ಯ ಹೊಂದುವ ಮೂಲಕ ಹಕ್ ಹೆಸರುವಾಸಿಯಾಗಿದ್ದರು. ಅಲ್ಲದೇ ಧಾರ್ಮಿಕ ಮೂಲಭೂತವಾದ ವಿರುದ್ದ ಧ್ವನಿ ಎತ್ತುವ ಮೂಲಕವು ಗುರುತಿಸಿಕೊಂಡಿದ್ದರು.

**ಸೈಯದ್ ಶಾಂಸುಲ್ ಹಕ್ ಬಗ್ಗೆ**:

- ಬ್ರಿಟಿಷ್ ಭಾರತದ ಬಂಗಾಳ ಪ್ರೆಸಿಡೆನ್ಸಿಯ ಕುರಿಗ್ರಾಮ್ ನಲ್ಲಿ ಡಿಸೆಂಬರ್ 27, 1935ರಲ್ಲಿ ಜನಿಸಿದರು.
- ಬೊಯಿಶಖೆ ರೊಚಿತೊ ಪೊನ್ಕತಿಮಾಲ (Boishakhey Rochito Ponktimala), ಇಕೊಡ ಎಕ್ ರಜ್ಜೆ ( Ekoda Ek Rajjey), ಬಿರೊತಿಹಿನ್ ಉಸ್ತದ್ (Birotihin Utsab), ಪ್ರೊತಿದ್ವೊನಿಗಾನ್ (Protidhwonigon) ಇವರ ಪ್ರಮುಖ ಪುಸ್ತಕಗಳಾಗಿವೆ.
- ಅಪಾರ ದೇಶಭಕ್ತಿ ಗೀತೆಗಳನ್ನು ಬರೆದಿರುವ ಹಕ್ ಅವರು 1971 ಬಾಂಗ್ಲ ವಿಮೋಚನಾ ಯುದ್ದಕ್ಕೆ ತಮ್ಮ ದೇಶಭಕ್ತಿ ಗೀತೆಗಳಿಂದ ಸ್ಫೂರ್ತಿ ತುಂಬಿದ್ದರು.

**ಪ್ರಶಸ್ತಿಗಳು**:

- 1966 ರಲ್ಲಿ ಬಾಂಗ್ಲ ಅಕಾಡೆಮಿ ಸಾಹಿತ್ಯ ಪ್ರಶಸ್ತಿ, ಬಂಗಾಳಿ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದವರಿಗೆ ನೀಡುವ ಬಾಂಗ್ಲದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಸ್ವಾಧಿನಾಥ ಪದಕ (2000) ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದರು.

www.karunaduexams.com

## ಭಯೋತ್ಪಾದಕರ ವಿರುದ್ಧ ಸರ್ಜಿಕಲ್ ಕಾರ್ಯಾಚರಣೆ ನಡೆಸಿದ ಭಾರತ ಸೇನೆ

ಪಾಕಿಸ್ತಾನ ಆಕ್ರಮಿತಿ ಕಾಶ್ಮೀರದಲ್ಲಿ ಭಾರತದ ಮೇಲೆ ದಾಳಿ ನಡೆಸಲು ಸಮಯ ಕಾಯುತ್ತಿದ್ದ ಭಯೋತ್ಪಾದಕರ ವಿರುದ್ಧ ಭಾರತ ಸೇನಾ ಪಡೆ ಸರ್ಜಿಕಲ್ ಕಾರ್ಯಾಚರಣೆಯನ್ನು ನಡೆಸಿ ಯಶಸ್ವಿಯಾಗಿದೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಗಡಿ ನಿಯಂತ್ರಣ ರೇಖೆಯನ್ನು ದಾಟಿ ಭಯೋತ್ಪಾದಕರ ನೆಲೆಗಳನ್ನು ಧ್ವಂಸಗೊಳಿಸಲಾಗಿದೆ. ಭಾರತದ ಉರಿ ಸೇನಾ ನೆಲೆ ಮೇಲೆ ಭಯೋತ್ಪಾದಕರು ದಾಳಿ ನಡೆಸಿ 18 ಸೈನಿಕರನ್ನು ಕೊಂದಿದಕ್ಕೆ ಪ್ರತ್ಯುತ್ತರವಾಗಿ ಭಾರತ ಸೇನೆ ಸರ್ಜಿಕಲ್ ಕಾರ್ಯಾಚರಣೆ ನಡೆಸಿದೆ.

**ಸರ್ಜಿಕಲ್ ಕಾರ್ಯಾಚರಣೆ ಅಥವಾ ಆಪರೇಷನ್ ಎಂದರೇನು**?

ಸರ್ಜಿಕಲ್ ಆಪರೇಷನ್ ಇದು ತುಂಬಾ ನಾಜೂಕಿನಿಂದ ಮಾಡುವ ಆಪರೇಷನ್ ಆಗಿದ್ದು ತುಂಬಾ ವಿರಳ ಸಂದರ್ಭದಲ್ಲಿ ಮಾತ್ರ ಈ ರೀತಿಯ ದಾಳಿಯನ್ನು ಮಾಡಲಾಗುವುದು. ದೇಶದ ಮೇಲೆ ಭಯೋತ್ಪಾದಕರು ದಾಳಿ ನಡೆಸಿ ಜನರನ್ನು ಒತ್ತೆಯಾಗಿ ಇಟ್ಟುಕೊಂಡಾಗ ಸಾಮಾನ್ಯ ಜನರನ್ನು ಬಿಡುಗಡೆ ಮಾಡಲು ಬಹಳ ಗುಪ್ತವಾಗಿ ಸೇನೆ ಸರ್ಜಿಕಲ್ ಆಪರೇಷನ್ ನಡೆಸುತ್ತದೆ. ಇಂತಹ ಕಾರ್ಯಾಚರಣೆ ನಡೆಸುವ ಮುನ್ನ ಗುಪ್ತಚರ ಮಾಹಿತಿಯನ್ನು ವ್ಯಾಪಕವಾಗಿ ಕಲೆ ಹಾಕಲಾಗುತ್ತದೆ. ವಿರೋಧಿ ದೇಶದಲ್ಲಿ ನಡೆಸಬೇಕಾದ ಕಾರ್ಯಾಚರಣೆಯಾಗಿರುವುದರಿಂದ ಅದು ಅಲ್ಪ ಕಾಲಾವಧಿಯಲ್ಲಿ ಮುಗಿದುಹೋಗುವಂತೆ ಹಾಗೂ ಅದರ ಪರಿಣಾಮ ದೀರ್ಘಾವಧಿಯಲ್ಲಿ ಉಳಿದುಕೊಳ್ಳುವಂತೆ ಯೋಜನೆ ರೂಪಿಸಲಾಗುತ್ತದೆ. ಇಂಥ ಕಾರ್ಯಾಚರಣೆಗೆ ಇಸ್ರೇಲ್ ಸೇನೆ ಹೆಸರುವಾಸಿ. ನೈಜೀರಿಯಾಗೆ ನುಗ್ಗಿದ ಇಸ್ರೇಲ್ ಸೇನೆ ತನ್ನ ಒತ್ತೆ ನಾಗರಿಕರನ್ನು ವಾಪಸ್ ಕರೆತಂದಿದ್ದು, ಭಾರತ ಸೇನೆ ಈಚೆಗೆ ಬರ್ಮಾ ಗಡಿಗೆ ನುಗ್ಗಿ ಭಯೋತ್ಪಾದಕರನ್ನು ಕೊಂದಿದ್ದು ಸರ್ಜಿಕಲ್ ಆಪರೇಷನ್‌ಗೆ ಉತ್ತಮ ಉದಾಹರಣೆ. ಸರ್ಜಿಕಲ್ ಅಥವಾ ಪ್ರಿಸಿಷನ್ ಕಾರ್ಯಾಚಾರಣೆಯು ಒಂದು ದೇಶದ ಮಿಲಿಟರಿ ಬಲ, ರಾಜಕೀಯ ಇಚ್ಛಾಶಕ್ತಿ ಮತ್ತು ನಾಯಕರ ಬುದ್ಧಿವಂತಿಕೆ ತೋರುವ ಟ್ಯಾಕ್ಟಿಕಲ್ ಯುದ್ಧತಂತ್ರವೂ ಹೌದು.

## ಖ್ಯಾತ ಮಣಿಪುರಿ ರಂಗಭೂಮಿ ಕಲಾವಿದ ಹಿಸ್ನಮ್ ಕನ್ಹೈಲಾಲ್ (Heisnam Kanhailal) ನಿಧನ

ಮಣಿಪುರಿ ರಂಗಭೂಮಿ ಕಲಾವಿದ ಹಿಸ್ನಮ್ ಕನ್ಹೈಲಾಲ್ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ನಾಟಕ ಬರಹಗಾರರಾಗಿ, ನಿರ್ದೇಶಕರಾಗಿ ಮತ್ತು ನಟನಾಗಿ ಸುಮಾರು 40 ವರ್ಷಗಳ ಕಾಲ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

**ಹಿಸ್ನಮ್ ಕನ್ಹೈಲಾಲ್ ಬಗ್ಗೆ**:

- ಮಣಿಪುರದ ಇಂಪಾಲ್ ಸಮೀಪದ ಹಳ್ಳಿಯಲ್ಲಿ 17ನೇ ಜನವರಿ 1947ರಲ್ಲಿ ಜನಿಸಿದರು.
- ಕನ್ಹೈಲಾಲ್ ಮಣಿಪುರದ ರಂಗಭೂಮಿ ಪ್ರಯೋಗಾಲಯ "ಕಲಾಕ್ಷೇತ್ರ"ದ ಸಂಸ್ಥಾಪಕ ನಿರ್ದೇಶಕರು.
- ಮಣಿಪುರಿ ಜಾನಪದ ಶೈಲಿಯಲ್ಲಿನ ಅವರ ರಾಜಕೀಯ ನಾಟಕ "ಪೆಬೆಟ್" ಅವರಿಗೆ ಸಾಕಷ್ಟು ಮನ್ನಣೆ ತಂದುಕೊಟ್ಟಿತ್ತು.

**ಪ್ರಶಸ್ತಿ:**

- 1985 ರಲ್ಲಿ ರಂಗಭೂಮಿಗೆ ನೀಡುವ ಮಣಿಪುರಿ ರಾಜ್ಯ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ.
- ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್ (2011).
- META ಜೀವಮಾನ ಸಾಧನೆ ಪ್ರಶಸ್ತಿ (2015)
- ಪದ್ಮಶ್ರೀ ಪ್ರಶಸ್ತಿ (2004) ಮತ್ತು ಪದ್ಮಭೂಷಣ (2016).

## ಹಿರಿಯ ಕಲಾವಿದ ಯೂಸಫ್ ಅರಕ್ಕಲ್ ವಿಧಿವಶ

karunaduexams.com

ದೇಶದ ನವ್ಯ ಕಲಾವಿದರ ಸಾಲಿನಲ್ಲಿ ಅಗ್ರಪಂಕ್ತಿಯ ಕಲಾವಿದರಾಗಿದ್ದ ಹಿರಿಯ ಚಿತ್ರ ಕಲಾವಿದ ಯೂಸುಫ್ ಅರಕ್ಕಲ್ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಅವರಿಗೆ 71 ವರ್ಷ ವಯಸ್ಸಾಗಿತ್ತು. ಕಳೆದ ಕೆಲ ತಿಂಗಳುಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

- ಕೇರಳದ ಚವಕ್ಕಾಡ್ ಮೂಲದವರಾದರೂ ಯೂಸುಫ್ ಅವರು ಬೆಂಗಳೂರಿನ ಚಿತ್ರಕಲಾ ಪರಿಷತ್ ನಲ್ಲಿ ವಿದ್ಯಾಭ್ಯಾಸ ಮಾಡಿ, ಬೆಂಗಳೂರಿನಲ್ಲೇ ತಮ್ಮ ವೃತ್ತಿ ಬದುಕು ಕಂಡುಕೊಂಡು ಅಂತಾರಾಷ್ಟ್ರೀಯ ಮಟ್ಟಕ್ಕೇರಿದರು.
- ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಚಿತ್ರಕಲಾ ಡಿಪ್ಲೋಮಾ ಮುಗಿಸಿದ ಬಳಿಕ ಮುದ್ರಣ ಕಲೆಯಲ್ಲಿ ವಿಶೇಷವಾದ ತರಬೇತಿ ಪಡೆದರು. ನಂತರ ದೆಹಲಿಯ ರಾಷ್ಟ್ರೀಯ ಅಕಾಡೆಮಿ ಕಮ್ಯೂನಿಟಿ ಸ್ಟುಡಿಯೋದಲ್ಲಿ ಮುದ್ರಣ ಕಲೆಯ ವಿಶೇಷ ಅಧ್ಯಯನ ಮಾಡಿದರು.
- ರೇಖಾಚಿತ್ರ, ವರ್ಣಚಿತ್ರ, ಶಿಲ್ಪ, ಮ್ಯೂರಲ್, ಮುದ್ರಣ ಕಲೆ ಮತ್ತು ತಮ್ಮದೇ ಶೈಲಿಯ ಛಾಪು ಮೂಡಿಸಿದ್ದರು.

**ಪ್ರಶಸ್ತಿಗಳು:**

- ಯೂಸುಫ್ ಅವರಿಗೆ ಎರಡು ಬಾರಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ.
- 1983ರಲ್ಲಿ ರಾಷ್ಟ್ರೀಯ ಪ್ರಶಸ್ತಿ, 1986ರಲ್ಲಿ ಢಾಕಾದಲ್ಲಿ ನಡೆದ ಬಿಯೆನ್ನಾಲೆ ಪ್ರದರ್ಶನದಲ್ಲಿ ವಿಶೇಷ ಪ್ರಶಸ್ತಿ ಲಭಿಸಿತ್ತು.
- ಫ್ಲಾರೆನ್ಸ್ ಬಿಯನ್ನಾಲೆಯ ಪ್ರತಿಷ್ಠಿತ ಲಾರೆನ್ಜೋ ಡೆ ಮೆಡಿಸಿ ಸ್ವರ್ಣ ಪದಕ ಗೌರವ ಪಡೆದರು.

**<u>ಥಾಯ್ಲೆಂಡ್‌ನ ದೊರೆ ಭೂಮಿಬೋಲ್ ಅದುಲ್ಯದೇಜ್ ನಿಧನ</u>**

ಸತತ 70 ವರ್ಷಗಳ ಆಡಳಿತ ನಡೆಸಿದ್ದ ಥಾಯ್ಲೆಂಡ್‌ನ ದೊರೆ ಭೂಮಿಬೋಲ್ ಅದುಲ್ಯದೇಜ್ ನಿಧನರಾಗಿದ್ದಾರೆ. ಅವರಿಗೆ 88 ವರ್ಷ ವಯಸ್ಸಾಗಿತ್ತು. ಭೂಮಿಬೋಲ್ ಜಗತ್ತಿನಲ್ಲಿ ಸುದೀರ್ಘ ಆಡಳಿತ ನಡೆಸಿದ ರಾಜನೆಂಬ ಖ್ಯಾತಿ ಹೊಂದಿದ್ದರು. ಕಳೆದ 2 ವರ್ಷಗಳಿಂದ ಅವರು ಬಹು ಸಮಯ ಆಸ್ಪತ್ರೆಯಲ್ಲಿಯೇ ಕಳೆದಿದ್ದರು.

- ಥಾಯ್ಲೆಂಡ್ ಜನತೆಯಿಂದ ದೇವಮಾನವ ಎಂದೇ ಕರೆಯಲ್ಪಡುತ್ತಿದ್ದ ಅವರು ಚಕ್ರಿ ಸಾಮ್ರಾಜ್ಯದ 9ನೇ ಸಾಮ್ರಾಟರಾಗಿದ್ದರು. ಅಣ್ಣನ ಸಾವಿನ ನಂತರ 1946ರಲ್ಲಿ ಪಟ್ಟಕ್ಕೇರಿದ್ದ ಅವರಿಗೆ 'ರಾಮ 9' ಎಂದೂ ಕರೆಯಲಾಗುತ್ತಿತ್ತು.
- 63 ವರ್ಷದ ಯುವರಾಜ ಮಹಾ ವಾಚಿರಾಲೋನ್‌ಕೊನ್ ಮುಂದಿನ ದೊರೆಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಪ್ರಧಾನಿ ಪ್ರಯುತ್ ಚಾನ್-ಓಚಾ ತಿಳಿಸಿದ್ದಾರೆ.
- 2014ರ ನಂತರದ ಘರ್ಷಣೆ ಬಳಿಕ ಜಾರಿಯಲ್ಲಿರುವ ಮಿಲಿಟರಿ ಆಡಳಿತ ದೊರೆಯ ನಿಧನದ ನಂತರವೂ ಮುಂದುವರಿಯಲಿದೆ.'

**<u>ತ್ರಿವಳಿ ತಲಾಖ್: ಅತಿ ಹೆಚ್ಚಾಗಿ ದುರ್ಬಳಕೆ ಮಾಡಿಕೊಂಡಿರುವ ಪದ್ಧತಿ</u>**

ಇಸ್ಲಾಂ ಧರ್ಮದಲ್ಲಿ ಆಚರಣೆಯಲ್ಲಿರುವ ತ್ರಿವಳಿ ತಲಾಖ್ ಹೆಚ್ಚಾಗಿ ದುರ್ಬಳಕೆ ಮಾಡಿಕೊಂಡಿರುವ ಸಂಪ್ರದಾಯವಾಗಿದ್ದು, ಮುಸ್ಲಿಂ ಮಹಿಳೆಯರನ್ನು ರಕ್ಷಿಸಲು ಸರ್ಕಾರ ಈ ಪದ್ಧತಿಯನ್ನು ನಿಷೇಧಿಸಬೇಕು ಎಂದು ರಾಷ್ಟ್ರೀಯ ಮಹಿಳಾ ಆಯೋಗ ಹೇಳಿದೆ. ಮುಸ್ಲಿಂ ಮಹಿಳೆಯರ ಹಕ್ಕುಗಳನ್ನು ತ್ರಿವಳಿ ತಲಾಖ್ ನಿಂದ ರಕ್ಷಿಸಲು ಸರ್ಕಾರ ಮುಂದಾಗಬೇಕಿದ್ದು, ತ್ರಿವಳಿ ತಲಾಖ್ ಮತ್ತು ಏಕರೂಪ ನಾಗರಿಕ ಸಂಹಿತೆಯನ್ನು ಒಂದಾಗಿ ನೋಡುವ ಅಗತ್ಯವಿಲ್ಲವೆಂದು ಆಯೋಗ ಸ್ಪಷ್ಟಪಡಿಸಿದೆ.

**ತ್ರಿವಳಿ ತಲಾಖ್ ಎಂದರೇನು?**

- ತಲಾಖ್ ಎಂದರೆ ಮುಸ್ಲಿಂ ದಂಪತಿಗಳು ವಿಚ್ಛೇದನ ನೀಡಲು ಅನುಸರಿಸುವ ವಿಧಾನ. ಈ ವಿಧಾನದಡಿ ಮುಸ್ಲಿಂ ಪತಿಯು ಮೂರು ಬಾರಿ ತಲಾಖ್ ಎಂದು ಹೇಳುವ ಮೂಲಕ ತನ್ನ ಸತಿಗೆ ವಿಚ್ಛೇದನ ನೀಡಬಹುದು.

**ತ್ರಿವಳಿ ತಲಾಖ್ ನಿಷೇಧವೇಕೆ?**

- 'ತ್ರಿವಳಿ ತಲಾಖ್' ಅಭ್ಯಾಸ ಸುಲಭವಾಗಿ ಮತ್ತು ನಿರಂಕುಶವಾಗಿ ಅವರ ಹೆಂಡತಿಯರಿಗೆ ವಿಚ್ಛೇದನವನ್ನು ನೀಡಲು ಗಂಡಂದಿರುಗೆ ನೆರವಾಗಿದೆ ಎನ್ನಲಾಗಿದೆ. ಇದು ಮಹಿಳೆಯರ ಘನತೆ ಮತ್ತು ಜೀವನ ಹಕ್ಕಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. 'ತ್ರಿವಳಿ ತಲಾಖ್' ಪಾಕಿಸ್ತಾನ ಸೇರಿದಂತೆ 21 ಇಸ್ಲಾಮಿಕ್ ದೇವಪ್ರಭುತ್ವಾತ್ಮಕ ದೇಶಗಳಲ್ಲಿ ರದ್ದುಪಡಿಸಲಾಗಿದೆ. ಇದು ಲಿಂಗ ಸಮಾನತೆ, ಜಾತ್ಯತೀತತೆ, ಅಂತರರಾಷ್ಟ್ರೀಯ ಕಾನೂನುಗಳನ್ನು ಇತ್ಯಾದಿ ಸಂವಿಧಾನಾತ್ಮಕ ತತ್ವಗಳಿಗೂ ವಿರುದ್ಧವಾಗಿದೆ ಎನ್ನಲಾದ ಕಾರಣ ನಿಷೇಧಿಸಲು ಒತ್ತಡ ಹೆಚ್ಚಿದೆ.

**ಸರ್ಕಾರದ ನಿಲುವೇನು?**

ಇತ್ತೀಚೆಗೆ ಕೇಂದ್ರಸರ್ಕಾರ ತ್ರಿವಳಿ ತಲಾಖ್ ಪದ್ಧತಿಯ ವಿರುದ್ಧ ಸುಪ್ರೀಂ ಕೋರ್ಟ್ ಗೆ ಪ್ರತಿಕ್ರಿಯೆ ನೀಡಿದ್ದು ತ್ರಿವಳಿ ತಲಾಖ್ ಪದ್ಧತಿಯನ್ನು ಖಂಡಿಸಿದೆ. ತ್ರಿವಳಿ ತಲಾಖ್ ಮುಸ್ಲಿಂ ಧರ್ಮದ ಭಾಗವಲ್ಲ ಮತ್ತು ಈ ಪದ್ದತಿ ಸಂವಿಧಾನ ಅಂಶಗಳಿಗೆ ವಿರುದ್ದವಾಗಿದೆ ಎಂದು ಅಫಿಡೇವಿಟ್ ಸಲ್ಲಿಸಿದೆ.

**ಕೌಶಲ್ಯ ಸೇತು (KAUSHALYA SETU) ಕೌಶಲ್ಯ ಅಭಿವೃದ್ಧಿ ಯೋಜನೆ ಜಾರಿಗೊಳಿಸಿದ ಮಹಾರಾಷ್ಟ್ರ**

ವಿದ್ಯಾರ್ಥಿಗಳಲ್ಲಿ ಕೌಶಲ್ಯ ಹೆಚ್ಚಿಸುವ ಸಲುವಾಗಿ ಮಹಾರಾಷ್ಟ್ರ ಸರ್ಕಾರ ಕೌಶಲ್ಯ ಸೇತು ಯೋಜನೆಯನ್ನು ಜಾರಿಗೆ ತಂದಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನಾವಿಸ್ ಮತ್ತು ಕೌಶಲ್ಯ ಅಭಿವೃದ್ಧಿ ಹಾಗೂ ಉದ್ಯಮ ಖಾತೆ ರಾಜ್ಯ ಸಚಿವ ರಾಜೀವ್ ಪ್ರತಾಪ್ ರುಡಿ ಅವರು ಈ ಯೋಜನೆಗೆ ಚಾಲನೆ ನೀಡಿದರು.

- 10ನೇ ತರಗತಿ ಅಥವಾ ಎಸ್‌ಎಸ್ಸಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ಕೋರ್ಸುಗಳ ಮೂಲಕ ತರಬೇತಿ ನೀಡಲಾಗುವುದು.
- ಕೇಂದ್ರ ಸರ್ಕಾರ ಸ್ಕಿಲ್ ಇಂಡಿಯಾ 2020 ಅಭಿಯಾನಕ್ಕೆ ಈ ಯೋಜನೆ ಪೂರಕವಾಗಲಿದೆ.

**ಎವರೆಸ್ಟ್ ಹತ್ತಿದ ಮೊದಲ ಮಹಿಳೆ ಜಪಾನಿನ "ಜುನ್ಕೊ ಟಬೈ" ನಿಧನ**

ವಿಶ್ವದ ಅತಿ ಎತ್ತರದ ಪರ್ವತ ಮೌಂಟ್ ಎವರೆಸ್ಟ್ ಏರಿದ ಮೊದಲ ಮಹಿಳೆ, ಜಪಾನಿನ ಪರ್ವತಾರೋಹಿ ಜುನ್ಕೊ ಟಬೈ (77) ನಿಧನ ಹೊಂದಿದರು. ಮೂಲತಃ ಫುಕುಶಿಮಾದವರಾಗಿದ್ದ ಅವರು ಕಳೆದ 4 ವರ್ಷಗಳಿಂದ ಅವರು ಉದರ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು.

- ಟಬೈ ಅವರು ಎವರೆಸ್ಟನ್ನು 1975ರಲ್ಲಿ ಹತ್ತಿದ್ದರು. ಆಗ ಅವರಿಗೆ 35 ವರ್ಷ ವಯಸ್ಸಾಗಿತ್ತು. ಎವರೆಸ್ಟ್ ಏರಲು 12 ದಿನ ತೆಗೆದುಕೊಂಡಿದ್ದರು. ಆ ವೇಳೆ ಹಿಮಪಾತದಲ್ಲಿ ಸಿಲುಕಿಕೊಂಡಿದ್ದರು. ಅದರಿಂದ ಹೊರಬಂದು ಪರ್ವತಾರೋಹಣವನ್ನು ಮುಂದುವರಿಸಿದ್ದರು.
- 1992ರ ವೇಳೆಗೆ ವಿಶ್ವದ ಎಲ್ಲಾ 7 ಎತ್ತರದ ಶಿಖರಗಳನ್ನು ಏರಿದ ಸಾಧನೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ.
- ಟಬೈ ಎವರೆಸ್ಟ್ ಏರಿದ ವಿಶ್ವದ ಮೊದಲ ಮಹಿಳೆಯಾಗಿದ್ದರೆ.
- ಎವರೆಸ್ಟ್ ಶಿಖರ ಏರಿದ ಮೊದಲ ಭಾರತೀಯ ಮಹಿಳೆ ಬಚೇಂದ್ರಿಪಾಲ್. 1984ರಲ್ಲಿ ಪಾಲ್ ಪರ್ವತಾರೋಹಣ ಮಾಡಿದ್ದರು.

www.karunaduexams.com

## ಮಹಿಳಾ ಸಾಕ್ಷರತೆ: ನೆರೆಯ ರಾಷ್ಟ್ರಗಳಿಗಿಂತ ಕಳಪೆ ಸಾಧನೆ ತೋರಿದ ಭಾರತ

ಹೊಸ ಅಧ್ಯಯನ ಒಂದರ ಪ್ರಕಾರ ಭಾರತದ ಮಹಿಳಾ ಸಾಕ್ಷರತೆ ಗುಣಮಟ್ಟ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಬಾಂಗ್ಲದೇಶ ಮತ್ತು ನೇಪಾಳಕ್ಕೆ ಹೋಲಿಸಿದರೆ ಕಳಪೆ ಎಂದು ಹೇಳಲಾಗಿದೆ. ಇಂಟರ್ನ್ಯಾಶಲ್ ಕಮೀಷನ್ ಆನ್ ಫೈನಾನ್ಸಿಂಗ್ ಗ್ಲೋಬಲ್ ಎಜುಕೇಷನ್ ಅಪರ್ಚುನಿಟಿ (International Commission on Financing Global Education Opportunity) ನಡೆಸಿದ ಅಧ್ಯಯನದಲ್ಲಿ ಈ ವಿಷಯ ಬೆಳಕಿಗೆ ಬಂದಿದೆ.

**ಪ್ರಮುಖಾಂಶಗಳು:**

- ಭಾರತದಲ್ಲಿ ಐದು ವರ್ಷ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ಮಹಿಳೆಯರ ಪ್ರಮಾಣ ಶೇ 48% ಇದೆ. ಅದೇ ಈ ಪ್ರಮಾಣ ನೇಪಾಳದಲ್ಲಿ ಶೇ 92%, ಪಾಕಿಸ್ತಾನದಲ್ಲಿ ಶೇ 74% ಮತ್ತು ಬಾಂಗ್ಲದೇಶದಲ್ಲಿ ಶೇ 54% ರಷ್ಟಿದೆ.
- ಭಾರತದಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣ ಎರಡು ವರ್ಷಗಳ ಶಾಲೆ ಮುಗಿಸಿದ ನಂತರ ಶೇ 1% ರಿಂದ 15% ಏರಿಕೆ ಕಂಡಿದೆ. ನೇಪಾಳ ಮತ್ತು ಪಾಕಿಸ್ತಾನದಲ್ಲಿ ಈ ಪ್ರಮಾಣ ಕ್ರಮವಾಗಿ ಶೇ 3-11% ಮತ್ತು 11-47% ಏರಿಕೆಯಾಗಿದೆ.
- ಜಾಗತಿಕ ಮಹಿಳಾ ಸಾಕ್ಷರತೆ ಸೂಚ್ಯಂಕದಲ್ಲಿ ಭಾರತ ತೀರಾ ಹಿಂದೆ ಉಳಿದಿದೆ. ಆಫ್ರಿಕಾದ ರಾಷ್ಟ್ರಗಳಾದ ರವಾಂಡ, ಇಥೋಪಿಯಾ ಮತ್ತು ತಾಂಝಾನಿಯಾ ರಾಷ್ಟ್ರಗಳು ಭಾರತಕ್ಕಿಂತ ಉನ್ನತ ಸ್ಥಾನದಲ್ಲಿವೆ.
- ಅಭಿವೃದ್ಧಿ ಹೊಂದುತ್ತಿರುವ 51 ರಾಷ್ಟ್ರಗಳ ಪೈಕಿ ಮಹಿಳಾ ಸಾಕ್ಷರತೆಯಲ್ಲಿ ಭಾರತ 38ನೇ ಸ್ಥಾನ ಪಡೆದಿದೆ.

## ಕನ್ನಡ ಪತ್ರಿಕೋದ್ಯಮದ ಹಿರಿಯ ಪತ್ರಕರ್ತ ಎಂ. ಬಿ. ಸಿಂಗ್ ನಿಧನ

ರಾಜ್ಯ ಹಿರಿಯ ಪತ್ರಕರ್ತ ಎಂ.ಬಿ. ಸಿಂಗ್ ಅವರು ನಿಧನರಾಗಿದ್ದಾರೆ. ಅವರಿಗೆ 91 ವರ್ಷ ವಯಸ್ಸಾಗಿತ್ತು.

**ಎಂ.ಬಿ.ಸಿಂಗ್ ಬಗ್ಗೆ:**

- 1925ರ ಮೇ 24ರಂದು ಮೈಸೂರಿನಲ್ಲಿ ಜನಿಸಿದ ಎಂ.ಬಿ.ಸಿಂಗ್ ಅವರು, ಮಂಡ್ಯ ಹಾಗೂ ಮೈಸೂರಿನಲ್ಲಿ ಉನ್ನತ ಶಿಕ್ಷಣವನ್ನು ಪೂರೈಸಿದ್ದರು.
- 1953ರಲ್ಲಿ ಪ್ರಜಾವಾಣಿ ಬಳಗ ಸೇರಿದ ಸಿಂಗ್, ಪ್ರಜಾವಾಣಿ, ಸುಧಾ, ಮಯೂರ ಪತ್ರಿಕೆಗಳ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದರು.
- ಸಿಂಗ್ ಅವರಿಗೆ ಮಾಧ್ಯಮ ಕ್ಷೇತ್ರದ ಸೇವೆಗೆ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ', ಕರ್ನಾಟಕ ಮಾಧ್ಯಮ ಅಕಾಡಮಿ ಪ್ರಶಸ್ತಿ, ಖಾದ್ರಿ ಶಾಮಣ್ಣ ಪ್ರಶಸ್ತಿಗಳು ಬಂದಿವೆ.

## ಗೋವಾದ ಪ್ರಥಮ ಮಹಿಳಾ ಮುಖ್ಯಮಂತ್ರಿ ಶಶಿಕಲಾ ಕಾಕೋಡ್ಕರ್ ನಿಧನ

ಗೋವಾದ ಪ್ರಥಮ ಮಹಿಳಾ ಮುಖ್ಯಮಂತ್ರಿ ಶಶಿಕಲಾ ಕಾಕೋಡ್ಕರ್ (81) ಅವರು ದೀರ್ಘ ಕಾಲದ ಅನಾರೋಗ್ಯದಿಂದ ನಿಧನರಾದರು. ಶಶಿಕಲಾ ನಿಧನದ ಹಿನ್ನಲೆಯಲ್ಲಿ ಗೋವಾ ಸರ್ಕಾರ ಎರಡು ದಿನಗಳ ಶೋಕ ಪ್ರಕಟಿಸಿದೆ. ಸರ್ಕಾರಿ ಕಚೇರಿಗಳಿಗೆ ಶುಕ್ರವಾರ ರಜೆ ನೀಡಲಾಗಿತ್ತು.

- ಶಶಿಕಲಾ ಅವರು ಗೋವಾದ ಮಾಜಿ ಮುಖ್ಯಮಂತ್ರಿ ದಿವಂಗತ ದಯಾನಂದ ಬಾಂದೋಡ್ಕರ್ ಅವರ ಪುತ್ರಿ. ದಯಾನಂದ ಅವರು ಅಧಿಕಾರದಲ್ಲಿದ್ದಾಗಲೇ 1973ರಲ್ಲಿ ನಿಧನರಾಗಿದ್ದರು.
- ಆ ಬಳಿಕ ಶಶಿಕಲಾ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರು. 1979ರಲ್ಲಿ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು ಒಡೆದ ಬಳಿಕ ಪದಚ್ಯುತಗೊಂಡಿದ್ದರು.

www.karunaduexams.com